ಸೋಮವಾರ, ಡಿಸೆಂಬರ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 342 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಸಂಖ್ಯೆ–ಸುದ್ದಿ: ಡ್ರಗ್ಸ್ ಕಳ್ಳಸಾಗಣೆ ಹೆಚ್ಚುತ್ತಿದೆ ಎಚ್ಚರ
ಮ್ಯಾಂಡಸ್: ಹಲವೆಡೆ ಜಿಟಿ ಜಿಟಿ ಮಳೆ 5
ನ್ಯಾಯಮೂರ್ತಿ ನೇಮಕ: ಪಾಲಿಸದ ಕಾಲಮಿತಿ 7
ಇಂದು ಶಿಕ್ಷಣ 6
ಮಹಿಳೆಯರು, ಮಕ್ಕಳೇ ಗುರಿ: ಸುಪ್ರೀಂಗೆ ಮಾಹಿತಿ
‘ವಿದೇಶಿ ದೇಣಿಗೆ ಮತಾಂತರಕ್ಕೆ’ 10

ಅನುದಾನದ ಕೊರತೆ, ಭೂಸ್ವಾಧೀನ ಸಮಸ್ಯೆ, ಗುತ್ತಿಗೆದಾರರ ವಿಳಂಬ ಧೋರಣೆ

ತೆವಳುತ್ತಿವೆ ಹೆದ್ದಾರಿಗಳ ಕಾಮಗಾರಿ

• ಮಂಜುನಾಥ ಹೆಬ್ಬಾರ್

–ಸಾಂದರ್ಭಿಕ ಚಿತ್ರ

ಪ್ರಜಾವಾಣಿ ವಿಶೇಷ

ನವದೆಹಲಿ: ಅನುದಾನದ ಕೊರತೆ, ಭೂಸ್ವಾಧೀನ ಸಮಸ್ಯೆ, ಸಮನ್ವಯ ಕೊರತೆ ಹಾಗೂ ಗುತ್ತಿಗೆದಾರರ ವಿಳಂಬ ಧೋರಣೆಯಿಂದಾಗಿ ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ತೆವಳುತ್ತಾ ಸಾಗಿವೆ.

ಕೇಂದ್ರ ಭೂಸಾರಿಗೆ ಸಚಿವಾಲಯವು ರಾಜ್ಯದಲ್ಲಿ 107 ಹೆದ್ದಾರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಇದರಲ್ಲಿ 60 ಕಾಮಗಾರಿಗಳ ಗಡುವು ಈಗಾಗಲೇ ಮುಗಿದಿದೆ. ಕೆಲವು ಕಾಮಗಾರಿಗಳ ಗಡುವು ಮುಗಿದು ಮೂರು–ನಾಲ್ಕು ವರ್ಷಗಳೇ ಕಳೆದಿವೆ. ಆದರೂ, ಅವುಗಳ ಕಾಮಗಾರಿ ಶೇ 50 ರಷ್ಟು ಪೂರ್ಣಗೊಂಡಿಲ್ಲ. ಹಲವು ಕಾಮಗಾರಿಗಳಿಗೆ ಸಂಪೂರ್ಣ ಅನುದಾನ ಹಂಚಿಕೆ ಮಾಡಿದ್ದರೂ ಬಳಕೆ ಮಾಡಿದ್ದು ಶೇ 10ರಿಂದ 20ರಷ್ಟು. ರಾಜ್ಯದ ಹೆದ್ದಾರಿ ಕಾಮಗಾರಿಗಳ ಪ್ರಗತಿ ಬಗ್ಗೆ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ. ಈ ಉತ್ತರವು ಕಾಮಗಾರಿಗಳ ವಾಸ್ತವ ಸ್ಥಿತಿಯನ್ನು ಬಿಚ್ಚಿಟ್ಟಿದೆ.

ಉಡುಪಿ ಜಿಲ್ಲೆಯ ಕುಂದಾಪುರದಿಂದ ಉತ್ತರ ಕನ್ನಡದ ಮೂಲಕ ಗೋವಾಕ್ಕೆ ಸಂಪರ್ಕ ಬೆಸೆಯುವ 187 ಕಿ.ಮೀ. ಉದ್ದದ ಕಾಮಗಾರಿಗೆ 2014ರ ಮಾರ್ಚ್‌ನಲ್ಲಿ ಚಾಲನೆ ನೀಡಲಾಗಿತ್ತು. ವಿನ್ಯಾಸ, ನಿರ್ಮಾಣ, ಹಣಕಾಸು ನೆರವು, ನಿರ್ವಹಣೆ, ವರ್ಗಾವಣೆ’ ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ₹557 ಕೋಟಿ ವೆಚ್ಚದ ಈ ಕಾಮಗಾರಿ 2016ರ ಆಗಸ್ಟ್‌ನಲ್ಲಿ ಪೂರ್ಣಗೊಳ್ಳಬೇಕಿತ್ತು. ಬಳಿಕ ಹಲವು ಗಡುವುಗಳನ್ನು ವಿಧಿಸಲಾಗಿತ್ತು. ಈ ವರ್ಷದ ಡಿಸೆಂಬರ್‌ನಲ್ಲಿ ಕಾಮಗಾರಿ ಮುಗಿಯಲಿದೆ ಎಂದು ನಿತಿನ್ ಗಡ್ಕರಿ ಅವರು ಜುಲೈ ತಿಂಗಳಲ್ಲಿ ಟ್ವೀಟ್ ಮಾಡಿದ್ದರು. ಇಲಾಖೆಯಿಂದ ಇಲ್ಲಿಯವರೆಗೆ ₹536 ಕೋಟಿ ವೆಚ್ಚ ಮಾಡಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಕಾಮಗಾರಿ ಮುಗಿಯುವುದು ಅನುಮಾನ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

₹575 ಕೋಟಿ ವೆಚ್ಚದ ಹಾಸನ–ಮಾರನಹಳ್ಳಿ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್ 75) ಚತುಷ್ಪಥ ಕಾಮಗಾರಿಯ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

5ನೇ ಪುಟ ನೋಡಿ

ಕೆಲವು ಹೆದ್ದಾರಿ ಕಾಮಗಾರಿಗಳ ಸ್ಥಿತಿಗತಿ

ಯೋಜನೆ	ಉದ್ದ (ಕಿ.ಮೀ)	ಕಾಮಗಾರಿ ಆರಂಭ	ಗಡುವು	ಮೊತ್ತ ಹಂಚಿಕೆ (₹ಕೋಟಿಗಳಲ್ಲಿ)	ಇಲ್ಲಿಯವರೆಗೆ ವೆಚ್ಚ (₹ಕೋಟಿಗಳಲ್ಲಿ)
ತುಮಕೂರಿನ ಮಲ್ಲಸಂದ್ರದಿಂದ ಬಾಣಾವರ	108	2019ರ ಅಕ್ಟೋಬರ್	2 ವರ್ಷ	2135	744
ಶಿರಸಿ–ಬೇಲಕೇರಿ ಬಂದರು	59	2020ರ ಡಿಸೆಂಬರ್	2 ವರ್ಷ	360	45
ಬೆಟ್ಟದಹಳ್ಳಿ–ಶ್ರೀರಾಮಪುರ	50	2020ರ ಅಕ್ಟೋಬರ್	1 ವರ್ಷ	1382	130
ದಾವಣಗೆರೆ–ಹಾವೇರಿ ಆರು ಪಥ	78	2018ರ ಜನವರಿ	ಎರಡೂವರೆ ವರ್ಷ	1177	490
ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ	71	2021ರ ಸೆಪ್ಟೆಂಬರ್	2 ವರ್ಷ	3302	612
ಬಳ್ಳಾರಿ–ಬೈರಾಪುರ	54	2019ರ ಅಕ್ಟೋಬರ್	2 ವರ್ಷ	1313	468

‘ದಶಪಥ ಎರಡು ತಿಂಗಳಲ್ಲಿ ಪೂರ್ಣ’

ಮೈಸೂರು–ಬೆಂಗಳೂರು ದಶಪಥ ಕಾಮಗಾರಿ 2023ರ ಫೆಬ್ರುವರಿಯಲ್ಲಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ. ನಿಡಘಟ್ಟ–ಬೆಂಗಳೂರು ನಡುವಿನ 56 ಕಿ.ಮೀ. ಉದ್ದದ ಪ್ಯಾಕೇಜ್ 1 ಕಾಮಗಾರಿ ಈ ತಿಂಗಳ ಅಂತ್ಯದೊಳಗೆ ಮುಗಿಯಲಿದೆ. ಮೈಸೂರು–ನಿಡಘಟ್ಟ ನಡುವಿನ 61 ಕಿ.ಮೀ. ಉದ್ದದ ಪ್ಯಾಕೇಜ್ 2 ಕಾಮಗಾರಿ ಫೆಬ್ರುವರಿ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅನಿರ್ದಿಷ್ಟ ಉಪವಾಸ ವಿಫಲ: ಶರ್ಮಿಳಾ ಆಸ್ಪತ್ರೆಗೆ ದಾಖಲು 7
ನೇಮಕಾತಿ ಅಕ್ರಮ ತಡೆಗೆ ಸೂಚನೆ 5

ಒಳ ಮೀಸಲಾತಿಗೆ ಪಟ್ಟು: ಹಲವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಿದ ಬೆನ್ನಲ್ಲೇ ಒಳ ಮೀಸಲಾತಿ ಕೂಗು ಜೋರಾಗಿದೆ. ಹರಿಹರದಿಂದ ಕಾಲ್ನಡಿಗೆಯಲ್ಲಿ ಬಂದ ಹೋರಾಟಗಾರರು ರಾಜಧಾನಿಯಲ್ಲಿ ಭಾನುವಾರ ಗಟ್ಟಿಧ್ವನಿ ಮೊಳಗಿಸಿದರು. ಪ್ರತಿಭಟನನಿರತ ನೂರಾರು ಮಂದಿಯನ್ನು ಲಾಠಿ ಬೀಸಿ ಚದುರಿಸಿದ ಪೊಲೀಸರು, ಹಲವರನ್ನು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಮನವಿ ಸ್ವೀಕರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬರಲಿಲ್ಲವೆಂದು ಆಕ್ರೋಶಗೊಂಡು, ಅವರ ಮನೆಗೆ ತೆರಳಲು ಮುಂದಾದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದು ಬಸ್‌ಗಳಲ್ಲಿ ಕರೆದೊಯ್ದರು. ಲಾಠಿ ಏಟಿನಿಂದ ಕರಿಯಪ್ಪ ಗುಡಿಮನಿ ಅವರ ತಲೆಗೆ ಗಾಯವಾಗಿದ್ದು, ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹರಿಹರದಲ್ಲಿರುವ ಬಿ.ಕೃಷ್ಣಪ್ಪ ಅವರ ಸಮಾಧಿ ಬಳಿಯಿಂದ ನ. 28ರಂದು ಆರಂಭಗೊಂಡಿದ್ದ ಪಾದಯಾತ್ರೆ 360 ಕಿಲೋ ಮೀಟರ್ ಕ್ರಮಿಸಿ, ಭಾನುವಾರ ನಗರ ತಲುಪಿತು. ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಮಂದಿ ತಮಟೆ ಬಡಿದು ಕ್ರಾಂತಿಗೀತೆಗಳನ್ನು ಹಾಡಿ, ಒಳ ಮೀಸಲಾತಿಗೆ ಆಗ್ರಹಿಸಿದರು.

5ನೇ ಪುಟ ನೋಡಿ

ಎಡ–ಬಲ ಒಮ್ಮತದ ಹೋರಾಟ

ಒಳ ಮೀಸಲಾತಿಗಾಗಿ ಪರಿಶಿಷ್ಟ ಜಾತಿಯಲ್ಲಿನ ಎಡಗೈ ಮತ್ತು ಬಲಗೈ ಸಮುದಾಯಗಳು ಒಟ್ಟಾಗಿ ಹೋರಾಟ ನಡೆಸಿದವು.

ಬಿ.ಗೋಪಾಲ್, ಮಾವಳ್ಳಿ ಶಂಕರ್, ಹೆಣ್ಣೂರು ಶ್ರೀನಿವಾಸ್, ಬಸವರಾಜ ಕೌತಾಳ್, ಎನ್. ಮೂರ್ತಿ, ವೆಂಕಟಗಿರಿಯಯ್ಯ, ಆರ್. ಮೋಹನ್‌ರಾಜ್, ಆ.ರಾ. ಮಹೇಶ್, ಜಂಬೂದ್ವೀಪ ಸಿದ್ಧರಾಜು, ಅಂಬಣ್ಣ ಅರೋಲಿ, ಕರಿಯಪ್ಪ ಗುಡ್ಡಿಮನಿ, ಎಸ್.ಮಾರಪ್ಪ, ಭಾಸ್ಕರ್ ಪ್ರಸಾದ್, ಎಂ. ಗುರುಮೂರ್ತಿ, ಪಾವಗಡ ಶ್ರೀರಾಮ್ ಮುಂತಾದವರು ಹೋರಾಟದಲ್ಲಿದ್ದರು.

‘ಒಳ ಮೀಸಲಾತಿ ಜಾರಿ ವಿಷಯದಲ್ಲಿ ಬಲಗೈ ಸಮುದಾಯದ ವಿರೋಧ ಇಲ್ಲ. ಎಲ್ಲರೂ ಒಟ್ಟಾಗಿಯೇ ಹೋರಾಟ ನಡೆಸುತ್ತಿದ್ದೇವೆ’ ಎಂದು ಮಾವಳ್ಳಿ ಶಂಕರ್ ಹೇಳಿದರು.

ನಾಳೆಯಿಂದ ಬೆಂಗಳೂರಿನಲ್ಲಿ ಜಿ20 ಸಭೆ

ನವದೆಹಲಿ (ಪಿಟಿಐ): ಜಿ20 ಗುಂಪಿನ ಹಣಕಾಸು ಮತ್ತು ಕೇಂದ್ರೀಯ ಬ್ಯಾಂಕ್ ಪ್ರತಿನಿಧಿಗಳ (ಎಫ್‌ಸಿಬಿಡಿ) ಮೊದಲ ಸಭೆಯು ಬೆಂಗಳೂರಿನಲ್ಲಿ ಮಂಗಳವಾರದಿಂದ ಗುರುವಾರದವರೆಗೆ ನಡೆಯಲಿದೆ.

ಹಣಕಾಸು ಸಚಿವಾಲಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜಂಟಿಯಾಗಿ ಈ ಸಭೆ ಆಯೋಜಿಸಿವೆ. ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ಮತ್ತು ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕಲ್ ಡಿ. ಪಾತ್ರ ಅವರು ಸಭೆಯ ನೇತೃತ್ವ ವಹಿಸಲಿದ್ದಾರೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆಯು ತಿಳಿಸಿದೆ.

ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು, ಜಾಗತಿಕ ಆರೋಗ್ಯ, ಅಂತರರಾಷ್ಟ್ರೀಯ ತೆರಿಗೆ ಮತ್ತು ಹಣಕಾಸು ವಲಯಗಳಿಗೆ ಸಂಬಂಧಿಸಿದ ವಿಷಯಗಳು ಈ ಸಭೆಯಲ್ಲಿ ಚರ್ಚೆಗೆ ಬರಲಿವೆ.

21ನೇ ಶತಮಾನದ ಜಾಗತಿಕ ಸವಾಲುಗಳನ್ನು ಎದುರಿಸುವುದು ಹೇಗೆ ಎನ್ನುವ ಕುರಿತು ತಜ್ಞರು ಚರ್ಚೆ ನಡೆಸಲಿದ್ದಾರೆ. ‘ಪರಿಸರಸ್ನೇಹಿ ಚಟುವಟಿಕೆಗೆ ಹಣಕಾಸಿನ ನೆರವು ನೀಡುವುದರಲ್ಲಿ ಕೇಂದ್ರೀಯ ಬ್ಯಾಂಕ್‌ಗಳ ಪಾತ್ರ’ ಎನ್ನುವ ವಿಚಾರಗೋಷ್ಠಿಯೂ ನಡೆಯಲಿದೆ.

ಜಿ20 ಸದಸ್ಯ ದೇಶಗಳಲ್ಲದೇ, ಭಾರತ ಆಹ್ವಾನಿಸಿರುವ ಹಲವು ದೇಶಗಳು ಮತ್ತು ಅಂತರರಾಷ್ಟ್ರೀಯ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

‘ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಿ’

ಬೆಳಗಾವಿ: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಇತ್ಯರ್ಥ ಆಗುವವರೆಗೆ ಕೇಂದ್ರ ಸರ್ಕಾರ ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಬೇಕು. ಇಲ್ಲದಿದ್ದರೆ, ಗಡಿಭಾಗದ ಮರಾಠಿ ಭಾಷಿಕರಿಗೆ ಮರಾಠಿಯಲ್ಲೇ ಸರ್ಕಾರಿ ದಾಖಲೆಗಳನ್ನು ನೀಡಬೇಕು ಎಂದು ತಾಲ್ಲೂಕಿನ ಬೆಳ ಗುಂದಿಯಲ್ಲಿ ರವಳನಾಥ ಪಂಚಕ್ರೋಶಿ ಸಾಹಿತ್ಯ ಅಕಾಡೆಮಿ ವತಿಯಿಂದ ಭಾನು ವಾರ ನಡೆದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಅಂಗೀಕರಿಸಲಾಯಿತು.

‘ಗಡಿಭಾಗದ ಮರಾಠಿ ಭಾಷಿಕರು ತಮ್ಮನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಹಲವು ದಶಕಗಳಿಂದ ಹೋರಾಟ ನಡೆಸುತ್ತಿದ್ದಾರೆ. ಇದಕ್ಕೆ ಮರಾಠಿ ಸಾಹಿತ್ಯ ಸಮ್ಮೇಳನದ ಬೆಂಬಲವೂ ಇದೆ. ಹೀಗಾಗಿ, ಮಹಾರಾಷ್ಟ್ರ ಸರ್ಕಾರ ಪ್ರತಿವರ್ಷ ಮರಾಠಿ ಸಾಹಿತ್ಯ ಸಮ್ಮೇಳನಗಳಿಗೆ ಅನುದಾನ ನೀಡಬೇಕು’ ಎಂದು ಒತ್ತಾಯಿಸಲಾಯಿತು. ಉಭಯ ರಾಜ್ಯಗಳ ನಡುವಿನ ಗಡಿ ವಿವಾದ ತಾರಕಕ್ಕೇರಿದ ಸಂದರ್ಭ ಕೈಗೊಂಡ ಈ ನಿರ್ಣಯ ಚರ್ಚೆಗೆ ಗ್ರಾಸವಾಗಿದೆ.

ನೇಮಕಾತಿ ಅಕ್ರಮ ತಡೆಗೆ ಸೂಚನೆ 5

ಚಿನಕುರಳಿ
ಪ್ರಕಾಶ್ ಶೆಟ್ಟಿ

60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಉದ್ಘಾಟನೆ

ಐವರು ಸ್ಕೇಟರ್‌ಗಳಿಗೆ ನೆರವು: ಸಿ.ಎಂ

ಪ್ರಜಾವಾಣಿ ವಾರ್ತೆ

ಬಸವನಗುಡಿಯಲ್ಲಿ 'ಕ್ರೀಡಾ ಸಂಕೀರ್ಣ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಉದ್ಘಾಟಿಸಿದರು. ಸಚಿವ ಆರ್‌. ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕ ರವಿ ಸುಬ್ರಹ್ಮಣ್ಯ ಇದ್ದರು

ಬೆಂಗಳೂರು: 'ಐವರು ರಾಷ್ಟ್ರೀಯ ಸ್ಕೇಟಿಂಗ್ ಕ್ರೀಡಾಪಟುಗಳನ್ನು ರಾಜ್ಯದ ಸರ್ಕಾರ ದತ್ತು ತೆಗೆದುಕೊಳ್ಳುತ್ತಿದ್ದು, ಪ್ಯಾರಿಸ್ ಒಲಿಪಿಂಕ್ಸ್‌ವರೆಗೆ ಎಲ್ಲ ರೀತಿಯ ನೆರವನ್ನು ನೀಡಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಬಿಎಂಪಿ ಹಾಗೂ ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಸಹಯೋಗದೊಂದಿಗೆ ಬಸವನಗುಡಿ ವಿಧಾನಸಭಾ ಕ್ಷೇತ್ರ ವಿದ್ಯಾಪೀಠ ವಾರ್ಡ್‌ನ ಸಿ.ಟಿ ಬೆಡ್‌ನಲ್ಲಿ ನಿರ್ಮಿಸಿರುವ 'ಕ್ರೀಡಾ ಸಂಕೀರ್ಣ' ಹಾಗೂ 60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಈಗಾಗಲೇ 75 ಕ್ರೀಡಾಪಟುಗಳನ್ನು ದತ್ತು ತೆಗೆದುಕೊಂಡಿದೆ. ಐವರು ಸ್ಕೇಟಿಂಗ್‌ಪಟುಗಳನ್ನು ಸರ್ಕಾರ ದತ್ತು ತೆಗೆದುಕೊಂಡು, ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲಿದೆ ಎಂದರು.

ಬಸವನಗುಡಿಯಲ್ಲಿ ನಿರ್ಮಿಸಲಾಗಿರುವ ಈ ಕ್ರೀಡಾ ಸಂಕೀರ್ಣ ದೇಶದಲ್ಲಿ ಅತ್ಯಾಧುನಿಕ ಸೌಲಭ್ಯವನ್ನು ಒಳಗೊಂಡಿದೆ. ಸ್ಕೇಟಿಂಗ್ ಪಟುಗಳು ಇಲ್ಲಿಗೆ ಬಂದು ವಿಶ್ವದರ್ಜೆಯ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು. ದೇಶಕ್ಕೆ ಪದಕ ತಂದುಕೊಡಲು ಶ್ರಮಿಸಬಹುದು ಎಂದರು.

60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರದ ಎಲ್ಲಾ ರಾಜ್ಯದ ಸುಮಾರು 4 ಸಾವಿರ ಅಂತರ ರಾಷ್ಟ್ರೀಯ ಸ್ಪರ್ಧಿಗಳು ಭಾಗವಹಿಸಿದ್ದರು.

ಬಸವನಗುಡಿ ವಿಧಾನಸಭೆ ಕ್ಷೇತ್ರದ ಶಾಸಕ ರವಿ ಸುಬ್ರಹ್ಮಣ್ಯ ಮಾತನಾಡಿ, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಸವನಗುಡಿಯ ಪಾರಂಪರಿಕ ತಾಣ ಯೋಜನೆಗೆ ಸದ್ಯವೇ ಚಾಲನೆ ನೀಡಲಿದ್ದಾರೆ. ಅಲ್ಲದೆ, ದೇವಸ್ಥಾನಗಳ ಪ್ರವಾಸಿ ಯೋಜನೆ 'ಟೆಂಪಲ್ ಸರ್ಕ್ಯೂಟ್' ಕೂಡ ಆರಂಭವಾಗಲಿದೆ' ಎಂದರು.

ಕಂದಾಯ ಸಚಿವ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ಆಡಳಿತಾಧಿಕಾರಿ ರಾಕೇಶ್ ಸಿಂಗ್, ವಲಯ ಆಯುಕ್ತ ಜಯರಾಮ್ ರಾಯಪುರ, ವಲಯ ಜಂಟಿ ಆಯುಕ್ತ ಜಗದೀಶ್ ನಾಯ್ಕ್ ಇದ್ದರು.

ಇಂದಿನಿಂದ 'ಡೆಕ್ಸ್ ಟೆರಿಕ್ಸ್' ತಾಂತ್ರಿಕ ಉತ್ಸವ

ಯಲಹಂಕ: ಹೆಬ್ಬಾಳದ ಐಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಡಿ.12,13ರಂದು 'ಡೆಕ್ಸ್ ಟೆರಿಕ್ಸ್' ಅಂತರಕಾಲೇಜು ತಾಂತ್ರಿಕ ಉತ್ಸವ ನಡೆಯಲಿದೆ ಎಂದು ಪ್ರಾಂಶುಪಾಲ ಡಾ.ಟಿ.ಎನ್.ಶ್ರೀನಿವಾಸ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: CAO/CN/BNC/124/2022
ದಿನಾಂಕ: 03.12.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
1. ಹಿಂದೂಪುರ – ಪೇಣುಕೊಂಡ ವಿಭಾದಲ್ಲಿ ಎಲ್‌ಸಿ 64, ಎಲ್‌ಸಿ 44 ಮತ್ತು ಎಲ್‌ಸಿ 71 ಕ್ಕೆ ಬದಲಾಗಿ ರಸ್ತೆಯ ಮೇಲು ಸೇತುವೆ / ರಸ್ತೆಯ ಕೆಳ ಸೇತುವೆ ನಿರ್ಮಾಣಕ್ಕಾಗಿ ವಿದ್ಯುತ್ ಪೂರೈಕೆ ಮತ್ತು ಲೈಟಿಂಗ್ ಅನ್ನು ಒದಗಿಸುವುದು. ಹಾಗೂ ವಿವಿಧ ಎಲೆಕ್ಟ್ರಿಕಲ್ ಕಾಮಗಾರಿ. 2. ಬೆಂಗಳೂರು ನಗರ – ಜೋಲಾರ್‌ಪೇಟೆ ವಿಭಾದಲ್ಲಿ ಎಲ್‌ಸಿ 95, ಎಲ್‌ಸಿ 92 ಮತ್ತು ಎಲ್‌ಸಿ 91 ಕ್ಕೆ ಬದಲಾಗಿ ಪ್ರಸ್ತಾವನೆಯಂತೆ ರಸ್ತೆಯ ಮೇಲು ಸೇತುವೆ / ರಸ್ತೆಯ ಕೆಳ ಸೇತುವೆ / ಸಬ್‌ವೇಗಳ ನಿರ್ಮಾಣಕ್ಕಾಗಿ ವಿದ್ಯುತ್ ಪೂರೈಕೆ ಮತ್ತು ಲೈಟಿಂಗ್ ಅನ್ನು ಒದಗಿಸುವುದು. 3. ಚನ್ನಸಂದ್ರದ ಬಳಿ ಎಲ್‌ಸಿ 6 ಕ್ಕೆ ಬದಲಾಗಿ ರಸ್ತೆಯ ಮೇಲು ಸೇತುವೆ / ರಸ್ತೆಯ ಕೆಳ ಸೇತುವೆಯ ನಿರ್ಮಾಣಕ್ಕಾಗಿ ವಿದ್ಯುತ್ ಪೂರೈಕೆ ಮತ್ತು ಲೈಟಿಂಗ್ ಅನ್ನು ಒದಗಿಸುವುದು. (ಟೆಂಡರು ಸಂ. ECN-60-2022-RT)	ರೂ. 78,05,971/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.12.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ದಂಡು

PUB/527/AAD/PRB/SWR/2022-23

S.W.Railways SWRRLY SWRRLY

ಎಸಿಬಿ: ಸ್ಥಳ ನಿಯುಕ್ತಿಗೆ ತೊಡಕು

ಪ್ರಜಾವಾಣಿ ವಾರ್ತೆ

ಒಪ್ಪಿಗೆ ದೊರೆತ ತಕ್ಷಣವೇ ಆದೇಶ: ಸೂದ್

'ಎಸಿಬಿಯಲ್ಲಿರುವ ಅಧಿಕಾರಿಗಳು, ಸಿಬ್ಬಂದಿಯ ಸ್ಥಳ ನಿಯುಕ್ತಿಗೂ ಮೊದಲು ಆ ಹುದ್ದೆಗಳಿಗೆ ಮಂಜೂರಾತಿ ಪಡೆಯಬೇಕಿದೆ. ಅದಕ್ಕಾಗಿಯೇ ನಾಲ್ಕು ಹೊಸ ಸಂಚಾರ ಪೊಲೀಸ್ ಠಾಣೆಗಳು ಸೇರಿದಂತೆ ಹುದ್ದೆಗಳ ಮಂಜೂರಾತಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಕಳುಹಿಸಲಾಗಿದೆ. ಒಪ್ಪಿಗೆ ದೊರೆತ ತಕ್ಷಣವೇ ಎಸಿಬಿಯಲ್ಲಿರುವ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸ್ಥಳ ನಿಯುಕ್ತಿ ಆದೇಶ ನೀಡಲಾಗುವುದು' ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಪ್ರವೀಣ್ ಸೂದ್

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದಲ್ಲಿದ್ದ (ಎಸಿಬಿ) ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಶೇಕಡ 50ರಂತೆ ಲೋಕಾಯುಕ್ತ ಹಾಗೂ ಗೃಹ ಇಲಾಖೆಗೆ ಹಂಚಿಕೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿ 20 ದಿನಗಳಾದರೂ ಸ್ಥಳ ನಿಯುಕ್ತಿ ಪ್ರಕ್ರಿಯೆ ಆರಂಭವಾಗಿಲ್ಲ. ಇದರಿಂದಾಗಿ ನೂರಾರು ಅಧಿಕಾರಿಗಳು, ಸಿಬ್ಬಂದಿ ಕೆಲಸವಿಲ್ಲದೇ ಕಾಲಹರಣ ಮಾಡಬೇಕಾದ ಸ್ಥಿತಿ ಮತ್ತೆ ಮುಂದುವರಿದಿದೆ.

ಎಸಿಬಿ ರಚನೆಗೆ ಹೊರಡಿಸಿದ್ದ ಅಧಿಸೂಚನೆಗಳನ್ನು ರದ್ದುಪಡಿಸಿ ಆಗಸ್ಟ್ 11ರಂದು ತೀರ್ಪು ನೀಡಿದ್ದ ಹೈಕೋರ್ಟ್, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸಲು ಲೋಕಾಯುಕ್ತ ಪೊಲೀಸ್ ವಿಭಾಗ ಹೊಂದಿದ್ದ ಅಧಿಕಾರವನ್ನು ಮರುಸ್ಥಾಪಿಸಿತ್ತು.

ಆ ದಿನದಿಂದಲೇ ಎಸಿಬಿ ಪೊಲೀಸ್ ವಿಭಾಗ ಕೆಲಸ ಸ್ಥಗಿತಗೊಳಿಸಿತ್ತು. ಎಸಿಬಿಯಲ್ಲಿ ಬಾಕಿ ಇದ್ದ ಎಲ್ಲ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿ ಡಿಪಿಎಆರ್ ಸೆಪ್ಟೆಂಬರ್ 30ರಂದು ಆದೇಶ ಹೊರಡಿಸಿತ್ತು.

121 ಪೊಲೀಸ್ ಅಧಿಕಾರಿಗಳು, 324 ಕಾನ್‌ಸ್ಟೆಬಲ್‌ಗಳು ಮತ್ತು ಆಡಳಿತ ವಿಭಾಗದ 79 ಸೇರಿದಂತೆ ಎಸಿಬಿಯಲ್ಲಿ ಒಟ್ಟು 524 ಹುದ್ದೆಗಳಿಗೆ ಮಂಜೂರಾತಿ ಇತ್ತು. ಪೂರ್ಣ ಬಲವನ್ನು ಲೋಕಾಯುಕ್ತದಲ್ಲಿ ವಿಲೀನಗೊಳಿಸುವಂತೆ ಲೋಕಾಯುಕ್ತರು ಕೋರಿದ್ದರು.

ಈ ಕುರಿತು ಹಲವು ಸುತ್ತಿನ ಚರ್ಚೆ ನಡೆದಿತ್ತು.

ನವೆಂಬರ್ 19ರಂದು ಆದೇಶ ಹೊರಡಿಸಿದ್ದ ಡಿಪಿಎಆರ್, 266 ಹುದ್ದೆಗಳನ್ನು ಲೋಕಾಯುಕ್ತಕ್ಕೆ ಹಂಚಿಕೆ ಮಾಡಿ, 258 ಹುದ್ದೆಗಳನ್ನು ಗೃಹ ಇಲಾಖೆ ವಶಕ್ಕೆ ನೀಡಿತ್ತು.

ವಿವಿಧ ದರ್ಜೆಯ ಸುಮಾರು 15 ಪೊಲೀಸ್ ಅಧಿಕಾರಿಗಳು ಮತ್ತು 110 ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿತ್ತು. ಉಳಿದ ಎಲ್ಲರೂ ಎಸಿಬಿ ಕಚೇರಿಯಲ್ಲೇ ಇದ್ದಾರೆ.

ಲೋಕಾಯುಕ್ತ ಮತ್ತು ಗೃಹ ಇಲಾಖೆಯಲ್ಲಿ ಹೆಚ್ಚುವರಿ ಹುದ್ದೆಗಳಿಗೆ ಮಂಜೂರಾತಿ ಇಲ್ಲದ ಕಾರಣದಿಂದ ನವೆಂಬರ್ 19ರ ಆದೇಶದ ಬಳಿಕವೂ ಸ್ಥಳನಿಯುಕ್ತಿಗೊಳಿಸಲು ಸಾಧ್ಯವಾಗಿಲ್ಲ.

400 ಅಧಿಕಾರಿಗಳು, ಸಿಬ್ಬಂದಿ ನಿತ್ಯವೂ ಕಚೇರಿಗೆ ಬಂದು, ವಾಪಸ್ ಹೋಗುವುದಕ್ಕೆ ಸೀಮಿತವಾಗಿ ಉಳಿದಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಫಲಕದಲ್ಲಿ ಅಕ್ಷರ ದೋಷ'

ಕತ್ರಿಗುಪ್ಪೆಯ ವಾರ್ಡ್ ಸಂಖ್ಯೆ 215ರ ರಾಕ್ ಗಾರ್ಡನ್ ಉದ್ಯಾನದಲ್ಲಿ ಬಿಬಿಎಂಪಿ ಅಳವಡಿಸಿರುವ ಫಲಕದಲ್ಲಿ ಅಕ್ಷರ ದೋಷಗಳಿವೆ. ಫಲಕ ಅಳವಡಿಸುವ ಮುನ್ನ ಒಂದು ಬಾರಿ ಕರಡು ಪರಿಷ್ಕರಿಸಿದ್ದರೆ ಇಷ್ಟೊಂದು ತಪ್ಪುಗಳು ಆಗುತ್ತಿರಲಿಲ್ಲ. ಬಸವಣ್ಣ ಎನ್ನುವುದು ಬಸವಣ, ಭಾವಚಿತ್ರವುಳ್ಳ ಎಂಬುದು ಬಾವ ಚಿತ್ರವುಳ್ಳ, ಕಿರಿಯರಿಲ್ಲ ಎನ್ನುವುದು ಕಿರಿಯರಿಲ, ಶಿವಭಕ್ತರಿಗಿಂತ ಎನ್ನುವುದು ಶಿವಬಕರಿಗಿಂತ ಎಂದಾಗಿದೆ. ತತ್ವಜ್ಞಾನಿ ಪದದ ಹಿಂದೆ 'ಹಿಂದೂ' ಸೇರಿಸಿರುವುದು ಅನವಶ್ಯಕ ಎಂಬುದು ನನ್ನ ಅನಿಸಿಕೆ. ಇದರಿಂದ, ವಿಶ್ವಗುರು ಎನಿಸಿಕೊಂಡಿರುವ ಮಹಾನ್ ಸಮಾಜ ಸುಧಾರಕನನ್ನು ಕುಬ್ಜಗೊಳಿಸಿದಂತಾಗುತ್ತದೆ.

ಪುಟ್ಟೇಗೌಡ, ಬನಶಂಕರಿ 2ನೇ ಹಂತದ ನಿವಾಸಿ



'ರಸ್ತೆ ಗುಂಡಿಗಳನ್ನು ಮುಚ್ಚಿ'

ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದ ಸಮೀಪದಲ್ಲಿರುವ ಸಿಂಗೇನ ಅಗ್ರಹಾರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ಸಂಪೂರ್ಣ ಹಾಳಾಗಿದೆ. ಈ ಭಾಗದಲ್ಲಿ ಹಲವಾರು ಶಾಲೆಗಳಿದ್ದು, ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ವಿಪರೀತ ಸಂಚಾರ ದಟ್ಟಣೆಯಾಗುತ್ತದೆ. ಶಾಲಾ ಮಕ್ಕಳು ಸೇರಿ ನಿತ್ಯ 10 ಸಾವಿರಕ್ಕೂ ಹೆಚ್ಚು ಜನ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ಗುಂಡಿಗಳಿರುವ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಮಕ್ಕಳನ್ನು ಶಾಲೆಗೆ ಬಿಡಲು ಬರುವ ಬಹುತೇಕ ಪೋಷಕರು ಹೆಲ್ಮೆಟ್ ಸಹ ಧರಿಸುವುದಿಲ್ಲ.

ಮಾಲತೇಶ್, ಸ್ಥಳೀಯ ನಿವಾಸಿ

'ರಸ್ತೆ ದುರಸ್ತಿಗೊಳಿಸಿ'

ಥಣಿಸಂದ್ರದ ನಾಗವಾರದ ಸರ್ವಿಸ್ ರಸ್ತೆ ಬಸ್ ನಿಲ್ದಾಣದ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ವಾಹನ ಸವಾರರು, ನಾಗರಿಕರು ಜೀವಭಯದಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮಾರು ಆರೇಳು ತಿಂಗಳಿಂದ ರಸ್ತೆಯೆಲ್ಲಾ ಗುಂಡಿಮಯವಾಗಿದ್ದರೂ ದುರಸ್ತಿಗೊಳಿಸುತ್ತಿಲ್ಲ. ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಕಳಪೆ ಕಾಮಗಾರಿ ಮಾಡಿರುವುದರಿಂದ ಮಳೆ ಬಂದರೆ ತ್ಯಾಜ್ಯ ನೀರೆಲ್ಲ ರಸ್ತೆಯ ಮೇಲೆಯೇ ಹರಿಯುತ್ತದೆ. ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಯನ್ನು ಪರಿಹರಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಪಟ್ಟಡಿ. ಎ. ಬಸವರಾಜ್, ಸ್ಥಳೀಯ ನಿವಾಸಿ

'ಕೆಸರು ಗದ್ದೆಯಾದ ರಸ್ತೆ'

ಬೆಳ್ಳಂದೂರಿಗೆ ಸಂಪರ್ಕ ಕಲ್ಪಿಸುವ ಬಹುತೇಕ ಎಲ್ಲ ರಸ್ತೆಗಳು ಹದಗೆಟ್ಟಿದ್ದು, ಕೆಸರು ಗದ್ದೆಗಳಾಗಿ ಮಾರ್ಪಟ್ಟಿವೆ. ವಾಹನ ಸವಾರರು ನಿತ್ಯ ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚರಿಸುವ ಪರಿಸ್ಥಿತಿ ಸೃಷ್ಟಿಯಾಗಿದೆ. ರಸ್ತೆಗಳಂತೂ ಡಾಂಬರೀಕರಣ ಆಗದೆ ವರ್ಷಗಳೇ ಕಳೆದಿವೆ. ಜನಪ್ರತಿನಿಧಿಗಳು ಒಮ್ಮೆ ಮಾತ್ರ ಹಾದುಹೋಗುವ ರಸ್ತೆಗಳು ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತವೆ. ಆದರೆ, ಸಾರ್ವಜನಿಕರ ಗೋಳಾಟ ಕೇಳುವವರಾರು?

ಜನಾರ್ದನ ಬಿ.ಜಿ., ಸ್ಥಳೀಯ ನಿವಾಸಿ

ಬೆಸ್ಕಾಂನಿಂದ ಮರಗಳ ಹನನ

ಉಲ್ಲಾಳು, ಮಲ್ಲತ್ತಹಳ್ಳಿ, ಆರ್‌ಟಿಒ ರಸ್ತೆ ಸೇರಿದಂತೆ ಹಲವು ಭಾಗಗಳಲ್ಲಿ ಬೆಸ್ಕಾಂ ಸಿಬ್ಬಂದಿ ಮರಗಳನ್ನು ಮನಬಂದಂತೆ ಕಡಿಯುತ್ತಿದ್ದಾರೆ. ವಿದ್ಯುತ್ ತಂತಿಗೆ ಅಡಚಣೆ ಆಗುತ್ತದೆ ಎನ್ನುವ ಕಾರಣಕ್ಕೆ ಮರ ಕಡಿಯಲಾಗುತ್ತಿದೆ. ಆದರೆ, ಇವರು ನಿಯಮ ಮೀರಿ ಮನಸ್ಸಿಗೆ ಬಂದಂತೆ ಕಡಿಯುತ್ತಿದ್ದಾರೆ. ಹಲವು ಕಡೆ ದೊಡ್ಡ ಮರಗಳ ಬುಡ ಕತ್ತರಿಸಲಾಗಿದೆ. ನಾವು ಇಷ್ಟು ದೊಡ್ಡ ಮರಗಳನ್ನು ಬೆಳೆಸಲು ಹಲವು ವರ್ಷ ಶ್ರಮಪಟ್ಟಿದ್ದೇವೆ. ಈ ಬಗ್ಗೆ ಬೆಸ್ಕಾಂಗೆ (ಕೆ4 ವಿಭಾಗ) ಹಲವು ಬಾರಿ ದೂರು ನೀಡಲಾಗಿದೆ. ಬಿಬಿಎಂಪಿ ಹಾಗೂ ಬಿಡಿಎ ಸಿಬ್ಬಂದಿ ಕೂಡ ಇದೇ ರೀತಿ ಮರಗಳನ್ನು ಕಡಿಯುತ್ತಿದ್ದಾರೆ. ಈ ಬಗ್ಗೆ ದೂರು ನೀಡಿದ್ದರೂ, ಬೆಸ್ಕಾಂ ಹಿರಿಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಮರಗಳನ್ನು ಮನಬಂದಂತೆ ಕಡಿಯುವುದನ್ನು ನಿಲ್ಲಿಸಲು ತಕ್ಷಣವೇ ಕ್ರಮ ಕೈಗೊಳ್ಳಬೇಕು.

ಗೌಡಯ್ಯ, ಉಲ್ಲಾಳು

ಅಧಿವೇಶನದಲ್ಲಿ ವಕೀಲರ ರಕ್ಷಣಾ ಮಸೂದೆ ಮಂಡನೆ

ಬೆಂಗಳೂರು: ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ವಕೀಲರ ರಕ್ಷಣಾ ಮಸೂದೆಯನ್ನು ಮಂಡಿಸುವುದಾಗಿ ವಕೀಲರ ಸಂಘದ ನಿಯೋಗಕ್ಕೆ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಅವರು ತಮ್ಮನ್ನು ಭೇಟಿಯಾಗಿ ಮನವಿ ಸಲ್ಲಿಸಿದ ವಕೀಲರ ಸಂಘದ ನಿಯೋಗಕ್ಕೆ ಈ ವಿಷಯ ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಕರ್ತವ್ಯ ನಿರತ ವಕೀಲರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಅನೇಕರ ಹತ್ಯೆಗಳು ನಡೆದಿವೆ. ಹೀಗಾಗಿ, ವಕೀಲರ ರಕ್ಷಣಾ ಕಾಯ್ದೆಯ ಕರಡು ಮಸೂದೆಯನ್ನು ಡಿ.18 ರಿಂದ ಪ್ರಾರಂಭವಾಗುತ್ತಿರುವ ಅಧಿವೇಶನದಲ್ಲಿ ಎರಡೂ ಸದನಗಳಲ್ಲಿ ಮಂಡಿಸುವಂತೆ ಮುಖ್ಯಮಂತ್ರಿಗಳನ್ನು ವಕೀಲರ ಸಂಘ, ಬೆಂಗಳೂರು ಹಾಗೂ ರಾಜ್ಯದ ವಿವಿಧ ವಕೀಲ ಸಂಘಗಳು ಕೋರಿವೆ. ಕಾಯ್ದೆಯ ಅಂತಿಮ ಕರಡು ಕಾನೂನು ಇಲಾಖೆಯಲ್ಲಿರುವುದಾಗಿ ಸಂಘವು ಮನವಿ ಪತ್ರದಲ್ಲಿ ತಿಳಿಸಿದೆ.

ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಕಾರ್ಯದರ್ಶಿ ಟಿ. ಜಿ.ರವಿ, ಖಜಾಂಚಿ ಹರೀಶ್ ಎಂ.ಟಿ ಮತ್ತಿತರರು ಉಪಸ್ಥಿತರಿದ್ದರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

EXCLUSIVELY FOR Retired, Sr.Citizens, VRS, Pensioner's, Entrepreneurs, Homemaker's. Opportunity to Earn Income upto 1.5 Lac p.m. Contact:- 8861561347 /9686399918

Multiple Vacancy

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

BUSINESS

Business to Business

Business

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

Business Offers

Finance

GREEN HERBAL 2 Lakh Investment Required Daily Collection Contact:- 8892501007/ 9606701007

PERSONAL

Lost

LOST
I, Kannan M, residing at #479, 37th Cross, 2nd Block, Rajajinagar, Bengaluru, have lost the Sale Deed (Document No. 3792, dtd: 23rd Sept. 1981 and Declaration and Confirmation Deed) (Document No. 1173, dated: 17th June 1985) while shifting residence. Finders please contact: 99161 56505.

Announcements

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

'ಲವ್ ಜಿಹಾದ್': ವಿಶೇಷ ದಳ ರಚನೆಗೆ ಚಿಂತನೆ

ಬೆಂಗಳೂರು: 'ರಾಜ್ಯದಲ್ಲಿ ಲವ್ ಜಿಹಾದ್ ತಡೆಗೆ ವಿಶೇಷ ಪೊಲೀಸ್ ದಳ ರಚಿಸಲು ಚಿಂತನೆ ನಡೆಸಲಾಗುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಜತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಭರವಸೆ ನೀಡಿದರು.

ಗೃಹ ಸಚಿವರ ನಿವಾಸದಲ್ಲಿ ಹಿಂದೂ ಜನಜಾಗೃತಿ ಸಮಿತಿ ಪದಾಧಿಕಾರಿಗಳ ಮನವಿ ಸ್ವೀಕರಿಸಿ ಮಾತನಾಡಿದ ಅವರು, 'ಹಿಂದೂ ಸಮಾಜದ ಯುವತಿಯರು ಹಾಗೂ ಮಹಿಳೆಯರ ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ನಾಪತ್ತೆ ಪ್ರಕರಣಗಳ ತನಿಖೆ ನಡೆಸಲು ಪೊಲೀಸರಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

'ಸಮಾಜಘಾತುಕ ಶಕ್ತಿಗಳನ್ನು ಮಟ್ಟ ಹಾಕಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಸಚಿವರು ನಿಯೋಗಕ್ಕೆ ಭರವಸೆ ನೀಡಿದರು.

ಮನವಿ: ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತಂದರೂ ಲವ್ ಜಿಹಾದ್ ಪ್ರಕರಣಗಳು ನಡೆಯುತ್ತಿವೆ. ಹೀಗಾಗಿ, ಉತ್ತರಪ್ರದೇಶ ಮಾದರಿಯಲ್ಲಿ ವಿಶೇಷ ದಳ ರಚಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಸಮಿತಿಯ ಅವಧಿ ವಿಸ್ತರಣೆ

ಬೆಂಗಳೂರು: ಸಾರಿಗೆ ಸಂಸ್ಥೆಗಳ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಡೀಕರಣಗಳ ಸಂಪೂರ್ಣ ಅಧ್ಯಯನಕ್ಕೆ ರಾಜ್ಯ ಸರ್ಕಾರ ನೇಮಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸಮೂರ್ತಿ ಏಕ ಸದಸ್ಯ ಸಮಿತಿಯ ಅವಧಿಯನ್ನು 2023ರ ಮಾರ್ಚ್ ತನಕ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಪರಿಶೀಲನೆಯಲ್ಲಿದ್ದು, ಇದರ ಮೇಲೆ ಸೂಕ್ತ ನಿರ್ಣಯ ಕೈಗೊಳ್ಳುವ ತನಕ ಮುಂದುವರಿಸುವುದು ಸೂಕ್ತ ಎಂದು ನಿರ್ಣಯಿಸಿ ಅವಧಿ ವಿಸ್ತರಿಸಿದೆ.

ರಾಜ್ಯಪಾಲರ ಕಾರು ಚಾಲಕ ಹೃದಯಾಘಾತದಿಂದ ಸಾವು

ರವಿಕುಮಾರ್ ಎಸ್‌ ಕಾಳೆ

ಬೆಂಗಳೂರು: ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ರಾಜಭವನಕ್ಕೆ ಕರೆತರಲು ತೆರಳಿದ್ದ ವೇಳೆ ಹೃದಯಾಘಾತಕ್ಕೆ ಒಳಗಾಗಿದ್ದ ಮುಖ್ಯ ಕಾರು ಚಾಲಕ ರವಿಕುಮಾರ್ ಎಸ್. ಕಾಳೆ (42) ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಧಾರವಾಡದ ರವಿಕುಮಾರ್ 16 ವರ್ಷಗಳಿಂದ ಹಲವು ರಾಜ್ಯಪಾಲರಿಗೆ ಕಾರು ಚಾಲಕರಾಗಿ ಕರ್ತವ್ಯ ನಿರ್ವಹಿಸಿದ್ದರು.

ಭಾನುವಾರ ಬೆಳಿಗ್ಗೆ ರಾಜಭವನಕ್ಕೆ ಮೃತದೇಹ ತರಲಾಯಿತು. ರಾಜ್ಯಪಾಲರೂ ಸೇರಿದಂತೆ ರಾಜಭವನದ ಸಿಬ್ಬಂದಿ ಅಂತಿಮ ನಮನ ಸಲ್ಲಿಸಿದರು. ಬಳಿಕ ಮೃತದೇಹವನ್ನು ಧಾರವಾಡಕ್ಕೆ ಕೊಂಡೊಯ್ಯಲಾಯಿತು.

ವಿಮಾನ ನಿಲ್ದಾಣದಲ್ಲಿ ಗಣ್ಯರ ಪ್ರವೇಶದ್ವಾರದ ಬಳಿ ಕಾರು ನಿಲ್ಲಿಸಿ ರಾಜ್ಯಪಾಲರಿಗಾಗಿ ರವಿ ಕಾಯುತ್ತಿದ್ದರು. ಆಗ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದರು. ನಿಲ್ದಾಣದಲ್ಲಿದ್ದ ವೈದ್ಯರು ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಅವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಾತ್ರಿ 2.30ರ ವೇಳೆಗೆ ಅವರು ನಿಧನರಾದರು ಎಂದು ಮೂಲಗಳು ತಿಳಿಸಿವೆ. ರಾಜ್ಯಪಾಲರು ಮತ್ತೊಂದು ವಾಹನದಲ್ಲಿ ರಾಜಭವನ ತಲುಪಿದ್ದರು.

ನಗರದಲ್ಲಿ ಭಾನುವಾರ ನಡೆದ ರೈತ ಹುತಾತ್ಮ ದಿನ ಕಾರ್ಯಕ್ರಮದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಸದಸ್ಯರು ಕಣ್ಣಿಗೆ ಕಪ್ಪುಪಟ್ಟಿ ಧರಿಸಿ ಕೈಯಲ್ಲಿ ಮೇಣದ ಬತ್ತಿ ಹಿಡಿದು ನಮನ ಸಲ್ಲಿಸಿದರು.

ಹುತಾತ್ಮ ರೈತರಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಯುಕ್ತ ಕಿಸಾನ್ ಮೋರ್ಚಾದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ರೈತ ಹುತಾತ್ಮ ದಿನ ಆಚರಿಸಲಾಯಿತು. ರೈತ ಮುಖಂಡರು ಫ್ರೀಡಂ ಪಾರ್ಕ್‌ನಲ್ಲಿ ಕಣ್ಣಿಗೆ ಕಪ್ಪುಪಟ್ಟಿ ಧರಿಸಿ ಕೈಯಲ್ಲಿ ಮೇಣದ ಬತ್ತಿ ಹಿಡಿದು ಹುತಾತ್ಮ ರೈತರಿಗೆ ನಮನ ಸಲ್ಲಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ಸಂಚಾಲಕ ಕೆ.ವಿ.ಬಿಜು ಮಾತನಾಡಿ, 'ಹೋರಾಟದಲ್ಲಿ ಹುತಾತ್ಮ ರೈತರಿಗೆ ₹ 5 ಲಕ್ಷ ಪರಿಹಾರ ನೀಡುವುದಾಗಿ ಕೇಂದ್ರ ಸರ್ಕಾರವು ಭರವಸೆ ನೀಡಿತ್ತು. ಆದರೆ, ರೈತ ಕುಟುಂಬಗಳ ರಕ್ಷಣೆಯನ್ನೇ ಮಾಡಿಲ್ಲ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ರೂಪಿಸುತ್ತೇವೆ ಎಂದಿದ್ದ ಸರ್ಕಾರ ಅದನ್ನೂ ಜಾರಿ ಮಾಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ತೆಲಂಗಾಣದ ರೈತ ಮುಖಂಡ ವೆಂಕಟೇಶ್ವರ ರಾವ್ ಮಾತನಾಡಿ, 'ದೆಹಲಿ ರೈತ ಹೋರಾಟದಲ್ಲಿ ಮಡಿದ 750 ರೈತ ಕುಟುಂಬಗಳಿಗೆ ತೆಲಂಗಾಣ ಸರ್ಕಾರದ ಮುಖ್ಯಮಂತ್ರಿ ಕೆಸಿಆರ್ ಅವರು ಪ್ರತಿ ಕುಟುಂಬಕ್ಕೆ ಪರಿಹಾರ ನೀಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ' ಪ್ರಶ್ನಿಸಿದರು.

'ದೇಶದ ರೈತರು ಬೆಳೆದ ಉತ್ಪನ್ನಗಳನ್ನು ಶ್ರೀಲಂಕಾ ಹಾಗೂ ಬಾಂಗ್ಲಾದೇಶಕ್ಕೆ ದಾನ ಮಾಡುವ ಪ್ರಧಾನಿಗೆ ರೈತರ ಸಾವು ಕಾಣುತ್ತಿಲ್ಲವೇ? ತೆಲಂಗಾಣದಲ್ಲಿ ಶೇ 9ರಷ್ಟು ಸಕ್ಕರೆ ಇಳುವರಿ ಬರುವ ಕಬ್ಬಿಗೆ ₹ 3,200 ನಿಗದಿ ಪಡಿಸಿದ್ದಾರೆ. ಕರ್ನಾಟಕದಲ್ಲಿ ಏಕೆ ಸಾಧ್ಯವಾಗುತ್ತಿಲ್ಲ' ಎಂದರು.

ರೈತ ಮುಖಂಡ ಕುರುಬೂರ್ ಶಾಂತಕುಮಾರ್, ಉತ್ತರ ಕನ್ನಡ ಜಿಲ್ಲೆ ಅಧ್ಯಕ್ಷ ಕುಮಾರ ಬೂಬಾಟಿ, ರಾಜ್ಯ ರೈತ ಸಂಘದ ಅಧ್ಯಕ್ಷ ನಾರಾಯಣರೆಡ್ಡಿ, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಅತ್ತಹಳ್ಳಿ ದೇವರಾಜ್, ಕಿರಗಸೂರ ಶಂಕರ, ಗುರುಸಿದ್ದಪ್ಪ ಕೂಟಗಿ ಹಾಜರಿದ್ದರು.

'ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ನಮ್ಮ ಕರ್ನಾಟಕ ಗುತ್ತಿಗೆ ಶುಶ್ರೂಷಾಧಿಕಾರಿಗಳ ಕ್ಷೇಮಾಭಿವೃದ್ಧಿ ನೌಕರರ ಸಂಘ ಒತ್ತಾಯಿಸಿದೆ.

'ಬೇರೆ ರಾಜ್ಯಗಳಲ್ಲಿ ಎನ್‌ಎಚ್‌ಎಂ ನೌಕರರನ್ನು ಕಾಯಂಗೊಳಿಸಿದಂತೆ, ಆರೋಗ್ಯ ಇಲಾಖೆಯಲ್ಲಿ 15ರಿಂದ 20 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶುಶ್ರೂಷಾಧಿಕಾರಿಗಳನ್ನು ಕಾಯಂಗೊಳಿಸಬೇಕು' ಎಂದು ಸಂಘದ ಅಧ್ಯಕ್ಷೆ ಪಿ.ಎನ್. ರಾಧ ಶನಿವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಮುಂಬರುವ ನೇರ ನೇಮಕಾತಿಯಲ್ಲಿ ಜೇಷ್ಠತೆ ಆಧಾರದ ಮೇಲೆ ಕೃಪಾಂಕ ಹಾಗೂ ವಯೋಮಿತಿ ಸಡಿಲಿಕೆ ನೀಡಬೇಕು. ಗುತ್ತಿಗೆ ವೈದ್ಯರಿಗೆ 30 ಕೃಪಾಂಕ ನೀಡಿದಂತೆ ನಮಗೂ ವರ್ಷಕ್ಕೆ 2 ಕೃಪಾಂಕದಂತೆ ಗರಿಷ್ಠ 30 ಕೃಪಾಂಕಗಳನ್ನು ನೀಡಬೇಕು. ಒಂದು ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ಸುಮಾರು 20 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಅತಿ ಕಡಿಮೆ ವೇತನದಲ್ಲಿ ದುಡಿಯುತ್ತಿದ್ದು, ಯಾವುದೇ ಸೌಲಭ್ಯವಿಲ್ಲದೆ ಇಲಾಖೆ ವಹಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದೇವೆ. ಕೋವಿಡ್‌–19 ಸಂದರ್ಭದಲ್ಲೂ ಸಾರ್ವಜನಿಕರಿಗೆ ಸೇವೆ ನೀಡಲಾಗಿದೆ. ಆದ್ದರಿಂದ ನಮ್ಮನ್ನು ಕಾಯಂಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಉಪಾಧ್ಯಕ್ಷ ಸಂಗನಬಸವ, ರಮೇಶ ಕೊರಳ್ಳಿ, ಸೌಮ್ಯಶ್ರೀ ಕೆ., ದೇವರಾಜು, ಆರ್. ರಜಿನಿ, ಶಿವಣ್ಣ, ಜೆ.ಎಸ್. ರಘುನಾಥ್ ಇದ್ದರು.

ಸಾಮಾಜಿಕ ಜಾಲತಾಣ: ಮಕ್ಕಳ ಮೇಲೆ ಪೋಷಕರ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲ ತಾಣಗಳಲ್ಲಿ ಖಾತೆಗಳನ್ನು ತೆರೆಯಲು, ನಿರ್ವಹಿಸಲು ತಮ್ಮ ಮಕ್ಕಳಿಗೆ ಅವಕಾಶ ನೀಡುವುದಿಲ್ಲ ಎಂದು ಹಲವು ಪೋಷಕರು ಶಾಲೆಗಳಿಗೆ ಲಿಖಿತ ಆಶ್ವಾಸನೆ ನೀಡಿದ್ದಾರೆ.

ಕೋವಿಡ್ ನಂತರದ ದಿನಗಳಲ್ಲಿ ಹೆಚ್ಚಿನ ಮಕ್ಕಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಕ್ರಿಯರಾಗಿದ್ದಾರೆ. ಅವುಗಳಿಗೆ ಅಂಟಿಕೊಂಡಿದ್ದಾರೆ. ಈ ಸಮಸ್ಯೆಯಿಂದ ಮಕ್ಕಳನ್ನು ಹೊರತರಲು ಶಾಲೆಗಳು ಹೆಣಗಾಡುತ್ತಿವೆ. ವಿದ್ಯಾರ್ಥಿಗಳು ಶಿಕ್ಷಕರಿಗೇ 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸುವುದು, ಗ್ರೂಪ್ ಚಾಟ್‌ಗಳಲ್ಲಿ ತೊಡಗಿಸಿಕೊಳ್ಳುವ ಪ್ರಕರಣಗಳೂ ಪತ್ತೆಯಾಗಿವೆ. ಕೆಲ ವಿದ್ಯಾರ್ಥಿಗಳು ಸಮವಸ್ತ್ರದಲ್ಲೇ 'ರೀಲ್ಸ್' ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಶಾಲಾ ಸಿಬ್ಬಂದಿಯ ಪ್ರಕಾರ, ಮಕ್ಕಳು ಇನ್‌ಸ್ಟಾ ಗ್ರಾಂ, ಫೇಸ್‌ಬುಕ್, ಸ್ನ್ಯಾಪ್‌ಚಾಟ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದಾರೆ.

'ತಮ್ಮ ಮಕ್ಕಳಿಗೆ ಸೇರಿದ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿಷ್ಕ್ರಿಯಗೊಳಿಸಬೇಕು ಎಂದು ಸೂಚಿಸಿ ಪೋಷಕರಿಗೆ ಸುತ್ತೋಲೆ ಕಳುಹಿಸಲಾಗಿದೆ. ಸಂವಹನದ ಉದ್ದೇಶಕ್ಕಾಗಿ ಮಕ್ಕಳಿಗೆ ಮೊಬೈಲ್‌ನ ಆವಶ್ಯಕತೆ ಇದ್ದಾಗಷ್ಟೇ ನೀಡಬೇಕು. ಸ್ಮಾರ್ಟ್‌ಫೋನ್ ಅಗತ್ಯವಿದ್ದಾಗ ಶಾಲೆಯ ಗಮನಕ್ಕೆ ತರಲು ಸೂಚಿಸಲಾಗಿದೆ' ಎಂದು ಬನಶಂಕರಿ 3ನೇ ಹಂತದ ಲಿಟ್ಲ್ ಫ್ಲವರ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಬಿ. ಗಾಯಿತ್ರಿದೇವಿ ಮಾಹಿತಿ ನೀಡಿದರು.

'ಶಾಲೆಯ ಒಳಗೆ ಮೊಬೈಲ್ ಬಳಕೆಗೆ ಅನುಮತಿ ನೀಡಿಲ್ಲ. ಆದರೆ, ಮನೆಯಲ್ಲಿ, ಮಕ್ಕಳು ಬಳಸುತ್ತಿದ್ದಾರೆ. ಹೀಗಾಗಿ, ಪೋಷಕರು ಹೆಚ್ಚಿನ ಹೊಣೆಗಾರಿಕೆ ನಿಭಾಯಿಸಬೇಕು. 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತಮ್ಮ ನೈಜ ವಯಸ್ಸು ಮರೆಮಾಚಿ ಇನ್‌ಸ್ಟಾಗ್ರಾಂ ಖಾತೆಗಳನ್ನು ಹೊಂದಿರುವ ಉದಾಹರಣೆಗಳನ್ನು ನಾನು ನೋಡಿದ್ದೇನೆ. ಇದರಿಂದ ಅವರು ಅಪರಿಚಿತರ ಜೊತೆ ಸ್ನೇಹ ಬೆಳೆಸುವ ಅಪಾಯ ಇರುತ್ತದೆ' ಎಂದು ಆಕ್ಸ್‌ಫರ್ಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಪ್ರಾಂಶುಪಾಲ ಬಿ.ಆರ್. ಸುಪ್ರೀತ್ ಹೇಳಿದರು.

ಕೆಲವು ಶಾಲೆಗಳು ವಿದ್ಯಾರ್ಥಿಗಳಿಗೆ ಸಾಮಾಜಿಕ ಮಾಧ್ಯಮದ ನಡವಳಿಕೆ ಕಲಿಸಲು ಪ್ರತ್ಯೇಕ ಸಮಯವನ್ನು ನೀಡುತ್ತಿವೆ. ಮಕ್ಕಳ ಸುರಕ್ಷತೆಗಾಗಿ ಸರ್ಕಾರ ಬಲವಾದ ಸೈಬರ್ ನೀತಿ ಪರಿಚಯಿಸಬೇಕು ಎನ್ನುವುದು ಶಾಲಾ ಆಡಳಿತ ಮಂಡಳಿಗಳ ಒತ್ತಾಯ.

2009ರ ಪ್ರಸ್ತಾವ ಕೈಬಿಟ್ಟ ಸರ್ಕಾರ • ಲಭ್ಯ ಜಾಗದಲ್ಲಿಯೇ ಬಿಬಿಎಂಪಿಯಿಂದ ರಸ್ತೆ ಅಭಿವೃದ್ಧಿ

ಬಳ್ಳಾರಿ, ಜಯಮಹಲ್ ರಸ್ತೆ ವಿಸ್ತರಣೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಶಕದಿಂದ ಹಲವು ಅಡೆತಡೆಗಳನ್ನು ಎದುರಿಸುತ್ತಿದ್ದ ಅರಮನೆ ಮೈದಾನದ ಪ್ರದೇಶವನ್ನು ಬಳಸಿಕೊಂಡು ಜಯಮಹಲ್ ರಸ್ತೆ ಹಾಗೂ ಬಳ್ಳಾರಿ ರಸ್ತೆ ವಿಸ್ತರಿಸುವ ಯೋಜನೆಯನ್ನು ಸರ್ಕಾರ ಇದೀಗ ಕೈಬಿಟ್ಟಿದೆ. ಬಿಬಿಎಂಪಿ 2009ರಲ್ಲಿ ಸಲ್ಲಿಸಿದ್ದ ಪ್ರಸ್ತಾವವನ್ನೂ ಹಿಂಪಡೆದಿದೆ.

ಅರಮನೆ ಮೈದಾನದ ಸ್ವತ್ತಿನ ಮಾಲೀಕತ್ವ ಕುರಿತ ನ್ಯಾಯಾಲಯದಲ್ಲಿ ವಿವಾದವಿದೆ. ಈ ವಿವಾದ ಇತ್ಯರ್ಥವಾಗುವವರೆಗೆ ಟಿಡಿಆರ್ ನೀಡಲು ಅವಕಾಶವಿಲ್ಲ. ಅಲ್ಲದೆ, ಇದು ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿದೆ. ಹೀಗಾಗಿ, ಅರಮನೆ ಮೈದಾನದ ಭಾಗಶಃ 15 ಎಕರೆ 39 ಗುಂಟೆ ಜಾಗವನ್ನು ಜಯಮಹಲ್ ಹಾಗೂ ಬಳ್ಳಾರಿ ರಸ್ತೆ ವಿಸ್ತರಣೆ ಉದ್ದೇಶಕ್ಕೆ ಬಿಬಿಎಂಪಿ ವಶಕ್ಕೆ ಪಡೆಯುವ ಪ್ರಸ್ತಾವವನ್ನು ಕೈಬಿಡಲಾಗಿದೆ.

ಬಿಬಿಎಂಪಿ ಕೂಡ 2009ರ ಮಾರ್ಚ್ 30ರಂದು ಸರ್ಕಾರಕ್ಕೆ ಸಲ್ಲಿಸಿದ್ದ ಈ ರಸ್ತೆ ವಿಸ್ತರಣೆ ಯೋಜನೆಯ ಪ್ರಸ್ತಾವವನ್ನು ಹಿಂಪಡೆಯಲಾಗುತ್ತದೆ ಎಂದು ತಿಳಿಸಿರುವುದರಿಂದ, ಅದನ್ನು ಮಾನ್ಯ ಮಾಡಿ ಪ್ರಸ್ತಾವವನ್ನು ಹಿಂದಿರುಗಿಸಿ ಸರ್ಕಾರ ಡಿ.8ರಂದು ಆದೇಶ ಹೊರಡಿಸಿದೆ.

ಬಳ್ಳಾರಿ ರಸ್ತೆಯಲ್ಲಿ ವಾಹನ ದಟ್ಟಣೆ —ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಬಿಬಿಎಂಪಿ ಬಳಿ ಲಭ್ಯವಿರುವ ಜಾಗದಲ್ಲಿಯೇ ಭೌಗೋಳಿಕ ರಚನೆಯನ್ನು ಪರಿಶೀಲಿಸಿ, ಮೇಲ್ಸೇತುವೆ, ಕೆಳಸೇತುವೆಗಳ ನಿರ್ಮಾಣದ ಮೂಲಕ ವಾಹನ ದಟ್ಟಣೆ ಪರಿಹರಿಸಬೇಕು. ಬೆಂಗಳೂರು ಅರಮನೆ ಅಧಿನಿಯಮ 1996ರಲ್ಲಿ ಸ್ವತ್ತನ್ನು ರಸ್ತೆ ವಿಸ್ತರಣೆಗಾಗಿ ಕೋರುವ ಅಗತ್ಯ ಇಲ್ಲ. ಅಧಿನಿಯಮದಲ್ಲಿರುವ ಸ್ವತ್ತಿನ ಪೈಕಿ ಯಾವುದೇ ಭೂಮಿಯನ್ನು ಕೋರಿಲ್ಲವಾದ್ದರಿಂದ ₹1,396 ಕೋಟಿಯಷ್ಟು ಅಭಿವೃದ್ಧಿ ಹಕ್ಕುಗಳನ್ನು ವಿತರಿಸಬೇಕಾಗುವುದಿಲ್ಲ. 15 ಎಕರೆ 39 ಗುಂಟೆಗೆ ₹11 ಕೋಟಿ ಪರಿಹಾರದ ಬದಲಿಗೆ ಟಿಡಿಆರ್ ವಿತರಿಸಿದರೆ, ಸುಪ್ರೀಂಕೋರ್ಟ್ ಅಧಿನಿಯಮವನ್ನು ಮಾನ್ಯ ಮಾಡಿದರೆ ಟಿಡಿಆರ್ ವಾಪಸ್ ಪಡೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿ ಇರುವ ಭೂಮಿಯಲ್ಲೇ ಬಿಬಿಎಂಪಿ ಯೋಜನೆ ಕೈಗೊಳ್ಳಲಿ ಎಂದು ಆದೇಶದಲ್ಲಿ ಸೂಚಿಸಲಾಗಿದೆ.

272 ಮರಗಳ ರಕ್ಷಣೆ!

ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆಯ ತೀರ್ಮಾನದಂತೆ ಬಿಬಿಎಂಪಿ ಲಭ್ಯವಿರುವ ಜಾಗದಲ್ಲೇ ರಸ್ತೆ ವಿಸ್ತರಣೆ ಕೈಗೊಳ್ಳುವುದಾಗಿ ಯೋಜನೆಯ ವಿವರವನ್ನು ಸುಪ್ರೀಂಕೋರ್ಟ್‌ಗೆ ಅ.18ರಂದು ಸಲ್ಲಿಸಿದೆ. ಅದರಂತೆ, 2009ರ ಪ್ರಸ್ತಾವ ವಾಪಸ್ ಪಡೆದು, ಯೋಜನೆಯನ್ನು ಪುನರ್‌ಪರಿಶೀಲಿಸಲಾಗಿದೆ.

ಬಳ್ಳಾರಿ ರಸ್ತೆಯನ್ನು ಬಿಡಿಎ ವೃತ್ತದಿಂದ ಮೇಖ್ರಿ ವೃತ್ತದವರೆಗೆ ವಿಸ್ತರಣೆ ಮಾಡಿದರೆ, ವಿವಿಧ ಅಗಲ ರಸ್ತೆಯಾಗಿ ದಟ್ಟಣೆ ಹೆಚ್ಚಾಗುತ್ತದೆ. ಮೇಖ್ರಿ ವೃತ್ತದಲ್ಲಿ ರಕ್ಷಣಾ ಇಲಾಖೆ ಭೂಮಿಯನ್ನೂ ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ರಸ್ತೆ ವಿಸ್ತರಣೆಯನ್ನು ಕೈಬಿಟ್ಟು, ಮೇಖ್ರಿ ವೃತ್ತದಿಂದ ಬಿಡಿಎ ವೃತ್ತದ ವರೆಗೆ ಏಕರೂಪ ರಸ್ತೆಯನ್ನು ಲಭ್ಯವಿರುವ ರಸ್ತೆಯ ಒಟ್ಟು ಅಗಲ ಬಳಸಿಕೊಂಡು ಪುನರ್ ವಿನ್ಯಾಸಗೊಳಿಸಿ ನಿರ್ಮಿಸಲು ಉದ್ದೇಶಿಸಿದೆ. ಹೀಗೆ ಮಾಡುವುದರಿಂದ 172 ಮರಗಳನ್ನು ತೆರವು ಮಾಡುವ ಬದಲು, 58 ಮರಗಳನ್ನು ಮಾತ್ರ ತೆರವು ಮಾಡಬೇಕಾಗುತ್ತದೆ. 124 ಮರಗಳನ್ನು ಉಳಿಸಬಹುದು ಎಂದು ಬಿಬಿಎಂಪಿ ಪ್ರಸ್ತಾವದಲ್ಲಿ ತಿಳಿಸಿದೆ.

ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗೆ ವಿಸ್ತರಿಸುವ ಯೋಜನೆಯನ್ನು ಪುನರ್‌ಪರಿಶೀಲಿಸಿ, ರಕ್ಷಣಾ ಇಲಾಖೆ, ಸಿ.ವಿ. ರಾಮನ್ ಸಂಶೋಧನಾ ಸಂಸ್ಥೆಯ ಭೂಸ್ವಾಧೀನವನ್ನು ಕೈಬಿಟ್ಟು, ಲಭ್ಯವಿರುವ ರಸ್ತೆಯ ಒಟ್ಟು ಅಗಲ ಬಳಸಿಕೊಂಡು ಪುನರ್ ವಿನ್ಯಾಸಗೊಳಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಹಿಂದಿನ ಯೋಜನೆಯಂತೆ 162 ಮರಗಳನ್ನು ತೆರವುಗೊಳಿಸಬೇಕಾಗಿದ್ದು, ಇದೀಗ 14 ಮರಗಳನ್ನು ಮಾತ್ರ ತೆರವುಗೊಳಿಸಿ 148 ಮರಗಳನ್ನು ಉಳಿಸಬಹುದಾಗಿದೆ ಎಂದು ಬಿಬಿಎಂಪಿ ಹೇಳಿದೆ.

ಬಳ್ಳಾರಿ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆ ಕಾಮಗಾರಿಗೆ ₹56 ಕೋಟಿ ಒದಗಿಸಲಾಗಿದ್ದು ಜೆಎಂಸಿ ಸಂಸ್ಥೆ ಏಕರೂಪ ಅಗಲ ರಸ್ತೆಯ ಕಾಮಗಾರಿ ನಡೆಸುತ್ತಿದೆ. ಹೀಗಾಗಿ, 15 ಎಕರೆ 39 ಗುಂಟೆ ಭೂಸ್ವಾಧೀನದ ಯೋಜನೆ ಪ್ರಸ್ತಾವ ಕೈಬಿಡಲಾಗಿದೆ ಎಂದು ಬಿಬಿಎಂಪಿ ವಿವರಿಸಿದೆ.

ಅರಮನೆ ಮೈದಾನದ 15 ಎಕರೆ 39 ಗುಂಟೆಗೆ ಟಿಡಿಆರ್ ನಿಯಮಾವಳಿಯಂತೆ ಸರ್ಕಾರ 2016ರ ಸೆ. 7ರ ಹೈಕೋರ್ಟ್ ಆದೇಶದಂತೆ ಅನುಮೋದನೆ ನೀಡಿತ್ತು. 2021ರ ಫೆ.15ರಂದು ಬಿಬಿಎಂಪಿ ಆಯುಕ್ತರು ರಸ್ತೆ ವಿಸ್ತರಣೆ ಯೋಜನೆ ಬಗ್ಗೆ ಚರ್ಚಿಸಿ ಪ್ರಸ್ತಾವವನ್ನು ಮರುಪರಿಶೀಲಿಸುವಂತೆ ಕೋರಿದ್ದರು. ಅರಮನೆ ಜಾಗಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ 2014ರಲ್ಲಿ ನೀಡಿದ್ದ ಆದೇಶವನ್ನು ಅನುಷ್ಠಾನಗೊಳಿಸಲು ತೊಂದರೆ ಇದೆ. ಹೀಗಾಗಿ, ಪುನರ್ ಪರಿಗಣಿಸಿ ಎಂದು ಐಎ ಸಲ್ಲಿಸಲಾಗಿತ್ತು. ಸುಪ್ರೀಂಕೋರ್ಟ್ 2022 ಮೇ 17ರಂದು 2014ರ ಆದೇಶವನ್ನು ರದ್ದುಗೊಳಿಸಿ ಅರ್ಜಿ ವಿಲೇವಾರಿ ಮಾಡಿತ್ತು. ಈ ನಂತರ ಮುಖ್ಯಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಸ ಸಭೆಗಳಲ್ಲಿ ಟಿಡಿಆರ್ ನೀಡಲು ಅವಕಾಶ ಇಲ್ಲದ ಬಗ್ಗೆ ಚರ್ಚೆ ನಡೆಯಿತು. ಅಂತಿಮವಾಗಿ ಭೂಸ್ವಾಧೀನ ರಸ್ತೆ ವಿಸ್ತರಣೆ ಯೋಜನೆ ಕೈಬಿಡಲು ನಿರ್ಧರಿಸಲಾಗಿದೆ.

ಸುದ್ದಿ 2 ನಿಮಿಷ

ಖಾಸಗಿ ಸಹಭಾಗಿತ್ವದಲ್ಲಿ ಗೂಡ್ಸ್‌ಶೆಡ್‌ಗಳ ಅಭಿವೃದ್ಧಿ

ಬೆಂಗಳೂರು: ರೈಲ್ವೆ ಗೂಡ್ಸ್‌ಶೆಡ್‌ಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಮುಂದಾಗಿರುವ ರೈಲ್ವೆ ಮಂಡಳಿ, ಪಾಲುದಾರ ಸಂಸ್ಥೆಗಳೊಂದಿಗೆ ಸಭೆ ನಡೆಸಿತು.

ಕಾರ್ಗೊ ಟರ್ಮಿನಲ್‌ಗಳ ಅಭಿವೃದ್ಧಿಗೆ 2021 ಡಿಸೆಂಬರ್‌ನಲ್ಲಿ ಪರಿಚಯಿಸಿದ ಗತಿಶಕ್ತಿ ಕಾರ್ಗೊ ಟರ್ಮಿನಲ್(ಜಿಸಿಟಿ) ನೀತಿ ಪ್ರಕಾರ ಗೂಡ್ಸ್‌ಶೆಡ್‌ಗಳ ಅಭಿವೃದ್ಧಿಗೆ ಸಭೆ ನಡೆಸಲಾಯಿತು.

ರೈಲ್ವೆ ಮಂಡಳಿ ಕಾರ್ಯನಿರ್ವಾಹಕ ನಿರ್ದೇಶಕ(ಸರಕು ಸಾಗಣೆ) ಮುದಿತ್ ಚಂದ್ರ, ಕಾರ್ಯನಿರ್ವಾಹಕ ನಿರ್ದೇಶಕ(ಹಣಕಾಸು ಮತ್ತು ವಾಣಿಜ್ಯ) ರವೀಂದ್ರ ಮಿಶ್ರಾ ಅವರು ಪಾಲುದಾರರೊಂದಿಗೆ ಸಂವಾದ ನಡೆಸಿದರು.

ಗೂಡ್ಸ್‌ಶೆಡ್‌ಗಳ ನಿರ್ವಹಣೆ ಜವಾಬ್ದಾರಿಯನ್ನು ಅನುಭವಿ ಸಂಸ್ಥೆಗಳಿಗೆ ಬಹಿರಂಗ ಹರಾಜಿನ ಮೂಲಕ ವಹಿಸಲಾಗುತ್ತದೆ. ಸಾರಿಗೆ, ಲಾಜಿಸ್ಟಿಕ್ಸ್ ಅಥವಾ ಸಂಬಂಧಿತ ವ್ಯವಹಾರದಲ್ಲಿ ಕನಿಷ್ಠ 2 ವರ್ಷಗಳ ಅನುಭವ ಹೊಂದಿರುವ ಸಂಸ್ಥೆ ಬಿಡ್‌ನಲ್ಲಿ ಸ್ಪರ್ಧಿಸಬಹುದು. ಗರಿಷ್ಠ 20 ವರ್ಷಗಳ ಅವಧಿಗೆ ಒಪ್ಪಂದ ಏರ್ಪಡಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದರು.

ಜೆ.ಕೆ. ಸಿಮೆಂಟ್ಸ್ ಲಿಮಿಟೆಡ್, ಪುಯ್ವಾಸ್ಟ್ ಮ್ಯಾರಿಟೈಮ್ ಇಂಡಿಯಾ ಲಿಮಿಟೆಡ್, ಅದಾನಿ ಲಾಜಿಸ್ಟಿಕ್ಸ್ ಲಿಮಿಟೆಡ್, ಬ್ವಾಲಾಜಿ ವೇರ್‌ಹೌಸಿಂಗ್, ಅಲ್ಟ್ರಾ ಟೆಕ್ ಸಿಮೆಂಟ್, ಪಾಲ್ಮಾಟ್ ಇಂಜಿನಿಯರಿಂಗ್, ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್, ಬೆಂಗಳೂರು ಸ್ಥಳೀಯ ಲಾರಿ ಮಾಲೀಕರ ಸಂಘ, ಕರ್ನಾಟಕ ರೋಲರ್ ಫ್ಲೋರ್‌ಮಿಲ್ ಅಸೋಸಿಯೇಷನ್, ಎಎನ್‌ಜೆ ಅಮೆಜಾನ್ ಸೊಲ್ಯೂಷನ್, ಡಿಎಲ್‌ಐ, ಡಿಪಿಐಶ್ ವರ್ಲ್ಡ್, ಡಿಎಲ್‌ಐ, ರೈಟ್ಸ್ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

'ಉತ್ತಮ ಸಂಸ್ಕಾರ, ಮೌಲ್ಯ ಇರಲಿ'

ಯಲಹಂಕ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಒಳ್ಳೆಯ ಸಂಸ್ಕಾರ ಹಾಗೂ ಮೌಲ್ಯ ಅಳವಡಿಸಿಕೊಳ್ಳಬೇಕು ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಹೇಳಿದರು.

ಸರ್.ಎಂ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಆರಂಭ್-2022' ಪ್ರಥಮ ವರ್ಷದ ಎಂಜಿನಿಯರಿಂಗ್ ತರಗತಿ ಉದ್ಘಾಟಿಸಿ ಮಾತನಾಡಿದ ಅವರು, 'ತಂದೆ-ತಾಯಿಗಳು ಮತ್ತು ಗುರುಹಿರಿಯರನ್ನು ಗೌರವಿಸಬೇಕು. ಒಳ್ಳೆಯ ವಿದ್ಯಾವಂತರಾಗಿ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ದೇಶದ ಬಗ್ಗೆ ಪ್ರೀತಿ, ಅಭಿಮಾನ ಹೊಂದುವ ಮೂಲಕ ಅಭಿವೃದ್ಧಿಗೆ ಕೊಡುಗೆ ನೀಡಬೇಕು' ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಪರೀಕ್ಷೆಗಳಲ್ಲಿ ರ‍್ಯಾಂಕ್ ಪಡೆದ ಪ್ರತಿಭಾವಂತ ಹಾಗೂ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕೃಷ್ಣದೇವರಾಯ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಎ.ಎಸ್.ಚಂದ್ರಶೇಖರರಾಜು, ಉಪಾಧ್ಯಕ್ಷ ಕೆ.ವಿ.ಶೇಖರರಾಜು, ಕಾರ್ಯದರ್ಶಿ ಕೆ.ಶ್ಯಾಮರಾಜು, ಖಜಾಂಚಿ ಎಂ.ವೆಂಕಟರಮಣರಾಜು, ಪ್ರಾಂಶುಪಾಲ ಎಸ್.ಜಿ.ರಾಕೇಶ್ ಉಪಸ್ಥಿತರಿದ್ದರು.

ಚಾಮರಾಜಪೇಟೆ 5ನೇ ಮುಖ್ಯರಸ್ತೆಯಲ್ಲಿ ತಳ್ಳುವ ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುವವರು ಗ್ರಾಹಕರಿಗಾಗಿ ಕಾದಿದ್ದರು (ಎಡ ಚಿತ್ರ) ಮೈಕೊರೆಯುವ ಚಳಿ ಹಾಗೂ ತುಂತುರು ಮಳೆ ನಡುವೆ ಯುವಕನೊಬ್ಬ ಸ್ಕೇಟಿಂಗ್ ಮಾಡುತ್ತಾ ಭಾನುವಾರ ವಿಧಾನಸೌಧ ಎದುರು ಸಾಗಿದರು

ನಿರಂತರ ಮಳೆ: ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ದಿನವಿಡೀ ಮಳೆ ಸುರಿದು ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಶನಿವಾರ ರಾತ್ರಿಯೂ ಗಾಳಿಯ ರಭಸ ಜೋರಾಗಿತ್ತು. ಚಳಿ ತೀವ್ರತೆಯಿಂದ ಜನರು ಮನೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಭಾನುವಾರ ರಜೆಯಿದ್ದರಿಂದ ಬಹುತೇಕರು ಮನೆಯಲ್ಲಿ ಕಾಲಕಳೆದರು. ವ್ಯಾಪಾರ ಸಹ ಕ್ಷೀಣಿಸಿತ್ತು. ಬೀದಿಬದಿಯ ವ್ಯಾಪಾರಿಗಳು ತೊಂದರೆ ಅನುಭವಿಸಿದರು.

ನಗರದ ವಿವಿಧೆಡೆ ನಿರಂತರ ಮಳೆಯಾದರೆ ಕೆಲವು ಪ್ರದೇಶದಲ್ಲಿ ಬಿಟ್ಟುಬಿಟ್ಟು ಮಳೆ ಸುರಿಯಿತು. ರಸ್ತೆಗಳಲ್ಲಿ ಬಿದ್ದಿದ್ದ ಗುಂಡಿಗಳಲ್ಲಿ ಮಳೆಯ ನೀರು ಸಂಗ್ರಹಗೊಂಡು ಬೈಕ್ ಸವಾರರು ಪರದಾಡಿದರು.

ಚಿಕ್ಕಪೇಟೆ, ಕೆ.ಆರ್.ಮಾರುಕಟ್ಟೆ, ಮೆಜೆಸ್ಟಿಕ್, ಗಾಂಧಿ ನಗರದಲ್ಲೂ ಅಗತ್ಯ ವಸ್ತುಗಳ ಖರೀದಿಗೆ ಬಂದವರ ಸಂಖ್ಯೆಯೂ ಕಡಿಮೆಯಾಗಿತ್ತು.

ವಿಜಯನಗರ, ರಾಜರಾಜೇಶ್ವರಿ ನಗರ, ಟಿ.ದಾಸರಹಳ್ಳಿ, ಸುಂಕದಕಟ್ಟೆ, ಯಶವಂತಪುರ, ಹೆಗ್ಗನಹಳ್ಳಿ, ಹೆಬ್ಬಾಳ, ರಾಜಗೋಪಾಲನಗರ, ಶ್ರೀರಾಮಪುರ, ಸುಬ್ರಹ್ಮಣ್ಯ ನಗರ, ಚಂದ್ರಾಲೇಔಟ್‌ನಲ್ಲಿ ನಿರಂತರ ಮಳೆ ಆಯಿತು. ಕಲಾಸಿಪಾಳ್ಯ, ಚಾಮರಾಜಪೇಟೆ, ಉಪ್ಪಾರಪೇಟೆ, ಜೆ.ಜೆ.ನಗರ, ಮಾಗಡಿ ರಸ್ತೆ, ವಿಜಯನಗರದಲ್ಲೂ ಮಳೆಯಾಯಿತು.

ಚಳಿ ಹಾಗೂ ಮಳೆಯಿಂದ ಉದ್ಯಾನಗಳಲ್ಲಿ ಜನರು ಕಾಣಿಸಿಕೊಳ್ಳಲಿಲ್ಲ.

ಬಿಜೆಪಿ, ಕಾಂಗ್ರೆಸ್‌ಗಿಂತ ಜೆಡಿಎಸ್ ಮುಂದಿದೆ: ಎಚ್‌ಡಿಕೆ

ಬೆಂಗಳೂರು: 'ರಾಜ್ಯ ರಾಜಕಾರಣದಲ್ಲಿ ಜೆಡಿಎಸ್ ಪಕ್ಷದ ಬಲ ಹೆಚ್ಚುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗಿಂತಲೂ ನಮ್ಮ ಪಕ್ಷ ಮುಂದಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮತ್ತು ಬಿಜೆಪಿಯ 53 ಮುಖಂಡರನ್ನು ಜೆಡಿಎಸ್‌ಗೆ ಸ್ವಾಗತಿಸಿದ ಬಳಿಕ ಅವರು ಮಾತನಾಡಿದರು.

'ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಎರಡೂ ತಿಂಗಳಿಗೊಮ್ಮೆ ಆಂತರಿಕ ಸಮೀಕ್ಷೆ ನಡೆಸುತ್ತಿವೆ. ಜೆಡಿಎಸ್ ಕನಿಷ್ಠ 55 ಸ್ಥಾನ ಗಳಿಸಲಿದೆ ಎಂದು ಬಿಜೆಪಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಹೇಳಿದೆ. ಆದರೆ, ನಾವು ಕನಿಷ್ಠ 123 ಸ್ಥಾನ ಗಳಿಸಿ ಅಧಿಕಾರ ಹಿಡಿಯುವುದು ನಿಶ್ಚಿತ' ಎಂದರು.

'ಜೆಡಿಎಸ್ ಪಕ್ಷದ ಕಾರ್ಯಕರ್ತರ ಬಲವನ್ನು ಎದುರಿಸಲು ಸಾಧ್ಯವಾಗದವರು ಪೊಲೀಸರ ಮೂಲಕ ಹೆದರಿಸಲು ಪ್ರಯತ್ನಿಸಬಹುದು. ಯಾವುದೇ ಕ್ಷೇತ್ರದಲ್ಲಿ ಅಂತಹ ಪ್ರಯತ್ನ ನಡೆದರೆ ತಕ್ಷಣ ಗಮನಕ್ಕೆ ತರಬೇಕು ಎಂದರು.

ಎಚ್ಚರಿಕೆಯ ನಡೆ ಅಗತ್ಯ: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮಾತನಾಡಿ, 'ರಾಷ್ಟ್ರ, ರಾಜ್ಯ ರಾಜಕೀಯದಲ್ಲಿ ಹಲವು ಬೆಳವಣಿಗೆಗಳು ನಡೆಯುತ್ತಿವೆ. ನಾವು ಪಕ್ಷ ಕಟ್ಟುವುದಕ್ಕೆ ಹೆಚ್ಚು ಒತ್ತು ನೀಡ ಬೇಕು. ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು ಎಂದರು.

ಚಾಮರಾಜಪೇಟೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದರಾಜು, ಬಿಬಿಎಂಪಿ ಮಾಜಿ ಉಪ ಮೇಯರ್ ಶ್ರೀರಾಮೇಗೌಡ, ಮಾಜಿ ಸದಸ್ಯೆ ಗೌರಮ್ಮ, ಕಾಂಗ್ರೆಸ್ ಮುಖಂಡರಾದ ಶೇಖರ್, ದೊರೆ ಮುಂತಾದವರು ಕಾಂಗ್ರೆಸ್ ಮತ್ತು ಬಿಜೆಪಿ ತೊರೆದು ಜೆಡಿಎಸ್ ಸೇರಿದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಆರ್. ಪ್ರಕಾಶ್, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಇದ್ದರು.

ನಗರದಲ್ಲಿ ಇಂದು

ಉತ್ತಮ ಆಡಳಿತ ಮತ್ತು ಮಾನವ ಹಕ್ಕುಗಳು ಕಾರ್ಯಾಗಾರ: ಉದ್ಘಾಟನೆ: ಬಿ.ಎಸ್. ಪಾಟೀಲ್, ಅತಿಥಿಗಳು: ಶಾಲಿನಿ ರಜನೀಶ್, ಅಧ್ಯಕ್ಷತೆ: ಜಯಕರ್ ಎಸ್.ಎಂ., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಸ್ಥಳ: ಎಚ್.ಎನ್. ಸಭಾಂಗಣ, ಬೆಳಿಗ್ಗೆ 10.30

ಸಾಂಸ್ಕೃತಿಕ ರಂಗೋತ್ಸವ: ಸೆಲ್ಫಿ ರಾಜ ಮತ್ತು ಚಾಟಿಂಗ್‌ರಾಜ ನಾಟಕ ಪ್ರದರ್ಶನ: ಉದ್ಘಾಟನೆ: ಮಲ್ಲು, ಅಧ್ಯಕ್ಷತೆ: ರಾಜು ಮಳವಳ್ಳಿ, ಅತಿಥಿಗಳು: ಚಂದ್ರಶೇಖರ್, ನಿರ್ದೇಶನ: ಪ್ರದೀ, ಸಂಗೀತ: ಎಲ್. ಆರ್. ರಾಕೇಶ್, ಆಯೋಜನೆ: ರಂಗ ಕಳಸ ಕಲಾವಿದರು, ಸ್ಥಳ: ಸಾಂಸ್ಕೃತಿಕ ಸಮುಚ್ಛಯ ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.45

ಜೆ.ಎಸ್.ಎಸ್ ರಂಗೋತ್ಸವ: ಉದ್ಘಾಟನೆ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಕೆ.ವಿ. ನಾಗರಾಜ ಮೂರ್ತಿ, ಉದ್ಘಾಟನೆ: ಕೆ. ಸುಚೇಂದ್ರ ಪ್ರಸಾದ್, ಅತಿಥಿಗಳು: ವಲ್ಲಭಸೂರಿ, 'ಒಗಟಿನ ರಾಣಿ' ನಾಟಕ ಪ್ರದರ್ಶನ: ರಚನೆ: ಕೆ. ರಾಮಯ್ಯ, ನಿರ್ದೇಶನ: ಶಕುಂತಲಾ ಹೆಗಡೆ, ಅಭಿನಯ: ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು, ಮೈಸೂರು, ಆಯೋಜನೆ: ಜೆಎಸ್‌ಎಸ್ ಮಹಾವಿದ್ಯಾಲಯ, ಸ್ಥಳ: ಶಿವರಾತ್ರಿಶ್ವರ ಕೇಂದ್ರ ಸಭಾಂಗಣ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 11 ವೇದಿಕೆ ಕಾರ್ಯಕ್ರಮ, ನಾಟಕ ಪ್ರದರ್ಶನ ಮಧ್ಯಾಹ್ನ 12

ನಟ ಅಶೋಕ್ ಬರೆದ 'ಗೆಳೆಯ ಶಿವಾಜಿ' ಪುಸ್ತಕ ಬಿಡುಗಡೆ: ನೀನಾಸಂ ಸತೀಶ್, ಅತಿಥಿಗಳು: ಸಿ.ಎಸ್. ದ್ವಾರಕಾನಾಥ್, ಕೃತಿ ಪರಿಚಯ: ಸುಮನಾ ಕಿತ್ತೂರು, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಉಪಸ್ಥಿತಿ: ಅಶೋಕ್, ಆಯೋಜನೆ: ಬೀ ಕಲ್ಚರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು (ಸಿಪಿಕೆ) ಸಭಾಂಗಣ, ಕುಮಾರಕೃಪಾ ರಸ್ತೆ, ಸಂಜೆ 5.30

'ಶ್ರೀಗುರು ನಾರಾಯಣ ವೈಭವ' ನಾಟಕ ಪ್ರದರ್ಶನ: ಅತಿಥಿಗಳು: ಜಗದೀಶ್.ಜಿ. ಮಳ್ಳಾಲ್ಗದ್ದೆ, ಬಿ. ನೀಲಮ್ಮ, ಪ್ರಕಾಶ್ ರಾಜ್ ಮೇಹು, ಮೂ.ಚಿ. ರಾಮಕೃಷ್ಣ, ಎಚ್.ವಿ. ಮೀನಾ, ಎಸ್. ಉಮೇಶ್, ನಿರ್ದೇಶನ: ಮಹೇಶ್ ಸಾಗರ್, ಆಯೋಜನೆ: ಕಲಾ ಸಾಗರ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

'ಸರ್ವಪಕ್ಷ ಸಭೆ ಕರೆಯಲಿ'

ಬೆಳಗಾವಿ: 'ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಕುರಿತು ಮಾತುಕತೆ ನಡೆಸಲು ಡಿ.14ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಉಭಯ ರಾಜ್ಯದ ಸಿ.ಎಂಗಳ ಸಭೆ ಕರೆದಿದ್ದಾರೆ. ಇದಕ್ಕೂ ಮುನ್ನ, ಸಿ.ಎಂ ಬೊಮ್ಮಾಯಿ ಸರ್ವಪಕ್ಷಗಳು, ಕನ್ನಡ ಸಂಘಟನೆಗಳ ಸಭೆ ಕರೆದು ಚರ್ಚಿಸಬೇಕು' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಒತ್ತಾಯಿಸಿದರು.

ನಶಿಸುತ್ತಿರುವ ವಿಶಿಷ್ಟ ಕಲೆಗಳ ಗುರುತು

ತಳಸಮುದಾಯದ ಕಲೆಗಳನ್ನು ಮುನ್ನೆಲೆಗೆ ತರಲು ಸಂಸ್ಕೃತಿ ಇಲಾಖೆ ಯೋಜನೆ

• ವರುಣ ಹೆಗಡೆ

ಬೆಂಗಳೂರು: ನಶಿಸುತ್ತಿರುವ ತಳಸಮುದಾಯಗಳ ವಿಶಿಷ್ಟ ಕಲೆಗಳನ್ನು ಮುನ್ನೆಲೆಗೆ ತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿದೆ.

ಈ ಸಂಬಂಧ ಇಲಾಖೆ ಪ್ರತ್ಯೇಕವಾಗಿ ಯೋಜನೆ ರೂಪಿಸಿ, ನಶಿಸುತ್ತಿರುವ ಕಲೆಗಳನ್ನು ಗುರುತಿಸಲಾರಂಭಿಸಿದೆ. ಈಗಾಗಲೇ ಕೆಲವು ಕಲೆಗಳನ್ನು ಗುರುತಿಸಲಾಗಿದೆ. ಈ ಕಲೆಗಳಲ್ಲಿ ಬಹುತೇಕವು ಜಾನಪದ ಪ್ರಕಾರಕ್ಕೆ ಸೇರಿವೆ. ಅಂಟಿಕೆ ಪಿಂಟಿಕೆ ಸೇರಿ ಗುರುತಿಸಲಾದ ಕಲೆಗಳಲ್ಲಿ ಕಲಾವಿದರ ಪಟ್ಟಿಯನ್ನೂ ಅಕಾಡೆಮಿಗಳ ನೆರವಿನಿಂದ ಸಿದ್ಧಪಡಿಸಲಾಗಿದೆ. ಈ ಕಲಾವಿದರ ನೆರವಿನಿಂದ ಸಮುದಾಯದ ಆಸಕ್ತರಿಗೆ ಕಲೆಯ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ. ತರಬೇತಿ ಪೂರ್ಣಗೊಂಡ ಬಳಿಕ ವಲಯ ಹಾಗೂ ರಾಜ್ಯಮಟ್ಟದಲ್ಲಿ ಕಲಾ ಪ್ರದರ್ಶನಕ್ಕೆ ವೇದಿಕೆಗಳನ್ನು ಇಲಾಖೆಯೇ ಕಲ್ಪಿಸಲಿದೆ.

ದುರ್ಗಮುರ್ಗಿ, ಜೋಗಿ ಪದ, ಲಾವಣಿ ಪದ, ಅಂಟಿಕೆ ಪಿಂಟಿಕೆ, ಮಾರಿ ಕುಣಿತ, ಚೌಡಿಕೆ ಪದ, ಸೋಬಾನೆ ಪದ, ಹೆಜ್ಜೆ ಮೇಳ, ಬುರ್ರಕಥಾ, ಹಗಲುವೇಷ, ಭೂತೇರ ನೃತ್ಯ ಸೇರಿ ಸುಮಾರು 40 ಕಲೆಗಳನ್ನು ಇಲಾಖೆ ಪಟ್ಟಿ ಮಾಡಿದೆ. ಗುರುತಿಸಲಾದ ಹೆಚ್ಚಿನ ಕಲೆಗಳು ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಲಿತದಲ್ಲಿದ್ದ ಕಲೆಗಳಾಗಿವೆ. ಈ ಕಲೆಗಳನ್ನು ಪ್ರದರ್ಶಿಸುತ್ತಿದ್ದ ಸಮುದಾಯದ ಎಲ್ಲ ವಯೋಮಾನದ ಆಸಕ್ತರಿಗೆ ಕಲಿಕಾ ಶಿಬಿರದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ಮುಂಬರುವ ಜನವರಿಯಿಂದ ರಾಜ್ಯದ ವಿವಿಧೆಡೆ ಈ ಶಿಬಿರ ನಡೆಯಲಿದೆ.

ಆಧುನಿಕತೆಯ ಭರಾಟೆಯಲ್ಲಿ ನಶಿಸುತ್ತಿರುವ ಗ್ರಾಮೀಣ ಭಾಗದ ಕೆಲ ಜಾನಪದ ಕಲೆಗಳನ್ನು ಗುರುತಿಸಿ, ಮುನ್ನೆಲೆಗೆ ತರಲು ಕಾರ್ಯಯೋಜನೆ ರೂಪಿಸಿದ್ದೇವೆ.

ಪ್ರಕಾಶ್ ನಿಟ್ಟಾಲಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಕಲೆಗೆ ಪ್ರೋತ್ಸಾಹ: 'ಜಾನಪದ ಸೇರಿ ವಿವಿಧ ಅಕಾಡೆಮಿಗಳ ನೆರವಿನಿಂದ ನಶಿಸುತ್ತಿರುವ ಕಲೆಗಳನ್ನು ಗುರುತಿಸುತ್ತಿದ್ದೇವೆ. ಆಧುನಿಕತೆಯ ಭರಾಟೆಯಲ್ಲಿ ಯುವ ಜನಾಂಗ ನಮ್ಮ ಜನಪದ ಕಲೆಗಳನ್ನು ಮರೆಯುತ್ತಿದೆ. ಆದ್ದರಿಂದ ದುರ್ಗಮುರ್ಗಿ ಜನಾಂಗ ಸೇರಿ ವಿವಿಧ ಸಮುದಾಯಗಳ ನಶಿಸುತ್ತಿರುವ ಅಪರೂಪದ ಕಲೆಗಳನ್ನು ಮುನ್ನೆಲೆಗೆ ತರಲು ಕ್ರಮವಹಿಸಿದ್ದೇವೆ. ಈ ಯೋಜನೆಯಿಂದ ಕಲೆಯನ್ನೇ ವೃತ್ತಿಯಾಗಿಸಿಕೊಂಡಿರುವ ಕಲಾವಿದರಿಗೂ ಪ್ರೋತ್ಸಾಹ ಸಿಗಲಿದೆ' ಎಂದು ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ತಿಳಿಸಿದರು.

'ಗ್ರಾಮೀಣ ಪ್ರದೇಶದಲ್ಲಿ ಅಂಟಿಕೆ ಪಿಂಟಿಕೆ, ಗೀಗೀ ಪದ, ಲಾವಣಿ ಸೇರಿ ವಿವಿಧ ಕಲೆಗಳ ಹಲವಾರು ಕಲಾವಿದರಿದ್ದಾರೆ. ಸದ್ಯ ಕಲೆಯನ್ನೇ ನಂಬಿಕೊಂಡಿರುವ ಸಮುದಾಯದವರಿಗೆ ಮಾತ್ರ ಕಲೆ ಕಲಿಸುತ್ತೇವೆ. ಮುಂದಿನ ದಿನಗಳಲ್ಲಿ ಬೇರೆ ಸಮುದಾಯದ ಆಸಕ್ತರಿಗೂ ಕಲಿಸಲಾಗುವುದು' ಎಂದರು.

ಬೆಂಗಳೂರಿನ ದಾಸರಹಳ್ಳಿಯಲ್ಲಿ ಭಾನುವಾರ ಆಯೋಜಿಸಿದ್ದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಬಂದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜನರತ್ತ ಕೈಬೀಸಿದರು

'ಮತ್ತೆ ಸಿ.ಎಂ ಆದರೆ ಬೇಡಿಕೆ ಈಡೇರಿಸುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಲ್ಕು ದಶಕಗಳಿಂದ ರಾಜಕೀಯ ಜೀವನದಲ್ಲಿದ್ದೇನೆ. ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಲು ನಿಮ್ಮೆಲ್ಲರ ಆಶೀರ್ವಾದ ಕಾರಣ. ಅಂತಹ ಅವಕಾಶ ಮತ್ತೊಮ್ಮೆ ಸಿಕ್ಕರೆ ನಿಮ್ಮ ಎಲ್ಲ ಬೇಡಿಕೆಗಳನ್ನು ಪೂರ್ತಿಗೊಳಿಸುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ದಾಸರಹಳ್ಳಿಯಲ್ಲಿ ಭಾನುವಾರ ಆಯೋಜಿಸಿದ್ದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಇಂದು ಜಾತಿ ವ್ಯವಸ್ಥೆ ಸೃಷ್ಟಿಯಾಗಲು ಕಾರಣ ಯಾರು? ಏಕೆ ಅಸಮಾನತೆ ನಿರ್ಮಾಣವಾಯಿತು? ಇದರ ವಿರುದ್ಧ ಕನಕದಾಸರು, ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರು ಹೋರಾಟ ಮಾಡಿದ್ದರು. ಕನಕದಾಸರು ಕುರುಬರು ಎನ್ನುವ ಕಾರಣಕ್ಕೆ ಅವರ ಪ್ರತಿಮೆ ನಿರ್ಮಾಣ ಮಾಡುತ್ತಿಲ್ಲ, ಅವರ ಆಶಯಗಳ ಕಾರಣಕ್ಕೆ, ದ್ವೇಷ, ಅಸಮಾನತೆ ತೊಡೆದು ಹಾಕಲು ಬುದ್ಧ, ಕನಕದಾಸ, ರಾಯಣ್ಣ ಅವರ ಪ್ರತಿಮೆ ಸ್ಥಾಪನೆ ಮಾಡಲಾಗುತ್ತಿದೆ' ಎಂದು ವಿವರ ನೀಡಿದರು.

'500 ವರ್ಷಗಳ ಹಿಂದೆ ಶೂದ್ರರಿಗೆ ವಿದ್ಯೆಗೆ ಅವಕಾಶ ಇರಲಿಲ್ಲ. ಅಂಬೇಡ್ಕರ್ ಅವರ ತಂದೆ ಬ್ರಿಟಿಷರ ಸೈನ್ಯದಲ್ಲಿ ಸುಬೇದಾರ್ ಆಗಿದ್ದರು. ಹೀಗಾಗಿ, ಅವರಿಗೆ ಓದಲು ಅವಕಾಶ ಸಿಕ್ಕಿತು. ಇತಿಹಾಸವನ್ನು ಎಲ್ಲರೂ ತಿಳಿದುಕೊಳ್ಳಬೇಕು. ಇತಿಹಾಸದ ಜ್ಞಾನ ಇಲ್ಲದವರು ಭವಿಷ್ಯವನ್ನು ಸೃಷ್ಟಿ ಮಾಡಲಾರರು. ಶೋಷಿತ ವರ್ಗದ ಜನರು ಶಿಕ್ಷಣ, ಸಂಘಟನೆ, ಹೋರಾಟದ ಮೂಲಕ ಸದೃಢರಾಗಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ಜಾತ್ಯತೀತ, ಪಕ್ಷಾತೀತವಾಗಿ ಸಂಘಟನೆ ಮಾಡಬೇಕು. ಮತ ಹಾಕುವಾಗ ಎಚ್ಚರಿಕೆ ವಹಿಸಬೇಕು. ನಿಮ್ಮ ಶ್ರೇಯಸ್ಸು ಬಯಸುವವರ ಜತೆ ಗಟ್ಟಿಯಾಗಿ ನಿಲ್ಲಬೇಕು. 1994-95ರಲ್ಲಿ ಹಣಕಾಸು ಸಚಿವನಾಗಿದ್ದಾಗ ಹಿಂದುಳಿದ ಜಾತಿಗಳಿಗೆ ಶೇ 33 ಮೀಸಲಾತಿ ಜಾರಿಗೆ ತರಲಾಯಿತು. ಇದು ನಮ್ಮ ಕೊಡುಗೆ. ಮಹಿಳೆಯರಿಗೆ ಶೇ 50 ಮೀಸಲಾತಿ ನೀಡಿದ್ದು ನಾವೇ. ಇವೆಲ್ಲವನ್ನೂ ಇಂದು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ' ಎಂದು ದೂರಿದರು.

ನಿಧನ ವಾರ್ತೆ

ನಿವೃತ್ತ ಲೆಫ್ಟಿನೆಂಟ್ ಜನರಲ್ ಪಾಟೀಲ

ಬೆಂಗಳೂರು: ನಿವೃತ್ತ ಲೆಫ್ಟಿನೆಂಟ್ ಜನರಲ್ ವಿ.ಎಂ. ಪಾಟೀಲ (84) ಅವರು ಭಾನುವಾರ ನಿಧನರಾದರು.

ಪಾಟೀಲ ಅವರು 1962ರ ಭಾರತ, ಚೀನಾ ಯುದ್ಧ ಮತ್ತು 1965ರ ಭಾರತ ಹಾಗೂ ಪಾಕಿಸ್ತಾನ ಯುದ್ಧದ ವೇಳೆ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ವಿಯೆಟ್ನಾಂ, ಲಾವೋಸ್ ಮತ್ತು ಕಾಂಬೋಡಿಯಾದ ಭಾರತೀಯ ರಾಯಭಾರ ಕಚೇರಿಗಳಲ್ಲಿ ಮೊದಲ ರಕ್ಷಣಾ ಸಲಹೆಗಾರರಾಗಿಯೂ ಕಾರ್ಯ ನಿರ್ವಹಿಸಿದ್ದರು.

'ಭಾರತೀಯ ಸೇನೆ ಹಾಗೂ ದೇಶದ ಸುರಕ್ಷತೆಗೆ ಪಾಟೀಲ ಅವರ ಕೊಡುಗೆ ಅದ್ವಿತೀಯ. ನಿವೃತ್ತಿಯ ನಂತರವೂ ಸಾಮಾಜಿಕವಾಗಿ ಸಕ್ರಿಯರಾಗಿದ್ದ ಅವರು, ಅಖಿಲ ಭಾರತೀಯ ಪೂರ್ವ ಸೈನಿಕ ಸೇವಾ ಪರಿಷತ್ತಿನ ರಾಷ್ಟ್ರೀಯ ಅಧ್ಯಕ್ಷರಾಗಿ ಹಾಗೂ ಫೋರಂ ಫಾರ್ ಇಂಟಿಗ್ರೇಟೆಡ್ ನ್ಯಾಷನಲ್ ಸೆಕ್ಯೂರಿಟಿ (ಫಿನ್ಸ್) ಸಂಸ್ಥೆಯ ಉಪಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಸೇನಾ ಕ್ಷೇತ್ರದ ಹಿರಿಯ ಮುತ್ಸದ್ಧಿ ಒಬ್ಬರನ್ನು ಕಳೆದುಕೊಂಡಿದ್ದೇವೆ. ಅತೀವ ದುಃಖ ತಂದಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಅಮೃತ ನಗರೋತ್ಥಾನ: 3 ತಿಂಗಳ ನಂತರ ಕಾಮಗಾರಿಗಳಿಗೆ ಟೆಂಡರ್ ಆಹ್ವಾನ

ಬಿಬಿಎಂಪಿ ಶಾಲೆಗಳಿಗೆ 'ಅಮೃತ ಗಳಿಗೆ'

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿಯ ಶಾಲೆ-ಕಾಲೇಜುಗಳ ಹೊಸ ಕಟ್ಟಡಗಳಿಗೆ ಕೊನೆಗೂ 'ಅಮೃತ ಗಳಿಗೆ' ಬಂದೊದಗಿದೆ. ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನದಲ್ಲಿ ಅನುಮೋದನೆಗೊಂಡ ಕಾಮಗಾರಿಗಳಿಗೆ ಮೂರು ತಿಂಗಳ ನಂತರ ಟೆಂಡರ್ ಆಹ್ವಾನಿಸಲಾಗಿದೆ.

ಶಾಲೆ-ಕಾಲೇಜುಗಳ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ಮೂರು ಪ್ಯಾಕೇಜ್‌ಗಳಲ್ಲಿ ಬಿಬಿಎಂಪಿ ಯೋಜನೆ ವಿಭಾಗದ ವತಿಯಿಂದ ಟೆಂಡರ್ ಕರೆಯಲಾಗಿದೆ. ಹೊಸ ಕಟ್ಟಡ ಹಾಗೂ ಕೆಲವು ನವೀಕರಣದ ಕಾಮಗಾರಿಗಳನ್ನು ಈ ಮೂಲಕ ನಡೆಸಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಡಿಸೆಂಬರ್ ಮಧ್ಯಭಾಗದಲ್ಲಿ ಮುಗಿಯುವ ನಿರೀಕ್ಷೆಯಿದ್ದು, ಅಲ್ಲಿಂದ 11 ತಿಂಗಳಲ್ಲಿ ಕಟ್ಟಡಗಳ ನಿರ್ಮಾಣ ಪೂರ್ಣಗೊಳ್ಳಲಿದೆ.

ಬಿಬಿಎಂಪಿಯ ಶಾಲೆಗಳ ಪರಿಸ್ಥಿತಿ ನೋಡಿದಾಗ ವಿದ್ಯಾರ್ಥಿಗಳು ಹೇಗೆ ಅಭ್ಯಾಸ ಮಾಡಬೇಕು ಎಂಬ ಆತಂಕ ಮೂಡುವುದು ಸಹಜ. ರಸ್ತೆ, ಕಾಂಕ್ರೀಟ್ ರಸ್ತೆ, ಡಾಂಬರು ಎಂದೆಲ್ಲ ನೂರಾರು ಕೋಟಿ ವೆಚ್ಚ ಮಾಡುವ ಸಂದರ್ಭದಲ್ಲಿ ₹6 ಸಾವಿರ ಕೋಟಿಯ ಅಮೃತ ನಗರೋತ್ಥಾನದಲ್ಲಿ ಶಿಕ್ಷಣಕ್ಕೆ ಅಳಿದುಳಿದಂತೆ ₹180 ಕೋಟಿ ಬಿಡುಗಡೆ ಮಾಡಲಾಗಿತ್ತು.

75 ಶಾಲೆಗಳಲ್ಲಿ ಸಿವಿಲ್ ಕಾಮಗಾರಿಗಳಿಗೆ ₹88 ಕೋಟಿ, ಪೀಠೋಪಕರಣ ಹಾಗೂ ಇತರೆ ವ್ಯವಸ್ಥೆಗೆ ₹15 ಕೋಟಿ, 11 ಹೊಸ ಶಾಲೆಗಳನ್ನು ಪ್ರಾರಂಭಿಸಲು ₹77 ಕೋಟಿ ಮೀಸಲಾಗಿದೆ. ಅದರಲ್ಲಿ ಪ್ರಥಮ ಭಾಗವಾಗಿ ₹46 ಕೋಟಿ ವೆಚ್ಚದಲ್ಲಿ ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣದ ಪ್ರಕ್ರಿಯೆ ಇದೀಗ ಆರಂಭವಾಗಿದೆ.

ವಿವರ: 'ನಮ್ಮ ಶಾಲೆ-ಕಾಲೇಜು ಕಟ್ಟಡಗಳು ಹೇಗಿರಬೇಕು ಎಂಬುದನ್ನು ನಾವು ಯೋಜನೆ ವಿಭಾಗದವರಿಗೆ ವಿವರಿಸಿದ್ದೆವು. ಪ್ರತಿ ಅಂತಸ್ತಿನಲ್ಲೂ ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಸೇರಿ ಎಲ್ಲ ರೀತಿ ಮೂಲ ಸೌಕರ್ಯಗಳನ್ನು ಒಳಗೊಂಡಿರಬೇಕು. ಕಚೇರಿ, ಗ್ರಂಥಾಲಯ, ಪ್ರಯೋಗಾಲಯ, ಸಭಾಂಗಣದ ಸೌಲಭ್ಯವಿರಬೇಕು. ಮೇಲ್ಭಾಗದಲ್ಲಿ ನೀರು ನಿಲ್ಲದಂತೆ ಆರ್‌ಸಿಸಿ ವಿನ್ಯಾಸಗೊಳಿಸಬೇಕು ಎಂದು ಕೇಳಿದ್ದೆವು' ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ಉಮೇಶ್ ತಿಳಿಸಿದರು.

ಬಿಬಿಎಂಪಿ ಶಾಲೆ– ಕಾಲೇಜು ಕಟ್ಟಡದ ಮಾದರಿ

ಟೆಂಡರ್ ಆಹ್ವಾನ

ಶಾಲೆ–ಕಾಲೇಜು ಕಟ್ಟಡ	ಅಂದಾಜು
ವಿನಾಯಕನಗರ (ಕಟ್ಟಿಗೇನಹಳ್ಳಿ), ಅಗ್ರಹಾರ, ಬಾಗಲೂರು ಕ್ರಾಸ್, ಥಣಿಸಂದ್ರ	₹22.08 ಕೋಟಿ
ಹೇರೋಹಳ್ಳಿ, ಉಲ್ಲಾಳು, ವರಾಹಸಂದ್ರ, ತಲಘಟ್ಟಪುರ	₹14.51 ಕೋಟಿ
ಗೋವಿಂದರಾಜನಗರ ತಿಮ್ಮೇನಹಳ್ಳಿ, ಯಲಹಂಕ ಪಿಯು ಕಾಲೇಜು ಮತ್ತು ಯಲಹಂಕ 4ನೇ ಘಟ್ಟದಲ್ಲಿ ಶಾಲೆ	₹9.96 ಕೋಟಿ

'ಎಂಜಿನಿಯರ್‌ಗಳಿಂದ ವಿಳಂಬ'

ಬಿಬಿಎಂಪಿ ಶಾಲೆ ಕಾಲೇಜುಗಳಿಗೆ ಹೊಸ ಕಟ್ಟಡ ಹಾಗೂ ಪೀಠೋಪಕರಣ ಒದಗಿಸಲು ಸರ್ಕಾರ ಅಮೃತ ನಗರೋತ್ಥಾನ ಯೋಜನೆಯಡಿ ಅನುದಾನ ಒದಗಿಸಿ, ಒಂದು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಬೇಕೆಂದು ಸೂಚಿಸಿತ್ತು. ಬಿಬಿಎಂಪಿ ಶಿಕ್ಷಣ ವಿಭಾಗಕ್ಕೆ ಈ ಯೋಜನೆಗಳನ್ನು ಕೈಗೊಳ್ಳುವ ಅಧಿಕಾರವನ್ನು ಮುಖ್ಯ ಆಯುಕ್ತರು ನೀಡಿಲ್ಲ. ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣ ಒದಗಿಸುವ ಎಲ್ಲ ₹180 ಕೋಟಿ ವೆಚ್ಚದ ಕಾಮಗಾರಿಯನ್ನು ಬಿಬಿಎಂಪಿ ಯೋಜನೆ ವಿಭಾಗದವರು ನಿರ್ವಹಿಸುತ್ತಿದ್ದಾರೆ. ರಸ್ತೆ, ಕಾಂಕ್ರೀಟ್ ಎಂದೇ ಬ್ಯುಸಿಯಾಗಿರುವ ಈ ವಿಭಾಗದ ಎಂಜಿನಿಯರ್‌ಗಳು ಶಿಕ್ಷಣದ ಸೌಲಭ್ಯಗಳತ್ತ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಅಧಿಕಾರಿಗಳು ದೂರಿದ್ದಾರೆ.

ಹೊಸ ಶಾಲೆಗಳಿಗೆ ₹77 ಕೋಟಿ

ಶೆಟ್ಟಿಹಳ್ಳಿ, ಅರಕೆರೆ, ವಿಜ್ಞಾನಪುರ, ರಘುವನಹಳ್ಳಿ, ಲಗ್ಗೆರೆ, ಕೆಂಗೇರಿ, ಉಲ್ಲಾಳ, ಥಣಿಸಂದ್ರ, ಅಗ್ರಹಾರ, ಕಟ್ಟಿಗೇನಹಳ್ಳಿ, ಬಾಗಲೂರು ಕ್ರಾಸ್‌ಗಳಲ್ಲಿ ಹೊಸ ಶಾಲೆಗಳನ್ನು ಪ್ರಾರಂಭಿಸಲು ಅಮೃತ ನಗರೋತ್ಥಾನದಲ್ಲಿ ಅನುಮೋದನೆ ನೀಡಲಾಗಿದೆ. 10 ಶಾಲೆಗಳನ್ನು ತಲಾ ₹7 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಶೆಟ್ಟಿಹಳ್ಳಿಯಲ್ಲಿ ಹೊಸ ಶಾಲೆ ನಿರ್ಮಾಣಕ್ಕೆ ₹9 ಕೋಟಿ ಮೀಸಲಾಗಿದೆ. ಒಟ್ಟಾರೆ ₹72 ಕೋಟಿ ಸಿವಿಲ್ ಕಾಮಗಾರಿ ಹಾಗೂ ₹5 ಕೋಟಿ ಪೀಠೋಪಕರಣ, ಇತರೆ ವೆಚ್ಚಗಳಿಗೆ ಮೀಸಲಾಗಿದೆ.

ದಂಪತಿಯಿಂದ ₹ 1 ಸಾವಿರ ಸುಲಿಗೆ ಮಾಡಿದ್ದ ಹೊಯ್ಸಳದ ಗಸ್ತು ಸಿಬ್ಬಂದಿ

ಇಬ್ಬರು ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಕರಣ ಕುರಿತು ತನಿಖೆಗೆ ಡಿಸಿಪಿ ಸೂಚನೆ
- ಪೊಲೀಸ್ ಸಿಬ್ಬಂದಿ ವರ್ತನೆಗೆ ಜಾಲತಾಣದಲ್ಲಿ ಆಕ್ರೋಶ

ಬೆಂಗಳೂರು: ದಂಪತಿಯಿಂದ ₹ 1 ಸಾವಿರ ಸುಲಿಗೆ ಮಾಡಿದ ಆರೋಪದ ಮೇರೆಗೆ ಸಂಪಿಗೆಹಳ್ಳಿ ಠಾಣೆಯ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

‘ಹೊಯ್ಸಳ ವಾಹನದಲ್ಲಿ ಗಸ್ತಿನಲ್ಲಿದ್ದ ಸಂದರ್ಭದಲ್ಲಿ ಸುಲಿಗೆ ಮಾಡಿದ್ದ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ರಾಜೇಶ್ ಮತ್ತು ಕಾನ್‌ಸ್ಟೆಬಲ್ ನಾಗೇಶ್ ಅವರನ್ನು ಅಮಾನತು ಮಾಡಲಾಗಿದೆ. ಪ್ರಕರಣ ಕುರಿತು ತನಿಖೆ ನಡೆಸುವಂತೆ ಸೂಚಿಸಲಾಗಿದೆ’ ಎಂದು ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದ್ದಾರೆ.

‘ಡಿ.8ರಂದು ಸ್ನೇಹಿತರ ಮನೆಯಲ್ಲಿದ್ದ ಕಾರ್ಯಕ್ರಮ ಮುಗಿಸಿ ರಾತ್ರಿ 12.30ರ ವೇಳೆಯಲ್ಲಿ ನಾನು ಹಾಗೂ ಪತ್ನಿ, ಮಾನ್ಯತಾ ಟೆಕ್ ಬಳಿ ಬರುತ್ತಿರುವಾಗ ಇಬ್ಬರು ಪೊಲೀಸರು ಅಡ್ಡಗಟ್ಟಿ ಅನಾವಶ್ಯಕವಾಗಿ ತಿರುಗಾಟ ನಡೆಸುತ್ತಿದ್ದೀರಿ. ₹ 3 ಸಾವಿರ ದಂಡ ನೀಡುವಂತೆ ಬೇಡಿಕೆಯಿಟ್ಟಿದ್ದರು. ಕೊನೆಗೆ ಡಿಜಿಟಲ್ ಪಾವತಿ ಮೂಲಕ ₹ 1 ಸಾವಿರ ಪಡೆದಿದ್ದರು’ ಎಂದು ಆರೋಪಿಸಿ ಕಾರ್ತಿಕ್ ಪಾತ್ರಿ ಎನ್ನುವವರು ಸರಣಿ ಟ್ವೀಟ್ ಮಾಡಿ ಬೆಂಗಳೂರು ಪೊಲೀಸರಿಗೆ ಟ್ಯಾಗ್ ಮಾಡಿದ್ದರು. ಅದನ್ನು ಗಮನಿಸಿದ್ದ ಡಿಸಿಪಿ ಅಂದು ಆ ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯ ಪತ್ತೆಗೆ ಸೂಚಿಸಿದ್ದರು.

‘ಮಾನ್ಯತಾ ಟೆಕ್ ಪಾರ್ಕ್ ಬಳಿ ನೆಲೆಸಿದ್ದೇವೆ. ನಮ್ಮ ಬಳಿ ಬಾಕ್ಸ್‌ನಲ್ಲಿ ಕೇಕ್ ಬಿಟ್ಟರೆ ಬೇರೇನೂ ಇರಲಿಲ್ಲ. ಮೊಬೈಲ್‌ನಲ್ಲಿ ಆಧಾರ್ ಕಾರ್ಡ್ ಫೋಟೊ ಪ್ರತಿಗಳಿದ್ದವು. ಅದನ್ನು ತೋರಿಸಿದರೂ ಪೊಲೀಸರು ಸಂಬಂಧ, ಕೆಲಸದ ಸ್ಥಳ, ಪೋಷಕರ ವಿವರ... ಹೀಗೆ ಹಲವು ರೀತಿ ಪ್ರಶ್ನಿಸಿ ಬೆದರಿಸಿದರು. ಅದಕ್ಕೆಲ್ಲಾ ತಾಳ್ಮೆಯಿಂದಲೇ ಉತ್ತರಿಸಿದೆವು. ಒಬ್ಬರು ಚಲನ್ ತೆಗೆದುಕೊಂಡು ಆಧಾರ್ ಸಂಖ್ಯೆ ಹಾಗೂ ಹೆಸರು ಬರೆಯಲು ಮುಂದಾದರು. ಅದನ್ನು ಪ್ರಶ್ನಿಸಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ರಾತ್ರಿ 11ರ ನಂತರ ತಿರುಗಾಡಲು ಅವಕಾಶ ಇಲ್ಲವೆಂದು ಒಬ್ಬ ಸಿಬ್ಬಂದಿ ಹೇಳಿದರು. ಅಂತಹ ನಿಯಮವಿದೆಯೇ? ಅದರ ಅರಿವು ನಮಗೆ ಇಲ್ಲ ಎಂದಿದ್ದಕ್ಕೆ ಪೊಲೀಸರು ಬೆದರಿಕೆ ಹಾಕಿದರು. ಮೊಬೈಲ್ ಕಸಿದುಕೊಂಡು ₹ 3 ಸಾವಿರ ದಂಡ ಕಟ್ಟುವಂತೆ ಹೇಳಿದರು. ದಂಡ ಕಟ್ಟದಿದ್ದರೆ ಬಂಧಿಸಲಾಗುವುದೆಂದು ಬೆದರಿಸಿದರು’ ಎಂದು ಹೇಳಿದ್ದಾರೆ.

‘ಪತ್ನಿ ಕಣ್ಣೀರು ಹಾಕಿದರೂ ಅವರು ಸುಮ್ಮನಾಗಲಿಲ್ಲ. ಕೊನೆಯಲ್ಲಿ ನಿಮಗೆ ಯಾವುದೇ ರೀತಿಯಲ್ಲೂ ತೊಂದರೆ ಆಗುವುದಿಲ್ಲ. ಕಡಿಮೆ ಹಣ ನೀಡುವಂತೆ ಕೇಳಿದರು. ಡಿಜಿಟಲ್ ಪಾವತಿ ಮೂಲಕ ₹ 1 ಸಾವಿರ ನೀಡಲಾಯಿತು. ಕಾನೂನು ರಕ್ಷಕರು ನಾಗರಿಕರನ್ನು ನಡೆಸಿಕೊಳ್ಳುವುದು ಹೀಗೆಯೇ’ ಎಂದು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದರು.

ಆಕ್ರೋಶ: ಪೊಲೀಸ್ ಸಿಬ್ಬಂದಿಯ ಈ ರೀತಿಯ ನಡವಳಿಕೆಗೆ ನಾಗರಿಕರು ಸಾಮಾಜಿಕ ಜಾಲತಾಣಗಳ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಆಕ್ರೋಶ

ಬಿಜೆಪಿಯಲ್ಲಿ ‘ರೌಡಿ ಮೋರ್ಚಾ’ ಆರಂಭಿಸಿದ ಬಳಿಕ ಮರ್ಯಾದಸ್ಥ ದಂಪತಿ ರಾತ್ರಿ ರಸ್ತೆಯಲ್ಲಿ ನಡೆದರೆ ಪೊಲೀಸರು ತನಿಖೆ ನಡೆಸುತ್ತಾರೆ. ರೌಡಿ ಶೀಟರ್‌ಗಳು ರಾತ್ರಿ ರಸ್ತೆಗಳನ್ನು ಆಕ್ರಮಿಸಿಕೊಳ್ಳುತ್ತಾರೆ. ‘ಘನತೆ-ಮರ್ಯಾದೆ ಮುಕ್ತ ಕರ್ನಾಟಕ’ ಮಾಡಲು ಹೊರಟಿದ್ದೀರಾ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ ರಾಥೋಡ್ ಅವರು ಪ್ರಶ್ನಿಸಿದ್ದಾರೆ.

ಶಿಕ್ಷಣದ ಮೌಲ್ಯ ಹೆಚ್ಚಿಸಿ: ದೊರೆಸ್ವಾಮಿ

ಪ್ರಜಾವಾಣಿ ವಾರ್ತೆ

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ವಿಜ್ಞಾನ ಮೇಳದ ಸಮಾರೋಪ ಸಮಾರಂಭದಲ್ಲಿ (ಎಡದಿಂದ) ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಶಾಸಕ ರವಿಸುಬ್ರಹ್ಮಣ್ಯ, ಪ್ರೊ. ಎಂ.ಆರ್‌. ದೊರೆಸ್ವಾಮಿ, ಸಚಿವ ಕೆ. ಗೋಪಾಲಯ್ಯ ಇದ್ದರು.

ಬೆಂಗಳೂರು: ‘ವಿಜ್ಞಾನ ಮೇಳವನ್ನು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಘೋಷಿಸಬೇಕು’ ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಅಭಿಪ್ರಾಯಪಟ್ಟರು.

‘ಪಿಇಎಸ್ ವಿಶ್ವವಿದ್ಯಾನಿಲಯ ಆವರಣದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಸರ್ಕಾರಿ ಶಾಲೆಗಳ 2,400 ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿಜ್ಞಾನ ಮೇಳದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಶಾಲಾ ಶಿಕ್ಷಣ ಸೇವೆಗಳನ್ನು ಮರುರೂಪಿಸಲು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗೆ–2020 (ಎನ್‌ಇಪಿ) ಮಾತ್ರವಲ್ಲದೆ ಬೆಳವಣಿಗೆ ಮತ್ತು ಸುಸ್ಥಿರತೆಯ ಹಾದಿಯಲ್ಲಿ ಮುನ್ನಡೆಯಲು ಈ ವಿಜ್ಞಾನ ಮೇಳವು ಸಹಕಾರಿಯಾಗುತ್ತದೆ’ ಎಂದು ಹೇಳಿದರು.

‘ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿದ್ಯಾಂಜಲಿ ಯೋಜನೆಯನ್ನು ರಾಜ್ಯದ 70 ವಿಶ್ವವಿದ್ಯಾಲಯಗಳು ಅಳವಡಿಸಿಕೊಂಡಿವೆ. ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿರುವ ಬರುವ ಸರ್ಕಾರಿ ಶಾಲೆಗಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಭಾಗವಹಿಸಲು ಸಜ್ಜಾಗಿವೆ. ಶಾಲಾ ಶಿಕ್ಷಣ ಸೇವೆಗಳನ್ನು ವಿಸ್ತರಿಸಲು ಮತ್ತು ನುರಿತ ಪ್ರತಿಭೆಗಳನ್ನು ಸೇರಿಸಿಕೊಂಡು ಶಿಕ್ಷಣದ ಮೌಲ್ಯ ಹೆಚ್ಚಿಸಬೇಕು. ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಮತ್ತು ಫಾರ್ಮಸಿ ಕಾಲೇಜುಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಎಲ್ಲಾ ಶಾಲೆಗಳಲ್ಲಿ ಉಚಿತ ಆರೋಗ್ಯ ತಪಾಸಣೆ ಮಾಡಬೇಕು’ ಎಂದು ಕರೆ ನೀಡಿದರು.

ಸಚಿವ ಕೆ. ಗೋಪಾಲಯ್ಯ ಮಾತನಾಡಿ, ‘ನನ್ನ ಕ್ಷೇತ್ರದಲ್ಲಿ ₹45 ಕೋಟಿ ಅನುದಾನವನ್ನು ಶಾಲೆಗಳ ಅಭಿವೃದ್ಧಿಗೆ ಖರ್ಚು ಮಾಡಿದ್ದೇನೆ. 120 ಶಿಕ್ಷಕರಿಗೆ ಪರಿಣಿತ ವಿಷಯ ತಜ್ಞರಿಂದ ತರಬೇತಿ ಕೊಡಿಸುತ್ತಿದ್ದೇನೆ. 2,600 ವಿದ್ಯಾರ್ಥಿಗಳ ಅನುಕೂಲವಾಗುವ ಶಾಲೆಯನ್ನು ಸದ್ಯದಲ್ಲೇ ಉದ್ಘಾಟನೆ ಮಾಡಲಾಗುವುದು’ ಎಂದು ತಿಳಿಸಿದರು.

ಶಾಸಕ ರವಿಸುಬ್ರಹ್ಮಣ್ಯ ಮಾತನಾಡಿ, ‘ಎಂ.ಆರ್. ದೊರೆಸ್ವಾಮಿ ಅವರು ಪಿಇಎಸ್ ಶಿಕ್ಷಣ ಸಂಸ್ಥೆಗೆ ಸೀಮಿತವಾಗದೆ ಇಡೀ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಕೆಲಸ ಮಾಡುತ್ತಿದ್ದಾರೆ. ಈ ವಿಜ್ಞಾನ ಮೇಳದಲ್ಲಿ ಯೋಗದಿಂದ ಹಿಡಿದು ವಿಜ್ಞಾನ ವಿಷಯಗಳ ಬಗ್ಗೆ ಮಾಹಿತಿ ನೀಡುವಂತೆ ಆಯೋಜನೆ ಮಾಡಿರುವುದು ಶ್ಲಾಘನೀಯ’ ಎಂದರು.

‘ಪ್ರತಿ ಗ್ರಾಮದಲ್ಲೂ ಆರ್‌ಎಸ್‌ಎಸ್ ಶಾಖೆ ಇರಲಿ’

ಗುವಾಹಟಿ (ಪಿಟಿಐ): ದೇಶದ ಪ್ರತಿಯೊಂದು ಗ್ರಾಮದಲ್ಲಿಯೂ ಸಂಘದ ಶಾಖೆ ಇರಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ ಭಾಗವತ್ ಭಾನುವಾರ ಹೇಳಿದರು.

ಸಂಘದ ಅಸ್ಸಾಂ ಘಟಕದ ಸ್ವಯಂ ಸೇವಕರಿಗಾಗಿ ಆಯೋಜಿಸಿದ್ದ 3 ದಿನಗಳ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಂಘದ ಪ್ರತಿಯೊಬ್ಬ ಸದಸ್ಯ ದೇಶದ ಪ್ರಗತಿಗೆ ಶ್ರಮಿಸಬೇಕು. ಜನರಲ್ಲಿ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಎಲ್ಲರ ಆದ್ಯತೆ ದೇಶವೇ ಆಗಿರಬೇಕು ಎಂಬುದಾಗಿ ಭಾಗವತ್ ಹೇಳಿದರು’ ಎಂದು ಆರ್‌ಎಸ್‌ಎಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ದೇಶಕ್ಕಾಗಿ ಯಾವುದೇ ತ್ಯಾಗಕ್ಕೂ ನಾವು ಸಿದ್ಧರಾಗಿರಬೇಕು. ಈ ಉದ್ದೇಶಕ್ಕಾಗಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಸಲುವಾಗಿಯೇ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು 1925ರಲ್ಲಿ ಆರ್‌ಎಸ್‌ಎಸ್ ಸ್ಥಾಪಿಸಿದರು’ ಎಂದರು.

‘ಬುಡಕಟ್ಟು ಜನರ ಕೊಡುಗೆ ಪ್ರಚುರಪಡಿಸಿ’

ಭೋಪಾಲ್ (ಪಿಟಿಐ): ವಿವಿಧ ಕ್ಷೇತ್ರಗಳಿಗೆ ಬುಡಕಟ್ಟು ಸಮುದಾಯಗಳು ನೀಡಿರುವ ಅಸಾಧಾರಣ ಕೊಡುಗೆಗಳನ್ನು ದೇಶಕ್ಕೆ ತಿಳಿಸುವ ಅಗತ್ಯ ಇದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾನುವಾರ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಬುಡಕಟ್ಟು ಸಮುದಾಯಕ್ಕೆ ಸೇರಿದ ಸ್ವಾತಂತ್ರ್ಯ ಹೋರಾಟಗಾರರನ್ನು ಕೊನೆಗೂ ಗುರುತಿಸಿ, ಸಲ್ಲಬೇಕಾಗಿದ್ದ ಗೌರವವನ್ನು ತಡವಾಗಿಯಾದರೂ ನೀಡಲಾಗಿದೆ’ ಎಂದರು.

‘ಹಲವು ಕ್ಷೇತ್ರಗಳಲ್ಲಿ ಬುಡಕಟ್ಟು ಜನರ ಕೊಡುಗೆ ಅಮೂಲ್ಯವಾದದ್ದು. ಅವುಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸದೇ ಇರುವುದು ದುರದೃಷ್ಟಕರ’ ಎಂದರು.

ಆನೆ – ಮಾನವ ಸಂಘರ್ಷದಿಂದ ಸಂಭವಿಸುವ ಹಾನಿ

ಪರಿಹಾರ ದ್ವಿಗುಣ: ಸಭೆ ನಿರ್ಧಾರ

ಬೆಂಗಳೂರು: ಆನೆ – ಮಾನವ ಸಂಘರ್ಷದಿಂದ ಸಂಭವಿಸುವ ಹಾನಿಗೆ ಸಂಬಂಧಿಸಿದಂತೆ ನೀಡಲಾಗುವ ಪರಿಹಾರವನ್ನು ದ್ವಿಗುಣಗೊಳಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಮತ್ತು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಮಾನವ ಜೀವ ಹಾನಿಗೆ ನೀಡುವ ಪರಿಹಾರ ಮೊತ್ತವನ್ನು ₹ 7.5 ಲಕ್ಷದಿಂದ ₹ 15 ಲಕ್ಷ, ಶಾಶ್ವತ ಅಂಗವಿಕಲತೆಗೆ ನೀಡುವ ಪರಿಹಾರವನ್ನು ₹ 5 ಲಕ್ಷದಿಂದ ₹ 10 ಲಕ್ಷಕ್ಕೆ, ಭಾಗಶಃ ಅಂಗವಿಕಲತೆಗೆ ನೀಡುವ ಪರಿಹಾರವನ್ನು ₹ 2.5 ಲಕ್ಷದಿಂದ ₹ 5 ಲಕ್ಷಕ್ಕೆ, ಗಾಯಗೊಂಡವರಿಗೆ ನೀಡುವ ಪರಿಹಾರ ಮೊತ್ತ ₹ 30 ಸಾವಿರದಿಂದ 60 ಸಾವಿರಕ್ಕೆ, ಆಸ್ತಿ ಹಾನಿಗೆ ಪರಿಹಾರ ಮೊತ್ತ ₹ 10 ಸಾವಿರದಿಂದ ₹ 20 ಸಾವಿರಕ್ಕೆ ಹಾಗೂ ಜೀವ ಹಾನಿ ಅಥವಾ ಶಾಶ್ವತ ಅಂಗವಿಕಲತೆಯ ಪ್ರಕರಣಗಳಿಗೆ ನೀಡುವ ಕುಟುಂಬ ಮಾಸಾಶನದ ಮೊತ್ತ ಮಾಸಿಕ ₹ 2ಸಾವಿರದಿಂದ ₹4 ಸಾವಿರಕ್ಕೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಅಲ್ಲದೆ, ಬೆಳೆಹಾನಿಗೆ ನೀಡುತ್ತಿರುವ ಪರಿಹಾರವನ್ನೂ ದ್ವಿಗುಣಗೊಳಿಸಲು ನಿರ್ಧರಿಸಲಾಯಿತು.

ಹಾಸನ, ಮಡಿಕೇರಿ, ಮೈಸೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆನೆ ಕಾರ್ಯಪಡೆ ಈಗಾಗಲೇ ಕಾರ್ಯಾರಂಭ ಮಾಡಿವೆ. ಹಾಸನ ಜಿಲ್ಲೆಯಲ್ಲಿ ನಿಯಂತ್ರಣ ಕೊಠಡಿ ಸಂಖ್ಯೆ 9480817460 ಅಥವಾ ಸಹಾಯವಾಣಿ ಸಂಖ್ಯೆ 1926ನ್ನು ಸಂಪರ್ಕಿಸಬಹುದು ಎಂದು ಸಭೆಯಲ್ಲಿ ತಿಳಿಸಲಾಯಿತು.

‘ಅರಣ್ಯ ಇಲಾಖೆವರದಿಯ ಅನ್ವಯ ಹಾಸನ ಪ್ರದೇಶದಲ್ಲಿ 65 ಆನೆಗಳಿವೆ. ಅವುಗಳಲ್ಲಿ ಆಲೂರು, ಸಕಲೇಶಪುರ, ಬೇಲೂರು ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಅವುಗಳನ್ನು ಹಂತ ಹಂತವಾಗಿ ಸ್ಥಳಾಂತರಿಸಲಾಗುವುದು. ಆನೆಗಳು ಬರದಂತೆ ತಡೆಗಟ್ಟಲು ಬ್ಯಾರಿಕೇಡ್ ನಿರ್ಮಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

ನಾಸಾ: ಭೂಮಿಗೆ ಮರಳಿದ ಒರಾಯನ್

ಒರಾಯನ್ ಗಗನನೌಕೆ – ಎಎಫ್‌ಪಿ ಚಿತ್ರ

ಕೇಪ್ ಕೆನವೆರಾಲ್, ಅಮೆರಿಕ (ಎಪಿ): ಪರೀಕ್ಷೆ ಉದ್ದೇಶದೊಂದಿಗೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ (ನಾಸಾ) ಉಡ್ಡಯನ ಮಾಡಿದ್ದ ಒರಾಯನ್ ಗಗನನೌಕೆ ವ್ಯೋಮಯಾನವನ್ನು ಪೂರ್ಣಗೊಳಿಸಿ ಭೂಮಿಯತ್ತ ಭಾನುವಾರ ಮುಖಮಾಡಿತು.

25 ದಿನಗಳ ತನ್ನ ವ್ಯೋಮಯಾನದ ವೇಳೆ, ಚಂದ್ರನ ಸುತ್ತ ತಿರುಗಿದ ಈ ಗಗನನೌಕೆ, ಮೆಕ್ಸಿಕೊದ ಬಾಜಾ ದ್ವೀಪಕಲ್ಪ ಬಳಿ ಸಮುದ್ರದಲ್ಲಿ ಇಳಿಯಿತು. ಗಗನನೌಕೆಯನ್ನು ಹೊತ್ತು ತರುವ ಸಲುವಾಗಿ, ಅದು ಬಂದಿಳಿಯುವ ಸ್ಥಳದಿಂದ ಕೆಲವು ಮೈಲಿಗಳ ದೂರದಲ್ಲಿ ನೌಕಾಪಡೆಯ ಹಡಗನ್ನು ನಿಯೋಜಿಸಲಾಗಿತ್ತು.

ಈ ಗಗನನೌಕೆಯನ್ನು ನವೆಂಬರ್ 16ರಂದು ಉಡ್ಡಯನ ಮಾಡಲಾಗಿತ್ತು.

ಕಲ್ಯಾಣ ಕಾರ್ಯಕ್ರಮಗಳಿಗೆ ಭಿಕ್ಷುಕರ ಉಪಕರ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಸಂಗ್ರಹಿಸುತ್ತಿರುವ ಭಿಕ್ಷುಕರ ಉಪಕರವನ್ನು ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ಬಳಸಿಕೊಳ್ಳಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

2008ರಿಂದ 2022ರ ಮಾರ್ಚ್‌ವರೆಗೆ ₹543.58 ಕೋಟಿ ಭಿಕ್ಷುಕರ ಉಪಕರವನ್ನು ಸಂಗ್ರಹಿಸಲಾಗಿದ್ದು, ಇದರಲ್ಲಿ ₹350.11 ಕೋಟಿ ಕೇಂದ್ರ ಪರಿಹಾರ ಸಮಿತಿಗೆ ವರ್ಗಾಯಿಸಲಾಗಿದೆ. ಶೇ 10ರಷ್ಟು ಸಂಗ್ರಹಣೆ ಶುಲ್ಕ ಹೊರತುಪಡಿಸಿದರೆ ₹139.11 ಕೋಟಿ ಬಾಕಿ ಉಳಿದಿದ್ದು, ಇದನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಬಿಬಿಎಂಪಿ ಯೋಜಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನಿವಾಸಿಗಳು ಪಾವತಿಸುವ ಆಸ್ತಿ ತೆರಿಗೆಯೊಂದಿಗೆ ಶೇ 24ರಷ್ಟು ಉಪಕರ ಸಂಗ್ರಹಿಸಲಾಗುತ್ತಿದೆ. ಇದರಲ್ಲಿ ಆರೋಗ್ಯ ಉಪಕರ ಶೇ 14, ಗ್ರಂಥಾಲಯ ಉಪಕರ ಶೇ 6 ಹಾಗೂ ಶೇ 3ರಷ್ಟು ಭಿಕ್ಷುಕರ ಉಪಕರವಾಗಿದೆ.

ಭಿಕ್ಷುಕರ ಉಪಕರದ ಮೊತ್ತವನ್ನು ಕೇಂದ್ರ ಪರಿಹಾರ ಸಮಿತಿಗೆ ವರ್ಗಾವಣೆ ಮಾಡುವ ನಿರ್ದೇಶನ ನೀಡಿದ ಸಂದರ್ಭಕ್ಕೂ ಮತ್ತು ಪ್ರಸ್ತುತ ಸನ್ನಿವೇಶ ಬದಲಾಗಿದೆ. ಕೇಂದ್ರ ಪರಿಹಾರ ಸಮಿತಿ ಕೈಗೊಳ್ಳುತ್ತಿರುವ ಹತ್ತು ಹಲವು ಕಾರ್ಯಗಳನ್ನು ಬಿಬಿಎಂಪಿಯಿಂದಲೇ ನಿರ್ವಹಿಸಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ಹೆಚ್ಚು ಫಲಪ್ರದವಾಗಿ ಅನುಷ್ಠಾನಗೊಳಿಸಲು, ಭಿಕ್ಷುಕರ ಉಪಕರದಲ್ಲಿ ಕೇಂದ್ರ ಪರಿಹಾರ ಸಮಿತಿಗೆ ಪಾವತಿಸಲು ಬಾಕಿ ಉಳಿದಿರುವ ₹139.11 ಕೋಟಿಗಳಲ್ಲಿ ₹50 ಕೋಟಿ, 2021ರ ಏಪ್ರಿಲ್‌ನಿಂದ ಶೇ 50ರಷ್ಟು ಉಪಕರವನ್ನು ಬಿಬಿಎಂಪಿಯೇ ಬಳಸಿಕೊಳ್ಳಲು ಅನುಮತಿ ನೀಡಲು ಕೋರಲಾಗಿದೆ. ಈ ಹಣವನ್ನು ಬಳಸಿಕೊಂಡು ನಿರ್ಗತಿಕರು, ಅಂಗವಿಕಲರು, ತೃತೀಯ ಲಿಂಗಿಗಳ ಆರ್ಥಿಕ ಪುನಶ್ಚೇತನ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಡಿ.5ರಂದು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಧನಸಹಾಯ: ನಿರ್ಬಂಧ ಸಡಿಲಿಕೆ?

ಬೆಂಗಳೂರು: ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ನೀಡುವ ಧನಸಹಾಯಕ್ಕೆ ಸಂಬಂಧಿಸಿದಂತೆ ಹಾಲಿ ನಿರ್ಬಂಧಗಳನ್ನು ಸಡಿಲಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಭರವಸೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಸಾಹಿತಿ ಕಲಾವಿದರ ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟದ ನಿಯೋಗದ ಜತೆಗೆ ಈಚೆಗೆ ಸಭೆ ನಡೆಸಿದ ಅವರು, ಧನಸಹಾಯದ ಬಗ್ಗೆ ಚರ್ಚಿಸಿದರು.

‘ಸಾಂಸ್ಕೃತಿಕ ಸಂಘ– ಸಂಸ್ಥೆಗಳಿಗೆ ನೀಡುವ ಧನಸಹಾಯಕ್ಕೆ ಸಂಬಂಧಿಸಿದಂತೆ ಹಾಲಿ ಮಾರ್ಗಸೂಚಿಯನ್ನು ರದ್ದುಪಡಿಸಿ, ಕನಿಷ್ಠ ₹ 5 ಲಕ್ಷದಿಂದ ಗರಿಷ್ಠ ₹ 15 ಲಕ್ಷದವರೆಗೆ ಆರ್ಥಿಕ ನೆರವು ಒದಗಿಸಬೇಕು. ಡಿಸೆಂಬರ್ ಅಂತ್ಯದೊಳಗೆ ಕನಿಷ್ಠ 3 ಕಾರ್ಯಕ್ರಮಗಳನ್ನು ನಡೆಸಿ, ದಾಖಲೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಸಲ್ಲಿಸುವಂತೆ ಸೂಚಿಸಿರುವುದು ಸರಿಯಲ್ಲ’ ಎಂದು ಕಲಾವಿದರು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸುನಿಲ್ ಕುಮಾರ್, ‘ಮೂರು ಕಾರ್ಯಕ್ರಮಗಳನ್ನು ನಡೆಸಬೇಕೆಂಬ ನಿರ್ಬಂಧ ಸಡಿಲಿಸಲಾಗುವುದು. ಒಂದು ಕಾರ್ಯಕ್ರಮ ನಡೆಸಿದವರನ್ನೂ ಧನಸಹಾಯಕ್ಕೆ ಪರಿಗಣಿಸಲಾಗುವುದು’ ಎಂದು ತಿಳಿಸಿದರು.

‘ಇದೇ 12ರಂದು ಮುಂದಿನ ಹೋರಾಟದ ಬಗ್ಗೆ ನಿರ್ಧರಿಸಲಾಗುವುದು’ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಹೇಳಿದರು.

ಅಪಘಾತ: ಐದು ಮಂದಿ ಸಾವು

ನಾಗಮಂಗಲ (ಮಂಡ್ಯ): ತಾಲ್ಲೂಕಿನ ನಾಗತಿಹಳ್ಳಿ ಬಳಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 2 ಕಾರು ಮುಖಾಮುಖಿ ಡಿಕ್ಕಿಯಾಗಿ ಐವರು ಮೃತಪಟ್ಟು, ಮೂವರು ತೀವ್ರವಾಗಿ ಗಾಯಗೊಂಡ ಘಟನೆ ಭಾನುವಾರ ರಾತ್ರಿ ನಡೆದಿದೆ.

ಮೃತರ ಮಾಹಿತಿ ತಿಳಿದು ಬಂದಿಲ್ಲ. ಇನ್ನೋವಾ, ಸ್ವಿಫ್ಟ್ ಕಾರುಗಳ ನಡುವೆ ಡಿಕ್ಕಿಯಾಗಿದೆ. ಬೆಂಗಳೂರಿನಿಂದ ಮಂಗಳೂರು ಕಡೆಗೆ ಚಲಿಸುತ್ತಿದ್ದ ತಮಿಳುನಾಡು ಮೂಲದ ಇನ್ನೋವಾ ಕಾರು ರಸ್ತೆ ವಿಭಜಕ್ಕೆ ಡಿಕ್ಕಿಯಾಗಿ ಎದುರಿನಿಂದ ಬರುತ್ತಿದ್ದ ಸ್ವಿಫ್ಟ್ ಕಾರ್ ಮೇಲೆ ಬಿದ್ದಿದೆ. ಹಾಸನ ಮೂಲದ ಮೂವರು, ಇನ್ನೋವಾದಲ್ಲಿದ್ದ ಇಬ್ಬರು ಮೃತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನ ನಿಲುಗಡೆ ಸಂಕೀರ್ಣ: ಆರಂಭದಲ್ಲೇ ಬಾಗಿಲು ಮುಚ್ಚಿದ ಕಟ್ಟಡ

ಮುಗಿದರೂ ಕಾಮಗಾರಿ... ಬಳಕೆಗೆ ಇಲ್ಲಾ ರೀ...

• ಆದಿತ್ಯ ಕೆ.ಎ.

ಬೆಂಗಳೂರು: ಸ್ವಾತಂತ್ರ್ಯ ಉದ್ಯಾನದ ಬಳಿ ಬಿಬಿಎಂಪಿ ನಿರ್ಮಿಸಿರುವ 'ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ'ದ ಕಾಮಗಾರಿ ಪೂರ್ಣಗೊಂಡು ಮೂರು ತಿಂಗಳಾದರೂ ಉದ್ಘಾಟನೆಗೆ ಕಾಲ ಕೂಡಿಬಂದಿಲ್ಲ.

ಕಾಳಿದಾಸ ರಸ್ತೆ, ಕನಕದಾಸ ರಸ್ತೆ, ಶೇಷಾದ್ರಿಪುರಂ ರಸ್ತೆ, ಗಾಂಧಿ ನಗರದ ಸುತ್ತಮುತ್ತ ಪಾರ್ಕಿಂಗ್ ಸಮಸ್ಯೆ ತೀವ್ರವಾಗಿದ್ದು, ಈಗಲೂ ವಾಹನಗಳು ರಸ್ತೆ ಬದಿಯಲ್ಲೇ ನಿಲ್ಲುತ್ತಿವೆ. ವಾಹನ ಸವಾರರು ಬಿಬಿಎಂಪಿ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಬಿಬಿಎಂಪಿಯು ನಗರೋತ್ಥಾನ ಯೋಜನೆ ಅಡಿ ₹ 78 ಕೋಟಿ ಅನುದಾನದಲ್ಲಿ ಈ ಕಟ್ಟಡವನ್ನು ನಿರ್ಮಿಸಿದೆ. 2017ರಲ್ಲಿ ಈ ಕಾಮಗಾರಿ ಆರಂಭವಾಗಿತ್ತು. 2021ರ ಡಿಸೆಂಬರ್‌ಗೆ ಕಾಮಗಾರಿ ಮುಕ್ತಾಯವಾಗಬೇಕಿತ್ತು. ಆದರೆ, ಲಾಕ್‌ಡೌನ್ ವೇಳೆ ಕಾರ್ಮಿಕರ ಕೊರತೆಯಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಈಗ ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಿದ್ದಾರೆ. ಆದರೆ, ಸಂಕೀರ್ಣ ಉದ್ಘಾಟಿಸಿ ವಾಹನ ಚಾಲಕರ ಬಳಕೆಗೆ ಅವಕಾಶ ನೀಡಲು ಬಿಬಿಎಂಪಿ ಅಧಿಕಾರಿಗಳು ವಿಳಂಬ ಧೋರಣೆ ತಳೆದಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಕಟ್ಟಡದ ನಿರ್ವಹಣೆಗೆಂದು ಬಿಬಿಎಂಪಿ ಎರಡು ಬಾರಿ ಟೆಂಡರ್ ಕರೆದಿದ್ದರೂ ಯಾರೂ ಆಸಕ್ತಿ ತೋರಿಲ್ಲ. ಮತ್ತೊಂದೆಡೆ ಕಟ್ಟಡ ಗುತ್ತಿಗೆದಾರರಿಗೆ ಕೊನೆಯ ಕಂತಿನ ಹಣವು ಬಿಡುಗಡೆಯಾಗಿಲ್ಲ. ಇದೇ ಕಾರಣಕ್ಕೆ ಉದ್ಘಾಟನೆ ವಿಳಂಬವಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಾಳಿದಾಸ ರಸ್ತೆಯ ಬದಿಯಲ್ಲಿ ಸಾಲುಗಟ್ಟಿ ನಿಂತಿರುವ ವಾಹನಗಳು

ಮಳೆ, ಚಳಿಯಲ್ಲೇ ಪ್ರತಿಭಟನಕಾರರು

ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವವರಿಗೆ ಕಟ್ಟಡದ ಮೇಲ್ಛಾವಣಿಯಲ್ಲಿ ಸ್ಥಳಾವಕಾಶ ಮಾಡಿಕೊಡಲು ಬಿಬಿಎಂಪಿ ಚಿಂತನೆ ನಡೆಸಿತ್ತು. ಕಟ್ಟಡದ ಉದ್ಘಾಟನೆಯೇ ನಡೆಯದಿರುವ ಕಾರಣಕ್ಕೆ ರೈತರು, ಕಾರ್ಮಿಕರು, ನಿವೃತ್ತ ನೌಕರರರು, ವಿವಿಧ ಸಮುದಾಯದ ಪ್ರತಿಭಟನಕಾರರು ಮಳೆ, ಚಳಿ ಹಾಗೂ ಬಿಸಿಲಲ್ಲಿ ಹೊರಭಾಗದಲ್ಲಿ ಪ್ರತಿಭಟನೆ ನಡೆಸುವ ಸ್ಥಿತಿಯಿದೆ.

ಹೃದಯ ಭಾಗದಲ್ಲಿ ಪಾರ್ಕಿಂಗ್ ಸಮಸ್ಯೆ ತೀವ್ರ: ರಾಜಧಾನಿಯಲ್ಲಿ ಒಂದೆಡೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ವಿಧಾನಸೌಧ, ಹೈಕೋರ್ಟ್, ಜಿಲ್ಲಾ ನ್ಯಾಯಾಲಯ ಹಾಗೂ ಸಿಟಿ ಸಿವಿಲ್ ಕೋರ್ಟ್, ನಗರ ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ವೃತ್ತ, ಆರ್‌ಬಿಐ, ಕಂದಾಯ ಭವನ, ಸೆಂಟ್ರಲ್ ಕಾಲೇಜು, ಚಿಕ್ಕಪೇಟೆ, ಅರಮನೆ ರಸ್ತೆ, ಕಬ್ಬನ್ ಪಾರ್ಕ್‌ಗೆ ತೆರಳುವವರು ವಾಹನ ನಿಲುಗಡೆಗೆ ಈಗಲೂ ಪರದಾಡುತ್ತಿದ್ದಾರೆ. ವಾಹನ ನಿಲುಗಡೆಗೆಂದೇ ಪ್ರತ್ಯೇಕವಾದ ಸಂಕೀರ್ಣ ನಿರ್ಮಿಸಿದ್ದರೂ ಅದನ್ನು ಬಳಸಿಕೊಳ್ಳಲು ಬಿಬಿಎಂಪಿ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಪೊಲೀಸರ ಸಾಹಸ: ಮೆಜೆಸ್ಟಿಕ್, ಸ್ವಾತಂತ್ರ್ಯ ಉದ್ಯಾನ, ಗಾಂಧಿ ನಗರದ ಸುತ್ತಲಿನ ರಸ್ತೆಗಳು ನಿತ್ಯವೂ ವಾಹನ ದಟ್ಟಣೆಯಿಂದ ಕೂಡಿರುತ್ತವೆ. ಪೊಲೀಸರಿಗೆ ಬೆಳಿಗ್ಗೆ ಮತ್ತು ಸಂಜೆಯಲ್ಲಿ ವಾಹನ ನಿಯಂತ್ರಿಸುವುದೇ ಸವಾಲಿನಿಂದ ಕೂಡಿದೆ. ಜಾಗದ ಸಮಸ್ಯೆಯಿಂದ ಈ ಭಾಗದಲ್ಲಿ ರಸ್ತೆ ಬದಿಯಲ್ಲೇ ವಾಹನ ನಿಲ್ಲಿಸಲಾಗುತ್ತಿದೆ. ಫ್ರೀಡಂ ಪಾರ್ಕ್ ಸುತ್ತಮುತ್ತ ಸರ್ಕಾರಿ ಕಚೇರಿಗಳು, ಕಾಲೇಜುಗಳಿವೆ. ಪ್ರಮುಖ ವೃತ್ತದಲ್ಲಿಯೇ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಗಾಂಧಿ ನಗರ ಹಾಗೂ ಮೆಜೆಸ್ಟಿಕ್ ಭಾಗದಲ್ಲಿ ದ್ವಿಚಕ್ರಗಳ ಕಳವು ಹೆಚ್ಚುತ್ತಿದೆ. ಕಟ್ಟಡ ಉದ್ಘಾಟಿಸಿ ವಾಹನ ಚಾಲಕರ ಬಳಕೆಗೆ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಹೊಸ ಕಟ್ಟಡದಲ್ಲಿ ಒಂದು ಲಕ್ಷ ಲೀಟರ್ ಮಳೆ ನೀರು ಸಂಗ್ರಹ ವ್ಯವಸ್ಥೆ, ಕಟ್ಟಡ ಒಳಭಾಗಕ್ಕೆ ನೈಸರ್ಗಿಕ ಬೆಳಕಿನ ವ್ಯವಸ್ಥೆ ಹಾಗೂ ಏಕಕಾಲದಲ್ಲಿ 556 ಕಾರುಗಳು, 445 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆಯಿದೆ. ಚಾವಣಿಯಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಲಾಗಿದೆ. ಕಟ್ಟಡ ಒಳಾಂಗಣದಲ್ಲೂ ಬಣ್ಣ ಬಳಿದಿದ್ದು ಕಟ್ಟಡವು ಸುಂದರ, ಆಕರ್ಷಕವಾಗಿ ಕಾಣಿಸುತ್ತಿದೆ. ಉತ್ಪಾದನೆಯಾದ ಹೆಚ್ಚುವರಿ ವಿದ್ಯುತ್ ಮಾರಾಟ ಮಾಡುವ ಆಶಯವೂ ಈಡೇರಿಲ್ಲ.

ಈ ಭಾಗದಲ್ಲಿ ವಾಹನ ದಟ್ಟಣೆ ಸಮಸ್ಯೆಯಿದ್ದರೂ ಕಟ್ಟಡ ಉದ್ಘಾಟಿಸಲು ಬಿಬಿಎಂಪಿಯವರು ಆಸಕ್ತಿ ತೋರುತ್ತಿಲ್ಲ.

ನಾಸೀರ್, ವ್ಯಾಪಾರಿ, ಗಾಂಧಿನಗರ

ಲೀಡ್ ಬ್ಯಾಂಕ್ ಅಧಿಕಾರಿಗಳಿಗೆ ಸಚಿವ ಜೋಶಿ ಪಾಠ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಲೀಡ್ ಬ್ಯಾಂಕ್ ಅಧಿಕಾರಿಗಳನ್ನು ಭಾನುವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತರಾಟೆಗೆ ತೆಗೆದುಕೊಂಡು, ಅವರು ತಂದಿದ್ದ ಹೂಗುಚ್ಛ ಬಿಸಾಡಿ ಆಕ್ರೋಶ ವ್ಯಕ್ತಪಡಿಸಿದರು.

ಭಾನುವಾರ ತಮ್ಮ ನಿವಾಸದಲ್ಲಿ ಭೇಟಿಗೆ ಬಂದಿದ್ದ ಬ್ಯಾಂಕ್ ಅಧಿಕಾರಿಗಳಿಗೆ ಸಚಿವರು ಪಾಠ ಮಾಡಿದರು.

'ಬಡವರ ಹಾಗೂ ಉದ್ಯಮಿಗಳ ಬಗ್ಗೆ ನಿಮಗೆ ಕಾಳಜಿಯಿಲ್ಲ. ನಿಮ್ಮನ್ನು ನೀವು ಏನಂತ ತಿಳಿದುಕೊಂಡಿದ್ದೀರಿ? ಸರ್ಕಾರದ ಮುದ್ರಾ ಯೋಜನೆ ಸೇರಿದಂತೆ ಯಾವ ಯೋಜನೆಯೂ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸಣ್ಣ ಸೌಲಭ್ಯ ಪಡೆಯಬೇಕೆಂದರೂ ಬಡವರು ಬ್ಯಾಂಕ್‌ಗೆ ಅಲೆದಾಡುವಂತಾಗಿದೆ. ಯೋಜನೆ ಅನುಷ್ಠಾನವಾಗಿರುವ ಎಲ್ಲ ಅಂಕಿ–ಅಂಶಗಳು ನನ್ನ ಬಳಿ ಇವೆ. ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತರುತ್ತೇನೆ' ಎಂದು ಎಚ್ಚರಿಸಿದರು.

ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಏಕೀಕರಣ ಪ್ರತಿನಿಧಿಸಿದ್ದ ಶಾಂತವೇರಿ ಗೋಪಾಲಗೌಡರು ಇದ್ದ ಸ್ಥಾನದಲ್ಲಿ ಈಗ ಭೂಮಾಫಿಯಾದವರು, ಉದ್ಯಮಿಗಳು ಮತ್ತು ರಾಜಕೀಯ ಕುಟುಂಬದ ಹಿನ್ನೆಲೆವುಳ್ಳವರಿದ್ದಾರೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಬೇಸರ ವ್ಯಕ್ತಪಡಿಸಿದರು.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಮೈಕೊ ಕನ್ನಡ ಬಳಗದ ಸಹಯೋಗದಲ್ಲಿ ನಡೆದ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಮ್ಮ ಸಂಸತ್ತಿನಲ್ಲಿ ಶೇ 88ರಷ್ಟು ಪ್ರತಿನಿಧಿಗಳು ಕೋಟ್ಯಾಧಿಪತಿಗಳು. ಅವರಲ್ಲಿ ಶೇ 43ರಷ್ಟು ಮಂದಿ ಗಂಭೀರ ಅಪರಾಧ ಹಿನ್ನೆಲೆ ಉಳ್ಳವರಿದ್ದಾರೆ. ಬಡತನದಲ್ಲಿಯೇ ಹುಟ್ಟಿ ತುಳಿತಕ್ಕೆ ಒಳಗಾದವರ ಪರ ಮತ್ತು ಭೂಸುಧಾರಣೆಗಾಗಿ ಹೋರಾಡಿದ ಶಾಂತವೇರಿ ಗೋಪಾಲಗೌಡ ಸ್ಥಾನದಲ್ಲಿ ಈಗ ಇಂಥವರನ್ನು ನೋಡಲು ಬೇಸರವಾಗುತ್ತಿದೆ' ಎಂದರು.

ಪ್ರಶಸ್ತಿ ಸ್ವೀಕರಿಸಿದ ಗುಡ್ಡದಹಳ್ಳಿ ಕೃಷ್ಣಪ್ಪ, ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಮಾತನಾಡಿದರು. ಮೈಕೊ ಕನ್ನಡ ಬಳಗದ ಗೌರವಾಧ್ಯಕ್ಷೆ ಡಾ. ಪದ್ಮಿನಿ ನಾಗರಾಜು ಅಧ್ಯಕ್ಷತೆ ವಹಿಸಿದ್ದರು.

ಗುಡ್ಡದಹಳ್ಳಿ ಬಿ.ಕೃಷ್ಣಪ್ಪ ಅವರಿಗೆ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿಯನ್ನು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಪ್ರದಾನ ಮಾಡಿದರು. ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಮೈಕೊ ಎಂಪ್ಲಾಯ್ಸ್ ಅಸೋಸಿಯೇಷನ್ ಉಪಾಧ್ಯಕ್ಷರಾದ ಬಿ.ಪಿ. ಅನಿಲಕುಮಾರ್, ಕೆ.ಎಸ್. ಶ್ರೀರಾಮತೀರ್ಥ, ಗೌರವಾಧ್ಯಕ್ಷೆ ಪದ್ಮಿನಿ ನಾಗರಾಜು ಇದ್ದರು. –ಪ್ರಜಾವಾಣಿ ಚಿತ್ರ

'ಬುದ್ಧ ಭಾರತದಿಂದ ಪ್ರಬುದ್ಧ ಭಾರತ'

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊನೆಯ ದಿನಗಳ ಕನಸಾದ ಬುದ್ಧಭಾರತದ ಮಾರ್ಗವನ್ನು ಅನುಸರಿಸಿದರೆ ಮಾತ್ರವೇ ಪ್ರಬುದ್ಧ ಭಾರತದ ನಿರ್ಮಾಣ ಸಾಧ್ಯ' ಎಂದು ಅಂಬೇಡ್ಕರ್ ಅವರ ಮರಿ ಮೊಮ್ಮಗ ಸಂದೇಶ್ ಅಶೋಕ್ ಅಂಬೇಡ್ಕರ್ ಹೇಳಿದರು.

ಮಹಾನಾಯಕ ಐಕ್ಯತಾ ವೇದಿಕೆ ವತಿಯಿಂದ ಜೆ.ಪಿ. ನಗರ ಎಂಟನೇ ಹಂತದ ಕೊತ್ತನೂರು ದಿಣ್ಣೆಯಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಮಾತನಾಡಿ, 'ಜಾತಿ ಆಧಾರಿತ ತಾರತಮ್ಯ ಮತ್ತು ಅಸ್ಪೃಶ್ಯತೆ ನಿರ್ಮೂಲನೆ ಮಾಡಲು ಬುದ್ಧ ಭಾರತವೇ ದಾರಿ ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಅವರ ಮಾತುಗಳು ಸದಾಕಾಲಕ್ಕೂ ಸತ್ಯ ಎಂದರು.

ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಮಾತನಾಡಿ, 'ಕೇಂದ್ರ ಸರ್ಕಾರವು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಮೀಸಲಾತಿ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡುವ ಕ್ರಮ ಸಂವಿಧಾನಕ್ಕೆ ವಿರುದ್ಧವಾದುದು' ಎಂದರು.

'ಬಿಜೆಪಿ ಸರ್ಕಾರ ಪರಿಶಿಷ್ಟರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರ ಮಕ್ಕಳನ್ನು ಶಿಕ್ಷಣದಿಂದ ದೂರ ಮಾಡುತ್ತಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ರದ್ದು ಮಾಡಿರುವುದರ ಹಿಂದೆ ಇದೇ ಉದ್ದೇಶವಿದೆ' ಎಂದರು.

ಪ್ರಜಾ ಪರಿವರ್ತನಾ ವೇದಿಕೆ ಅಧ್ಯಕ್ಷ ಬಿ. ಗೋಪಾಲ್ ಮಾತನಾಡಿ, ಅಂಬೇಡ್ಕರ್ ಅವರು ಎಲ್ಲರಿಗೂ ಮತದಾನದ ಹಕ್ಕು ನೀಡುವ ಮೂಲಕ ಇಡೀ ದೇಶದ ಜನರಿಗೆ ಶಕ್ತಿ ತುಂಬಿದರು. ಅವರು ಈ ವಿಚಾರದಲ್ಲಿ ಕಠಿಣ ನಿಲುವು ತಾಳದಿದ್ದರೆ ಮತದಾನದ ಹಕ್ಕು ದೇಶದ ಕೆಲವೇ ಜನರಲ್ಲಿ ಮಾತ್ರ ಇರುತ್ತಿತ್ತು ಎಂದು ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪರಿವರ್ತನಾ ವಾದ) ರಾಜ್ಯ ಸಮಿತಿ ಪ್ರಧಾನ ಸಂಚಾಲಕ ಎಂ. ಗೋವಿಂದ ರಾಜು ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಣ್ಣ ಮಳವಳ್ಳಿ, ಕಾಂಗ್ರೆಸ್ ಮುಖಂಡ ಆರ್. ಕೆ. ರಮೇಶ್, ವಿಧಾನ ಪರಿಷತ್‌ನ ನಿವೃತ್ತ ಉಪ ಕಾರ್ಯದರ್ಶಿ ಬಿ.ಟಿ. ಶಿವಕುಮಾರ್, ಮಹಾನಾಯಕ ಐಕ್ಯತಾ ವೇದಿಕೆ ಪ್ರಮುಖರಾದ ಕರಿಕಲ್ ರಾಮಲಿಂಗಂ, ಸೂರಹುಣಸೆ ವೆಂಕಟೇಶ್, ಜಯಪ್ರಕಾಶ್, ತರುಣ್, ಕೊತ್ತನೂರು ದಿಣ್ಣೆ ಮುನಿಸ್ವಾಮಿ ಇದ್ದರು.

ಗ್ಯಾಸ್ ಗೀಸರ್ ಸಿಡಿದು ಎಂಜಿನಿಯರಿಂಗ್ ವಿದ್ಯಾರ್ಥಿನಿ ಸಾವು

ಮಾಗಡಿ: ಸ್ನಾನ ಮಾಡುವ ಗ್ಯಾಸ್ ಗೀಸರ್ ಸಿಡಿದು ಮಾಗಡಿ ತಾಲ್ಲೂಕಿನ ಮರೂರು ಗ್ರಾಮದ ಎಂಜಿನಿಯರಿಂಗ್ ವಿದ್ಯಾರ್ಥಿನಿ ಭಾನುವಾರ ಬೆಂಗಳೂರಿನಲ್ಲಿ ಮೃತಪಟ್ಟಿದ್ದಾಳೆ.

ತಾಲ್ಲೂಕಿನ ಮರೂರು ಗ್ರಾಮದ ವಿಶಾಲಾಕ್ಷಮ್ಮ ಮತ್ತು ಜಯರಾಮಯ್ಯ ದಂಪತಿ ಪುತ್ರಿ ಅನನ್ಯ (20) ಮೃತ ಯುವತಿ. ಆಕೆ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಲಿಯುತ್ತಿದ್ದಳು. ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರದಲ್ಲಿ ನೆಲೆಸಿದ್ದ ಆಕೆ ಬೆಳಿಗ್ಗೆ ಸ್ನಾನಕ್ಕೆ ಹೋದಾಗ ನೀರು ಕಾಯಿಸುತ್ತಿದ್ದ ಗ್ಯಾಸ್ ಗೀಸರ್ ಸ್ಫೋಟವಾಗಿದೆ. ಸ್ವಗ್ರಾಮ ಮರೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮರದಿಂದ ಬಿದ್ದ ಅಳಿಲು: ಇಪ್ಪತ್ತು ದಿನದಿಂದ ದೀಕ್ಷಾಳೊಂದಿಗೆ ವಾಸ

ಅಳಿಲುಸೇವೆಗೆ ಆಭಾರಿಯಾದ 'ಅಳಿಲು'

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಾಮಾನ್ಯವಾಗಿ ತೆಂಗಿನ ಮರ, ಆಲದ ಮರ, ಹಣ್ಣಿನ ಮರಗಳ ಮೇಲೆ ಬಾಲ ಕುಣಿಸಿಕೊಂಡು ಓಡಾಡುವ ಅಳಿಲೊಂದು 5ನೇ ತರಗತಿಯ ಬಾಲಕಿಯ ಸಂಗಾತಿಯಾಗಿದೆ. ಇಡೀ ದಿನ ಬಾಲಕಿಯ ಜತೆಯಲ್ಲಿರುತ್ತದೆ.

ವೇಗವಾಗಿ ಸರ ಸರನೆ ಓಡಾಡುವ ಮತ್ತು ತ್ವರಿತವಾಗಿ ಮರ ಹತ್ತಿ, ಕೊಂಬೆಗಳ ಮೇಲೆ ಸರಾಗವಾಗಿ ಓಡಾಡುವ ಅಳಿಲು ಸಾಮಾನ್ಯವಾಗಿ ಉದ್ಯಾನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ, ಅಳಿಲು ಸೇವೆ ಪಡೆದ ಈ 'ರಾಮ' ದೀಕ್ಷಾಳೊಂದಿಗೆ 20 ದಿನಗಳಿಂದ ಇರುವುದು ಎಲ್ಲರಿಗೂ ಆಶ್ಚರ್ಯ ಮೂಡಿಸಿದೆ.

ತಿಲಕನಗರದ ಎಸ್.ಆರ್. ಕೃಷ್ಣಪ್ಪ ಗಾರ್ಡನ್ ಹತ್ತಿರದ ನಿವಾಸಿ ಹರೀಶ್ ಕುಮಾರ್ ಅವರ ಮಗಳು 5ನೇ ತರಗತಿಯಲ್ಲಿ ಓದುತ್ತಿರುವ ದೀಕ್ಷಾ ಜತೆ ಅಳಿಲೊಂದು ಸಲುಗೆಯಿಂದ ಆಟವಾಡಿಕೊಂಡಿದೆ. ಅದಕ್ಕೆ ರಾಮ ಎಂದು ಹೆಸರಿಡಲಾಗಿದೆ.

20 ದಿನಗಳ ಹಿಂದೆ ತೆಂಗಿನ ಮರದಿಂದ ಕೆಳಗೆ ಬಿದ್ದ ಈ ಅಳಿಲಿಗೆ ಆರೈಕೆ ಮಾಡಿದರು. ಅದಕ್ಕೆ ಬೇಕಾದ ಆಹಾರ ನೀಡಿ, ಎರಡು ಮೂರು ದಿನಗಳವರೆಗೂ ಅದರ ಆರೋಗ್ಯವನ್ನು ನೋಡಿಕೊಂಡಿದ್ದ ದೀಕ್ಷಾಳನ್ನು ಈ ಅಳಿಲು ಬಿಟ್ಟು ಹೋಗುತ್ತಿಲ್ಲ. ಅಳಿಲು ಚೇತರಿಸಿಕೊಂಡ 10–12 ದಿನಗಳು ಕಳೆದರೂ ದೀಕ್ಷಾಳನ್ನು ಬಿಟ್ಟು ತನ್ನ ಗೂಡಿಗೆ ತೆರಳದಿರುವುದು ಎಲ್ಲರಲ್ಲಿ ಆಶ್ಚರ್ಯವನ್ನುಂಟು ಮಾಡಿದೆ.

'ಮನೆಯ ಪಕ್ಕದಲ್ಲಿರುವ ತೆಂಗಿನ ಮರದ ಮೇಲಿಂದ ಕೆಳಗೆ ಬಿದ್ದ ಅಳಿಲು ಪ್ರಜ್ಞಾಹೀನ ಸ್ಥಿತಿಯಲ್ಲಿತ್ತು. ಆ ಅಳಿಲನ್ನು ಮಗಳು ದೀಕ್ಷಾ ಮನೆಯೊಳಗೆ ತೆಗೆದುಕೊಂಡು ಬಂದು ಅದರ ಆರೈಕೆ ಮಾಡಿದ ನಂತರ ಸ್ವಲ್ಪ ಚೇತರಿಸಿಕೊಂಡಿತ್ತು. ನಂತರ ಅದಕ್ಕೆ ಹಾಲು ಕುಡಿಸಿ, ಕಾಳು ಕಡಿ ಹಾಕಿದ್ದಳು. ಈಗ ಆ ಅಳಿಲು ಅವಳನ್ನು ಬಿಟ್ಟು ಹೋಗುತ್ತಿಲ್ಲ. ಮನೆಯ ಕೋಣೆಯೊಂದರಲ್ಲಿ ಮಗಳ ಮೈಮೇಲೆ ಆಟವಾಡಿಕೊಂಡಿದೆ. ನಿತ್ಯ ಅದಕ್ಕೆ ಆಹಾರವನ್ನು ಅವಳೇ ಹಾಕುತ್ತಿದ್ದಾಳೆ. ಅವಳೊಟ್ಟಿಗೆ ಆಟವಾಡಿಕೊಂಡು ಮನೆಯಲ್ಲಿಯೇ ಇದೆ. ಬೇರೆಯವರ ಕಡೆ ಬರುವುದು ಕಡಿಮೆ. ಆದರೆ ದೀಕ್ಷಾ ಜತೆ ಹೆಚ್ಚು ಅನ್ಯೋನ್ಯವಾಗಿದೆ' ಎಂದು ದೀಕ್ಷಾ ತಂದೆ ಹರೀಶ್‌ಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ತೆಂಗಿನ ಮರದಿಂದ ಕೆಳಗೆ ಬಿದ್ದ ಅಳಿಲನ್ನು ಮನೆಗೆ ತಂದು ಆರೈಕೆ ಮಾಡಿದ್ದೆ. ಅದು ಈಗ ಚೇತರಿಸಿಕೊಂಡಿದ್ದು, ನನ್ನನ್ನು ಬಿಟ್ಟು ಹೋಗುತ್ತಿಲ್ಲ. ಹಾಲು, ಹಣ್ಣು–ಹಂಪಲನ್ನು ನೀಡುತ್ತೇನೆ. ಪ್ರಾಣಿ, ಪಕ್ಷಿಗಳೆಂದರೆ ನನಗೆ ಬಹಳ ಇಷ್ಟ. ಜತೆಗೆ ಕೋಳಿ, ಬೆಕ್ಕು ಸಹ ಮನೆಯಲ್ಲಿ ಸಾಕಿದ್ದು, ಅದರೊಂದಿಗೆ ರಾಮನನ್ನು(ಅಳಿಲು) ಸಾಕುತ್ತಿದ್ದೇನೆ' ಎಂದು ದೀಕ್ಷಾ ತಿಳಿಸಿದರು.

ದೀಕ್ಷಾ ಹೆಗಲ ಮೇಲೆ ಕುಳಿತುಕೊಂಡಿರುವ ಅಳಿಲು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ನೇಮಕಾತಿ ಅಕ್ರಮ ತಡೆಗೆ ಸೂಚನೆ

ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನ ಬಲಪಡಿಸಲು ಹೆಚ್ಚಿನ ಅನುದಾನ: ಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ನೇಮಕಾತಿಯಲ್ಲಿನ ಅಕ್ರಮಗಳನ್ನು ತಡೆಯಲು ತಂತ್ರಜ್ಞಾನ ಬಳಸಿಕೊಳ್ಳಬೇಕು. ಇದಕ್ಕಾಗಿ ಪ್ರತ್ಯೇಕ ಕಾರ್ಯ ರೂಪಿಸಿ ಅಗತ್ಯವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ಭಾನುವಾರ ಇಲ್ಲಿ ರಾಜ್ಯ ಪೊಲೀಸ್ 'ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ರಾಷ್ಟ್ರಪತಿಗಳ ಪೊಲೀಸ್ ಪದಕ' ಪ್ರದಾನ ಮಾಡಿ ಅವರು ಮಾತನಾಡಿದರು.

'ತಂತ್ರಜ್ಞಾನ ಬಲಪಡಿಸಲು ಮುಂದಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿಡಲಾಗುವುದು. ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಪರಿಣತರನ್ನು ಬಳಸಿಕೊಂಡು ಸೈಬರ್ ವಂಚಕರನ್ನು ಬಂಧಿಸಬೇಕು' ಎಂದು ಸೂಚಿಸಿದರು.

'ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಮಾದರಿಯಲ್ಲಿ ಮಧ್ಯಮ ಹಂತದ ಪೊಲೀಸರಿಗೆ ತರಬೇತಿ ನೀಡುವುದು ಅವಶ್ಯಕ. ಕಾನ್‌ಸ್ಟೆಬಲ್ ಹಾಗೂ ಐಪಿಎಸ್ ಅಧಿಕಾರಿಗಳಿಗೆ ಉತ್ತಮ ತರಬೇತಿ ಲಭಿಸುತ್ತಿದೆ. ಅದೇ ರೀತಿಯಲ್ಲಿ ಮಧ್ಯಮ ಹಂತದ ಪೊಲೀಸರಿಗೆ ಪರಿಣಾಮಕಾರಿಯಾಗಿ ತರಬೇತಿ ನೀಡಬೇಕಾಗಿದೆ. ಪ್ರತ್ಯೇಕ ತರಬೇತಿ ಸಂಸ್ಥೆ, ಪಠ್ಯ ಹಾಗೂ ವಿವಿಧ ಕೋರ್ಸ್‌ಗಳ ಮೂಲಕ ಮಧ್ಯಮ ಹಂತದ ಪೊಲೀಸರ ದಕ್ಷತೆ ಹೆಚ್ಚಿಸಬೇಕಿದೆ' ಎಂದು ಹೇಳಿದರು.

'ವಿಧಿವಿಜ್ಞಾನ ಪ್ರಯೋಗಾಲಯ ಆಧುನೀಕರಣ ಮಾಡಲಾಗಿದೆ. ಅಪರಾಧ ಪತ್ತೆಗಾಗಿ ಹುಬ್ಬಳ್ಳಿ, ಬಳ್ಳಾರಿಯಲ್ಲಿ ಅತ್ಯಾಧುನಿಕ ಪ್ರಯೋಗಾಲಯ ನಿರ್ಮಿಸಲಾಗಿದೆ' ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ವಿಧಿವಿಜ್ಞಾನ ಪ್ರಯೋಗಾಲಯ ಡಿಎನ್‌ಎ ಪರೀಕ್ಷೆ, ಬೆರಳಚ್ಚು ಬ್ಯೂರೊಗಳನ್ನು ಬಲಪಡಿಸಲು 'ಇಲಾಖೆ ಮುಂದಾಗಿದೆ. ಅದು ಅದಷ್ಟು ಬೇಗ ಜಾರಿಗೆ ಬರಬೇಕು' ಎಂದು ಹೇಳಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, 'ನಾಲ್ಕೂವರೆ ವರ್ಷಗಳಲ್ಲಿ ಪೊಲೀಸ್ ಇಲಾಖೆಯ ಬಲವರ್ಧನೆಗೆ ಅತ್ಯಂತ ಹೆಚ್ಚು ಅನುದಾನ ಬಿಡುಗಡೆ ಮಾಡಲಾಗಿದೆ. ₹ 200 ಕೋಟಿ ವೆಚ್ಚದಲ್ಲಿ 117 ಸುಸಜ್ಜಿತ ಪೊಲೀಸ್ ಠಾಣೆ ನಿರ್ಮಿಸಲಾಗುತ್ತಿದೆ. ರಾಜ್ಯದ ಪೊಲೀಸರು ದಕ್ಷತೆಗೆ ಹೆಸರಾಗಿದ್ದಾರೆ. ರಾಜ್ಯ ಪೊಲೀಸರಿಗೆ ಉತ್ತಮ ವಸತಿ ಸೌಲಭ್ಯ, ಸೈಬರ್ ಕ್ರೈಂ ವಿಭಾಗದ ಬಲಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆ' ಎಂದರು.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಡಿಜಿಪಿ ಪ್ರವೀಣ್ ಸೂದ್ ಇದ್ದರು.

ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ಬೆಂಗಳೂರಿನಲ್ಲಿ ಭಾನುವಾರ ರಾಷ್ಟ್ರಪತಿಗಳ ಪೊಲೀಸ್ ಪದಕ ಪ್ರದಾನ ಮಾಡಲಾಯಿತು. ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್ ಗೃಹ ಸಚಿವ ಆರಗ ಜ್ಞಾನೇಂದ್ರ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಡಿಜಿಪಿ ಪ್ರವೀಣ್ ಸೂದ್ ಇತರರು ಹಾಜರಿದ್ದರು

ರಾಜ್ಯದ ಪೊಲೀಸರು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದಾರೆ. ಪೊಲೀಸರು ಹೊಸ ತಂತ್ರಜ್ಞಾನ ಬಳಕೆಯಿಂದ ಹೊರಗೆ ಉಳಿಯಬಾರದು.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ದೇಶದಲ್ಲಿ ಶಾಂತಿ, ಸಾಮರಸ್ಯದ ವಾತಾವರಣ ಅಗತ್ಯವಿದೆ. ಅಂತಹ ವಾತಾವರಣವನ್ನು ರೂಪಿಸಲು ಪೊಲೀಸರ ಪಾತ್ರ ನಿರ್ಣಾಯಕ.
ಥಾವರಚಂದ್ ಗೆಹಲೋತ್, ರಾಜ್ಯಪಾಲ

ದೆಹಲಿಯಲ್ಲಿ 'ಕೈ' ನಾಯಕರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್, ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ಬಳಿಕ ಕಾಂಗ್ರೆಸ್ ಹೈಕಮಾಂಡ್ ಗಮನ ಕರ್ನಾಟಕದತ್ತ ಹರಿದಿದೆ. ಚುನಾವಣೆಗೆ ರಣತಂತ್ರ ರೂಪಿಸಲು 'ಕೈ' ನಾಯಕರ ಮಹತ್ವದ ಸಭೆ ನವದೆಹಲಿಯಲ್ಲಿ ಸೋಮವಾರ (ಡಿ.12) ನಡೆಯಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯುವ ಸಭೆಗೆ ಹಾಜರಾಗಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ವಿವಿಧ ರಾಜ್ಯ ನಾಯಕರಿಗೆ ಆಹ್ವಾನ ಬಂದಿದೆ.

ಚುನಾವಣೆಯ ಪೂರ್ವಸಿದ್ಧತೆಗಳ ರೂಪುರೇಷೆ ಸಿದ್ಧಪಡಿಸುವುದು ಸಭೆಯ ಉದ್ದೇಶ. ಜೊತೆಗೆ, ಅಭ್ಯರ್ಥಿಗಳ ಆಯ್ಕೆ, ಬಸ್ ಯಾತ್ರೆ, ಪಕ್ಷ ಸಂಘಟನೆ ಕುರಿತೂ ಚರ್ಚೆ ನಡೆಯಲಿದೆ. ಎಐಸಿಸಿ ನಾಯಕರಾದ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಶಾಸಕ ಜಿ.ಪರಮೇಶ್ವರ, ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹಮ್ಮದ್, ಆರ್.ಧ್ರುವನಾರಾಯಣ, ಸತೀಶ ಜಾರಕಿಹೊಳಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸಭಾಪತಿ ಸ್ಥಾನಕ್ಕೆ ಚುನಾವಣೆ ಮಲ್ಲಾಪುರೆಗೆ ವರಿಷ್ಠರ ಬುಲಾವ್

ರಘುನಾಥರಾವ್ ಮಲ್ಲಾಪುರೆ

ಬಸವರಾಜ ಹೊರಟ್ಟಿ

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಲಾಪುರೆ ಮತ್ತು ಬಸವರಾಜ ಹೊರಟ್ಟಿ ಮಧ್ಯೆ ಪೈಪೋಟಿ ನಡೆಯುತ್ತಿರುವ ಬೆನ್ನಲ್ಲೇ, ಬಿಜೆಪಿ ವರಿಷ್ಠರ ಬುಲಾವ್ ಮೇರೆಗೆ ರಘುನಾಥರಾವ್ ಮಲ್ಲಾಪುರೆ ದೆಹಲಿಗೆ ಪ್ರಯಾಣಿಸಿದ್ದಾರೆ.

'ಪ್ರಜಾವಾಣಿ' ಜೊತೆಗೆ ಮಾತನಾಡಿದ ಮಲ್ಲಾಪುರೆ, 'ಪೂರ್ವನಿಯೋಜಿತ ಕಾರ್ಯಕ್ರಮದಂತೆ ದೆಹಲಿಗೆ ಬಂದಿದ್ದೇನೆ. ಸಭಾಪತಿ ವಿಚಾರದಲ್ಲಿ ವರಿಷ್ಠರ ಜೊತೆ ಚರ್ಚಿಸುವ ಬಗ್ಗೆ ನೋಡೋಣ' ಎಂದಷ್ಟೆ ಪ್ರತಿಕ್ರಿಯಿಸಿದರು.

ಇದೇ 19ರಿಂದ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ. ಬಿಜೆಪಿ ನಾಯಕರ ಸೂಚನೆಯಂತೆ 21ರಂದು ಸಭಾಪತಿ ಚುನಾವಣೆಗೆ ಸರ್ಕಾರ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಇದಕ್ಕೆ ಮಲ್ಲಾಪುರೆ ತೀವ್ರ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಸಭಾಪತಿ ಸ್ಥಾನಕ್ಕಾಗಿ ಹೊರಟ್ಟಿ ಪಟ್ಟು ಹಿಡಿದಿದ್ದಾರೆ. ಹೀಗಾಗಿ, ಮಲ್ಲಾಪುರೆ ಅವರ ಮನವೊಲಿಸಲು ವರಿಷ್ಠರು ಮುಂದಾಗಿದ್ದಾರೆ ಎಂದು ಹೇಳಲಾಗಿದೆ.

ಈ ಮಧ್ಯೆ, ಸಭಾಪತಿ ಸ್ಥಾನದಲ್ಲಿ ಮಲ್ಲಾಪುರೆ ಅವರನ್ನೇ ಮುಂದುವರಿಸುವಂತೆ ಕುರುಬ ಸಮುದಾಯದ ಕೆಲವು ನಾಯಕರು ಒತ್ತಾಯಿಸಿದ್ದಾರೆ. ಬಿಜೆಪಿಯ ಕೆಲವು ನಾಯಕರೂ ಇದಕ್ಕೆ ದನಿಗೂಡಿಸಿದ್ದಾರೆ.

ಆದರೆ, ಜೆಡಿಎಸ್ ತ್ಯಜಿಸಿ ಪಕ್ಷಕ್ಕೆ ಬಂದಿರುವ ಹೊರಟ್ಟಿ ಅವರಿಗೆ ಸಭಾಪತಿ ಸ್ಥಾನ ನೀಡುವ ಬಗ್ಗೆ ಬಿಜೆಪಿ ನಾಯಕರು ಮಾತು ಕೊಟ್ಟಿದ್ದರು. ಕಳೆದ ಅಧಿವೇಶನದಲ್ಲಿಯೇ ಚುನಾವಣೆ ನಡೆಯಬೇಕಿತ್ತು. ಆದರೆ, ಇಬ್ಬರ ಮಧ್ಯೆ ಪೈಪೋಟಿ ಏರ್ಪಟ್ಟಿದ್ದರಿಂದ ನಡೆದಿರಲಿಲ್ಲ.

ಬಹು ಮಾಧ್ಯಮ ಪ್ರಜಾವಾಣಿ 75 www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಗುಜರಾತ್-ಹಿಮಾಚಲ ಫಲಿತಾಂಶ ಕರ್ನಾಟಕದ ಮೇಲೇನು ಪರಿಣಾಮ
ಸಂವಾದ
ಭಾಗವಹಿಸುವವರು:
ಎಲ್. ಗಂಗಾಧರಮೂರ್ತಿ, ಪ್ರಧಾನ ಕಾರ್ಯದರ್ಶಿ ಜೆಡಿಎಸ್
ನಿಕೇತ್ ರಾಜ್ ಮೌರ್ಯ, ಕಾಂಗ್ರೆಸ್ ವಕ್ತಾರ
ಮೋಹನ ವಿಶ್ವ, ಬಿಜೆಪಿ ವಕ್ತಾರ
ಕುಶಲ ಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ, ಎಎಪಿ
ಮಧ್ಯಾಹ್ನ 12 ರಿಂದ 1

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಇಂದು ಶಾಲಾ–ಕಾಲೇಜುಗಳಿಗೆ ರಜೆ

ಮ್ಯಾಂಡಸ್: ಹಲವೆಡೆ ಜಿಟಿ ಜಿಟಿ ಮಳೆ

ಪ್ರಜಾವಾಣಿ ವಾರ್ತೆ

ಶಿರಸಿ/ಹುಬ್ಬಳ್ಳಿ: ಮ್ಯಾಂಡಸ್ ಚಂಡಮಾರುತದ ಪ್ರಭಾವ ಕಡಲ ತೀರದ ಜಿಲ್ಲೆ ಉತ್ತರ ಕನ್ನಡ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳ ಮೇಲೂ ಪ್ರಭಾವ ಬೀರಿದೆ. ಬೆಳಿಗ್ಗೆಯಿಂದಲೇ ಮೋಡ ಮುಸುಕಿದ ವಾತಾವರಣ ಆವರಿಸಿದ್ದು, ಹಲವೆಡೆ ಜಿಟಿಜಿಟಿ ಮಳೆ ಸುರಿದಿದೆ. ಚಳಿಯೂ ಹೆಚ್ಚಾಗಿದೆ.

ಶಿರಸಿ, ಭಟ್ಕಳ, ಕಾರವಾರ ಸಿದ್ದಾಪುರ, ಕುಮಟಾದಲ್ಲಿ ಮಳೆಯಾಗಿದೆ. ಭತ್ತ, ಅಡಿಕೆ ಕೊಯ್ಲಿನ ಅವಧಿ ಇದಾಗಿರುವ ಕಾರಣ ಅಕಾಲಿಕ ಮಳೆಯಿಂದ ರೈತರು ಕಂಗೆಟ್ಟಿದ್ದಾರೆ. ಮಲೆನಾಡು ಭಾಗದಲ್ಲಿ ಅಡಿಕೆ ಕೊಯ್ಲು ಆರಂಭಗೊಂಡಿದ್ದು ಅಡಿಕೆ ಒಣಗಿಸಲು ರೈತರು ಪಾಲಿಹೌಸ್, ಡ್ರೈಯರ್ ಮೊರೆ ಹೋಗುತ್ತಿದ್ದಾರೆ. ಬನವಾಸಿ ಭಾಗದಲ್ಲಿ ಭತ್ತ ಕಟಾವು ಮಾಡಿ ಗದ್ದೆಯಲ್ಲಿ ಬಿಟ್ಟಿರುವ ರೈತರು ಅವುಗಳನ್ನು ಮಳೆಯಿಂದ ರಕ್ಷಿಸಲು ತಾಡಪತ್ರಿ ಬಳಸಿದ್ದಾರೆ.

ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಹಾವೇರಿ, ವಿಜಯನಗರದಲ್ಲಿ ಮಳೆಯಾಗಿದೆ. ಜನ ಛತ್ರಿ ಹಿಡಿದು ಓಡಾಡುತ್ತಿದ್ದರೆ, ಕೆಲವೆಡೆ ದ್ವಿಚಕ್ರ ವಾಹನ ಸವಾರರು ನೆನೆದುಕೊಂಡೇ ಹೋಗುತ್ತಿದ್ದ ದೃಶ್ಯ ಕಂಡು ಬಂತು.

ಮಳೆ ಇರುವ ಕಾರಣ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯಲ್ಲಿ ಸೋಮವಾರ (ಡಿ.12) ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ತಗ್ಗಿದ ಪ್ರಭಾವ, ಮಳೆ ಇಳಿಮುಖ ಸಾಧ್ಯತೆ

ಬೆಂಗಳೂರು: 'ಮ್ಯಾಂಡಸ್' ಚಂಡಮಾರುತ ಪ್ರಭಾವ ತಗ್ಗಿದ್ದು, ಸೋಮವಾರದಿಂದ ಮಳೆ ಇಳಿಮುಖವಾಗುವ ಸಾಧ್ಯತೆಯಿದೆ. ಆದರೆ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದಲ್ಲಿ ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ ಇರಲಿದೆ. ದಕ್ಷಿಣ ಹಾಗೂ ಉತ್ತರ ಒಳನಾಡಿನ ಹಲವು ಕಡೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40ರಿಂದ 50 ಕಿ.ಮೀ ಇರಲಿದ್ದು, 55 ಕಿ.ಮೀಗೆ ತಲುಪುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಚಂಡಮಾರುತ ಪ್ರಭಾವದಿಂದ ಎರಡು ದಿನಗಳಿಂದಲೂ ಹಲವು ಜಿಲ್ಲೆಗಳಲ್ಲಿ ಜಿಟಿಜಿಟಿ ಮಳೆಯಾಗಿದೆ. ಬೆಂಗಳೂರಿನಲ್ಲೂ ಭಾನುವಾರ ಬೆಳಿಗ್ಗೆಯಿಂದಲೇ ತುಂತುರು ಮಳೆಯಾಗಿದೆ. ರಾಜಧಾನಿಯಲ್ಲಿ ಇನ್ನು ಎರಡು ದಿನ ಇದೇ ಸ್ಥಿತಿ ಇರಲಿದೆ ಎಂದು ತಿಳಿಸಿದೆ.

24 ಗಂಟೆಗಳಲ್ಲಿ ಕೋಲಾರ, ಚಿಂತಾಮಣಿಯಲ್ಲಿ 7 ಸೆಂ.ಮೀ, ಹೊಸಕೋಟೆ, ದೇವನಹಳ್ಳಿ ಹಾಗೂ ಗೌರಿಬಿದನೂರಿನಲ್ಲಿ 5 ಸೆಂ.ಮೀ ಮಳೆಯಾಗಿದೆ. ಬೆಂಗಳೂರು ನಗರ, ಯಲಹಂಕ, ಪಾವಗಡ ಹಾಗೂ ಮಧುಗಿರಿಯಲ್ಲಿ 4 ಸೆಂ.ಮೀ.ನಷ್ಟು ಮಳೆಯಾಗಿದೆ.

ಹವಾಮಾನ ಕನಿಷ್ಠ–ಗರಿಷ್ಠ (ಡಿಗ್ರಿ ಸೆಲ್ಸಿಯಸ್‌ಗಳಲ್ಲಿ)

ಪ್ರದೇಶ	ಕನಿಷ್ಠ	ಗರಿಷ್ಠ
ಬೆಂಗಳೂರು	18	25
ಮಂಗಳೂರು	23	29
ಚಿತ್ರದುರ್ಗ	19	24
ಗದಗ	17	25
ಹೊನ್ನಾವರ	21	30

ಶಿರಸಿ ತಾಲ್ಲೂಕಿನ ಕಿರವತ್ತಿಯಲ್ಲಿ ಕೊಯ್ಲು ಮಾಡಿಟ್ಟ ಭತ್ತದ ತೆನೆ ರಾಶಿಯನ್ನು ಮಳೆಯಿಂದ ರಕ್ಷಿಸಲು ರೈತರೊಬ್ಬರು ತಾಡಪತ್ರಿ ಮುಚ್ಚಿದ್ದರು

ಅಕಾಲಿಕ ಮಳೆ: ಬೆಳೆ ಹಾನಿ ಭೀತಿ

ಮೈಸೂರು: ಬಂಗಾಳಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ 'ಮ್ಯಾಂಡಸ್' ಚಂಡಮಾರುತದ ಪ್ರಭಾವವು ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲೂ ಉಂಟಾಗಿದೆ.

ಭಾನುವಾರವೂ ದಿನವಿಡೀ ಮೋಡ ಕವಿದ ವಾತಾವರಣವಿತ್ತು. ಆಗಾಗ ತುಂತುರು ಮಳೆ ಬಿದ್ದಿತು. ಶನಿವಾರ ರಾತ್ರಿ ಜೋರು ಮಳೆ ಸುರಿಯಿತು. ಚಾಮರಾಜನಗರ ಹಾಗೂ ಯಳಂದೂರು ಭಾಗದಲ್ಲಿ ಹೆಚ್ಚು ಮಳೆಯಾಗಿದೆ.

ಪ್ರವಾಹ ಮತ್ತು ಅತಿವೃಷ್ಟಿಯಿಂದ ಬೆಳೆ ನಷ್ಟ ಅನುಭವಿಸಿದ್ದ ರೈತರಿಗೆ ಚಂಡಮಾರುತವು ಸೃಷ್ಟಿಸಿರುವ ಪ್ರತಿಕೂಲ ವಾತಾವರಣವು ಮತ್ತೊಂದು ಸಂಕಷ್ಟ ತಂದೊಡ್ಡಿದೆ. ಭತ್ತದ ಬೆಳೆ ಕೊಯ್ಲು ಹಾಗೂ ಒಕ್ಕಣೆಗೆ ಅಡ್ಡಿಯಾಗಿದೆ. ಇದೇ ಪರಿಸ್ಥಿತಿ ಇನ್ನೂ ಕೆಲವು ದಿನ ಮುಂದುವರಿಯುವ ಮುನ್ಸೂಚನೆ ಇದ್ದು, ಬೆಳೆಗಳು ಇನ್ನಷ್ಟು ಹಾಳಾಗುವ ಆತಂಕ ಕೃಷಿಕರನ್ನು ಕಾಡತೊಡಗಿದೆ.

'ಪಕ್ಷ ಸೂಚಿಸಿದರೆ ಸಿದ್ದರಾಮಯ್ಯ ವಿರುದ್ಧ ಸ್ಪರ್ಧೆ'

ಮೈಸೂರು: 'ಕಾಂಗ್ರೆಸ್‌ನ ಸಿದ್ದರಾಮಯ್ಯ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ, ಅವರ ವಿರುದ್ಧ ಕಣಕ್ಕಿಳಿಯುವಂತೆ ಪಕ್ಷ ಸೂಚಿಸಿದರೆ ನಾನು ಸಿದ್ಧ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಭಾನುವಾರ ಹೇಳಿದರು.

ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷ ನನಗೆ ಯಾವುದೇ ಸವಾಲು ಕೊಟ್ಟರೂ ಅದನ್ನು ನಿಭಾಯಿಸುತ್ತೇನೆ. ಪಕ್ಷದ ತೀರ್ಮಾನವೇ ಅಂತಿಮ' ಎಂದರು.

'ವರುಣಾ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಲ್ಲೂ ಸಂಘಟನೆ ಮಾಡುತ್ತಿದ್ದೇನೆ. ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಪಡೆಯಲು ಹೋರಾಡುತ್ತಿದ್ದೇವೆ, ಸಂಘಟನೆ ಬಲಪಡಿಸುತ್ತಿದ್ದೇವೆ' ಎಂದು ತಿಳಿಸಿದರು.

'ಪ್ರಧಾನಿ ನರೇಂದ್ರ ಮೋದಿ ಎನ್ನುವ ಹೆಸರು ಕೇವಲ ಅಲೆ ಅಲ್ಲ; ಅದೊಂದು ಸುನಾಮಿ. ಕಾಂಗ್ರೆಸ್‌ನವರಿಗೆ ಅರ್ಥವಾಗಿಲ್ಲ. ಏಕೆಂದರೆ ಆ ಪಕ್ಷದವರು ಭ್ರಮೆಯಲ್ಲಿದ್ದಾರೆ' ಎಂದರು.

ಆಂಧ್ರ: 5 ಸಾವಿರ ಹೆಕ್ಟೇರ್ ಬೆಳೆಹಾನಿ

ಅಮರಾವತಿ (ಪಿಟಿಐ): ಆಂಧ್ರದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಮ್ಯಾಂಡಸ್ ಚಂಡಮಾರುತದಿಂದ ಸುಮಾರು 5,000ಕ್ಕೂ ಹೆಚ್ಚು ಹೆಕ್ಟೇರ್ ಬೆಳೆಹಾನಿ ಸಂಭವಿಸಿದೆ. ವೈಎಸ್‌ಆರ್ ಕಡಪಾ ಜಿಲ್ಲೆಯಲ್ಲಿ ಗೋಡೆ ಕುಸಿದು ಪದ್ಮಾವತಿ ಎಂಬುವರು ಮೃತಪಟ್ಟಿದ್ದಾರೆ. ಮಳೆಯಿಂದ ಚಿಕ್ಕ ನದಿಗಳಲ್ಲಿ ದಿಢೀರ್ ಪ್ರವಾಹ ಉಂಟಾಗುವ ಸಾಧ್ಯತೆಯಿದ್ದು, ನೆಲ್ಲೂರು ಮತ್ತು ತಿರುಪತಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ. ಸಾವಿರಕ್ಕೂ ಹೆಚ್ಚು ಜನರನ್ನು ಮುಂಜಾಗ್ರತಾ ಕ್ರಮವಾಗಿ ಪರಿಹಾರ ಶಿಬಿರಗಳಿಗೆ ಕಳುಹಿಸಲಾಗಿದೆ.

ಸೋಮವಾರ ತುಂತುರುನಿಂದ ಸಾಧಾರಣ ಪ್ರಮಾಣದ ಮಳೆಯಾಗುವ ಸೂಚನೆ ನೀಡಲಾಗಿದೆ. 170 ಮನೆಗಳಿಗೆ ಹಾನಿಯಾಗಿದೆ. ಮುಂಜಾಗ್ರತಾ ಕ್ರಮವಾಗಿ ನಾಲ್ಕು ಜಿಲ್ಲೆಗಳಲ್ಲಿ 140 ಎಸ್‌ಡಿಆರ್‌ಎಫ್ ಹಾಗೂ 95 ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ. ಆರು ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಜನರಿಗೆ ಚಂಡಮಾರುತ ಎಚ್ಚರಿಕೆ ಸಂದೇಶ ಕಳುಹಿಸಲಾಗಿದೆ.

ಒಳ ಮೀಸಲಾತಿಗೆ ಪಟ್ಟು: ಹಲವರು ವಶಕ್ಕೆ

ಒಂದನೇ ಪುಟದಿಂದ

ಮಳೆ ನಡುವೆಯೂ ನೀಲಿ ಬಾವುಟ ಹಿಡಿದು ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು.

'ಮುಖ್ಯಮಂತ್ರಿ ಸ್ಥಳಕ್ಕೆ ಬಂದು ಭರವಸೆ ನೀಡಿದರೂ, ಅದಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಡಿ.28ರ ತನಕ ಗಡುವು ನೀಡಲಾಗುವುದು. ಬೆಳಗಾವಿ ಅಧಿವೇಶನ ಮುಗಿಯುವಷ್ಟರಲ್ಲಿ ತೀರ್ಮಾನ ಕೈಗೊಳ್ಳಬೇಕು' ಎಂದು ಗಡುವು ವಿಧಿಸಿದರು.

'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರೂ ಅಧಿವೇಶನದಲ್ಲಿ ಒಳ ಮೀಸಲಾತಿ ವಿಚಾರದಲ್ಲಿ ಬದ್ಧತೆ ಪ್ರದರ್ಶಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಈ ಪಕ್ಷಗಳಿಗೆ ತಕ್ಕ ಪಾಠ ಕಲಿಸಲಾಗುವುದು' ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ತಂದು ದಲಿತರ ಭೂಮಿ ರಕ್ಷಣೆ ಮಾಡಬೇಕು. ಸಫಾಯಿ ಕರ್ಮಚಾರಿಗಳನ್ನು ಮುಖ್ಯವಾಹಿನಿಗೆ ತರಲು ಐಪಿಡಿ ಸಾಲಪ್ಪ ವರದಿಯನ್ನು ಅನುಷ್ಠಾನಗೊಳಿಸಬೇಕು ಎಂದೂ ಒತ್ತಾಯಿಸಿದರು.

ಒಳ ಮೀಸಲಾತಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದ ಬಳಿ ಹೋರಾಟಗಾರರು ಭಾನುವಾರ ಪ್ರತಿಭಟನೆ ನಡೆಸಿದರು
–ಪ್ರಜಾವಾಣಿ ಚಿತ್ರ

ಅಧಿಕಾರಕ್ಕೆ ಬಂದರೆ ಕೇಂದ್ರಕ್ಕೆ ಶಿಫಾರಸು: 'ಒಳ ಮೀಸಲಾತಿಗೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವವರನ್ನು ಬಂಧಿಸಿರುವುದು ಖಂಡನೀಯ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ಪಡೆದು ಸದಾಶಿವ ಆಯೋಗ ವರದಿ ಜಾರಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸೋಮಣ್ಣಗೆ 'ಗೋ ಬ್ಯಾಕ್' ಘೋಷಣೆ

ಮನವಿ ಪತ್ರ ಸ್ವೀಕರಿಸಲು ಬಂದಿದ್ದ ವಸತಿ ಸಚಿವ ವಿ. ಸೋಮಣ್ಣ ವಿರುದ್ಧ ಪ್ರತಿಭಟನಕಾರರು, 'ಗೋ ಬ್ಯಾಕ್' ಘೋಷಣೆ ಕೂಗಿದರು. ಸೋಮಣ್ಣ ಬರುತ್ತಿದ್ದಂತೆ ಪ್ರತಿಭಟನಕಾರರು ಒಮ್ಮೆಲೆ ಘೋಷಣೆ ಕೂಗಿದರು.

'ಸೋಮಣ್ಣ ಅವರನ್ನು ವೇದಿಕೆಯಿಂದ ಕೆಳಗಿಳಿಸಬೇಕು. ಮುಖ್ಯಮಂತ್ರಿಯೇ ಬಂದು ಮನವಿ ಸ್ವೀಕರಿಸಬೇಕು' ಎಂದು ಪಟ್ಟುಹಿಡಿದರು. ಬೇಸರಗೊಂಡ ವಿ. ಸೋಮಣ್ಣ ವೇದಿಕೆಯಿಂದ ಕೆಳಗಿಳಿದು ಕೆಲಕಾಲ ನಿಂತಿದ್ದರು. ಬಳಿಕ ವಾಪಸ್ ಹೋದರು.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಪ್ರತಿಭಟನನಿರತರನ್ನು ಮಾತುಕತೆಗೆ ಆಹ್ವಾನಿಸುವುದನ್ನು ಬಿಟ್ಟು ಪೊಲೀಸರ ಮೂಲಕ ಹಣಿಯಲು ನಡೆಸಿದ ಸರ್ಕಾರದ ಪ್ರಯತ್ನ ಪ್ರಜಾಪ್ರಭುತ್ವ ವಿರೋಧಿ ನಡೆ' ಎಂದಿದ್ದಾರೆ.

ಹಿಂದೂ ಯುವತಿಯರ ಜೊತೆಗಿದ್ದ ಮುಸ್ಲಿಂ ಯುವಕರಿಗೆ ತರಾಟೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಿಂದೂ ಯುವತಿಯರ ಜೊತೆಗಿದ್ದ ಇಬ್ಬರು ಮುಸ್ಲಿಂ ಯುವಕರನ್ನು ಸಂಘ ಪರಿವಾರದ ಸಂಘಟನೆಯೊಂದರ ಕಾರ್ಯಕರ್ತರು ಎನ್ನಲಾದ ಯುವಕರ ಗುಂಪು ತರಾಟೆಗೆ ತೆಗೆದುಕೊಂಡ ಘಟನೆ ನಗರದ ಉರ್ವ ಪೊಲೀಸ್ ಠಾಣೆ ವ್ಯಾಪ್ತಿಯ ಕೊಟ್ಟಾರದಲ್ಲಿ ಶನಿವಾರ ರಾತ್ರಿ ನಡೆದಿದೆ.

ನಗರದಲ್ಲಿ ಸಂಜೆ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಮುಸ್ಲಿಂ ಯುವಕರಿಬ್ಬರ ಜೊತೆ ಕೊಟ್ಟಾರ ಬಳಿ ನಡೆದುಕೊಂಡು ಹೋಗುತ್ತಿದ್ದರು. ಅವರನ್ನು ತಡೆದು ನಿಲ್ಲಿಸಿದ್ದ ಯುವಕರ ಗುಂಪು, 'ನೀವು ಇಷ್ಟು ರಾತ್ರಿಯಲ್ಲಿ ಒಟ್ಟಿಗೆ ತಿರುಗಾಡುವುದೇಕೆ?' ಎಂದು ತರಾಟೆಗೆ ತೆಗೆದುಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

'ನಾವು ಊಟಕ್ಕೆ ಹೋಟೆಲ್‌ಗಾಗಿ ಹುಡುಕುತ್ತಿದ್ದೇವೆ' ಎಂದು ಯುವತಿ ಯರು ತಿಳಿಸಿದರೂ ಅವರನ್ನು ಬಿಟ್ಟಿಲ್ಲ.

'ಇದು ಊಟ ಸಿಗುವ ಸಮಯವೇ?' ಎಂದು ಗುಂಪಿನಲ್ಲಿದ್ದ ಕೆಲ ಯುವಕರು ಪ್ರಶ್ನೆ ಮಾಡಿದ್ದಾರೆ. ಬಳಿಕ ಆ ಗುಂಪು ಮುಸ್ಲಿಂ ಯುವಕರನ್ನು ಸುತ್ತುವರಿದು ಅವರ ಪೂರ್ವಾಪರಗಳನ್ನು ವಿಚಾರಿಸಿದೆ. ಅಷ್ಟರಲ್ಲಿ ಮಾಹಿತಿ ಪಡೆದು ಸ್ಥಳಕ್ಕೆ ಬಂದ ಉರ್ವ ಠಾಣೆಯ ಪೊಲೀಸರು ಯುವತಿಯರಿಬ್ಬರನ್ನು ಹಾಗೂ ಅವರ ಜೊತೆ ಇದ್ದ ಮುಸ್ಲಿಂ ಯುವಕರನ್ನು ಠಾಣೆಗೆ ಕರೆದೊಯ್ದರು.

'ಯುವತಿಯರ ಜೊತೆಗಿದ್ದ ಇಬ್ಬರು ಮುಸ್ಲಿಂ ಯುವಕರನ್ನು ಕೆಲವರು ತಡೆದು ವಿಚಾರಣೆ ನಡೆಸಿದ್ದು ನಿಜ. ಆದರೆ, ಯಾರ ಮೇಲೂ ಹಲ್ಲೆ ನಡೆಸಿಲ್ಲ. ಯುವತಿಯರನ್ನು ಹಾಗೂ ಅವರ ಜೊತೆಗಿದ್ದ ಯುವಕರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದೇವೆ. ಯುವತಿಯರು ಸಂಜೆ ಕಾಲೇಜಿಗೆ ಹೋಗುವವರು ಹಾಗೂ ಯುವಕರು ನಗರದ ಬಂದರು ದಕ್ಕೆಯಲ್ಲಿ ಮೀನಿನ ವ್ಯಾಪಾರ ನಡೆಸುತ್ತಿದ್ದರು. ಪೋಷಕರನ್ನು ಕರೆಸಿ ಅವರ ಜೊತೆ ಮನೆಗೆ ಕಳುಹಿಸಿಕೊಟ್ಟಿದ್ದೇವೆ' ಎಂದು ಉರ್ವ ಠಾಣೆ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

16 ದಿನ, 4 ಕೃತ್ಯ

ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಮತೀಯ ಗೂಂಡಾಗಿರಿಗೆ ಸಂಬಂಧಿಸಿ, 16 ದಿನಗಳ ಈಚೆಗೆ ನಡೆದ ನಾಲ್ಕು ಕೃತ್ಯಗಳು ನಡೆದಿವೆ.

ನಂತೂರಿನಲ್ಲಿ ಮುಸ್ಲಿಂ ಯುವಕನ ಮೇಲೆ ಬಜರಂಗ ದಳದ ಕಾರ್ಯಕರ್ತರು ನ.24ರಂದು ಹಲ್ಲೆ ನಡೆಸಿದ್ದರು. ಕಂಕನಾಡಿಯ ಚಿನ್ನಾಭರಣ ಮಳಿಗೆಯ ಉದ್ಯೋಗಿ ಮುಸ್ಲಿಂ ಯುವಕ, ತನ್ನ ಸಹೋದ್ಯೋಗಿ ಯುವತಿಯ ಜೊತೆ ಸಲುಗೆಯಿಂದ ಇದ್ದಾನೆ ಎಂದು ಆರೋಪಿಸಿ ಬಜರಂಗದಳದ ಕಾರ್ಯಕರ್ತರು ಡಿ.6ರಂದು ಹಲ್ಲೆ ನಡೆಸಿದ್ದರು.

ಮತಾಂತರ ಆರೋಪ; ಪಾದ್ರಿ, ಪತ್ನಿ ಬಂಧನ

ಕಾರಟಗಿ (ಕೊಪ್ಪಳ ಜಿಲ್ಲೆ): ಆಮಿಷ ವೊಡ್ಡಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಕ್ಕೆ ಯತ್ನಿಸಿದ ಆರೋಪದ ಮೇಲೆ ಪಟ್ಟಣದ ರಾಮನಗರದ ಗ್ರೇಸ್ ಪ್ರಾರ್ಥನಾ ಮಂದಿರದ ಪಾದ್ರಿ ಸತ್ಯನಾರಾಯಣ, ಅವರ ಪತ್ನಿ ಶಿವಮ್ಮ ಅವರನ್ನು ಭಾನುವಾರ ಬಂಧಿಸಲಾಗಿದೆ.

ಆಮಿಷ ತೋರಿಸಿ ಮತಾಂತರಕ್ಕೆ ಒತ್ತಾಯಿಸುತ್ತಿದ್ದರು ಎಂಬ ಆರೋಪದ ಮೇಲೆ ಶುಕ್ರವಾರ ಈ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿತ್ತು. ಪಾದ್ರಿ,ಅವರ ಪತ್ನಿಯನ್ನು ಬಂಧಿಸಲಾಗಿದೆ ಎಂದು ಇನ್‌ಸ್ಪೆಕ್ಟರ್ ಸಿದ್ರಾಮಯ್ಯ. ತಿಳಿಸಿದರು.

ಅಲೆಮಾರಿ ಬುಡ್ಗ ಜಂಗಮ ಸಮಾಜದ ಶಂಕರ ಎಂಬುವರು ಈ ಸಂಬಂಧ ದೂರು ಸಲ್ಲಿಸಿದ್ದರು. 'ಕುಟುಂಬದ ಸದಸ್ಯರಿಗೆ ಹಣದ ಆಸೆ ತೋರಿಸಿ ಮತಾಂತರ ಮಾಡಲಾಗಿದೆ. ಪಾದ್ರಿ ಸತ್ಯನಾರಾಯಣ ಬಲವಂತವಾಗಿ ನನಗೆ ದೀಕ್ಷೆ, ಸ್ನಾನದ ಹೆಸರಿನಲ್ಲಿ ನೀರಿನಲ್ಲಿ ಮುಳುಗಿಸಿ ಇಂದಿನಿಂದ ನೀವು, ನಿಮ್ಮ ಕುಟುಂಬದ ಸದಸ್ಯರು ಕ್ರೈಸ್ತ ಧರ್ಮಕ್ಕೆ ಸೇರಿದವರು ಎಂದು ಬಲವಂತವಾಗ ಮತಾಂತರ ಮಾಡಿಸಿದರು. ಹಿಂದೂ ದೇವರನ್ನು ಪೂಜೆ ಮಾಡುವಂತಿಲ್ಲ ಎಂದು ದೇವರ ಫೋಟೊಗಳನ್ನು ಎಸೆದರು. ಪೂಜೆ ಮಾಡಿದರೆ ಕೊಲೆ, ಅತ್ಯಾಚಾರದ ಬೆದರಿಕೆ ಹಾಕಿದ ಪಾದ್ರಿಯ ಕಾರ್ಯದಿಂದ ತೊಂದರೆ ಅನುಭವಿಸುತ್ತಿದ್ದೇವೆ. ಮನೆಯ ಸದಸ್ಯರನ್ನು ಚರ್ಚ್‌ನ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದರು.

ನಿಗದಿತ ಖಾತೆಗಳಿಗೆ ತಕ್ಷಣ ಹಣ ಜಮೆ ಮಾಡುವಂತೆ ಎಸಿಎಸ್ ಸೂಚನೆ

ರಾಷ್ಟ್ರಧ್ವಜಗಳ ಬಾಕಿ ಪಾವತಿಗೆ ಡಿ.ಸಿ.ಗಳಿಗೆ ಪತ್ರ

● ಹೊನಕೆರೆ ನಂಜುಂಡೇಗೌಡ

ಬಳ್ಳಾರಿ: ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನಡೆದ ಮೂರು ದಿನಗಳ 'ಹರ್ ಘರ್ ತಿರಂಗಾ ಅಭಿಯಾನ'ಕ್ಕೆ ಕೇಂದ್ರ ಸರ್ಕಾರ ಪೂರೈಸಿದ್ದ ರಾಷ್ಟ್ರಧ್ವಜಗಳ ₹ 4,39,92,843 ಬಾಕಿಯನ್ನು ತಕ್ಷಣ ಪಾವತಿಸುವಂತೆ ತಾಕೀತು ಮಾಡಿ ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಎರಡನೇ ಪತ್ರ ಬರೆದಿದೆ.

ಆಗಸ್ಟ್ 13ರಿಂದ 15ರವರೆಗೆ ಮನೆಗಳು, ಕಚೇರಿಗಳು ಹಾಗೂ ವಾಹನಗಳ ಮೇಲೆ ರಾಷ್ಟ್ರ ಧ್ವಜ ಹಾರಾಡಿದ್ದವು. 'ಏಳು ದಶಕಗಳಿಂದ ಬಳಸುತ್ತಿದ್ದ ಖಾದಿ ಬಟ್ಟೆಯ ತ್ರಿವರ್ಣ ಧ್ವಜಗಳಿಗೆ ಇತಿಶ್ರೀ ಹೇಳಿ, ತೆಳು ಬಟ್ಟೆಯಿಂದ ಮಾಡಿದ ಧ್ವಜಗಳನ್ನು ಪೂರೈಸಲಾಗಿದೆ' ಎಂಬ ಟೀಕೆಗಳು ಕೇಳಿ ಬಂದಿದ್ದವು. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಚರ್ಚೆಯಾಗಿತ್ತು.

ಕೇಂದ್ರ ಸರ್ಕಾರವು ರಾಜ್ಯಕ್ಕೆ 50,22,000 ತ್ರಿವರ್ಣ ಧ್ವಜಗಳನ್ನು ಪೂರೈಸಿತ್ತು. ಪ್ರತಿ ಧ್ವಜಕ್ಕೆ ₹ 22 ನಿಗದಿಪಡಿಸಿತ್ತು. ಅದರಂತೆ, ರಾಜ್ಯ ಸರ್ಕಾರ ₹ 11,048,4000 ಪಾವತಿಸಬೇಕಿತ್ತು. 'ಹರ್ ಘರ್ ತಿರಂಗಾ ಅಭಿಯಾನ'ದ ರಾಜ್ಯದ ನೋಡಲ್ ಅಧಿಕಾರಿಯೂ ಆಗಿದ್ದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಸೆಪ್ಟೆಂಬರ್ 28ರಂದು ಜಿಲ್ಲಾಧಿಕಾರಿಗಳಿಗೆ ಮೊದಲ ಪತ್ರ ಬರೆದ ಬಳಿಕ ₹ 6,64,96,032 ಪಾವತಿಯಾಯಿತು. ಮಿಕ್ಕ ಹಣವನ್ನು ತಕ್ಷಣ ಪಾವತಿಸುವಂತೆ ನವೆಂಬರ್ ಕೊನೆ ವಾರ ಜಿಲ್ಲಾಧಿಕಾರಿಗಳಿಗೆ ಎರಡನೇ ಪತ್ರ ರವಾನೆಯಾಗಿದೆ.

'ಹರ್ ಘರ್ ತಿರಂಗಾ ಅಭಿಯಾನಕ್ಕೆ ಬೇಕಾಗುವ ಧ್ವಜಗಳನ್ನು ಪೂರೈಸುವಂತೆ ಕೇಂದ್ರಕ್ಕೆ ಕೇಳಲಾಗಿತ್ತು. ಇದರ ವೆಚ್ಚವನ್ನು ಅನಂತರ ಭರಿಸುವುದಾಗಿ ತಿಳಿಸಲಾಗಿತ್ತು. ರಾಜ್ಯದ ಮನವಿ ಮೇಲೆ ಪೂರೈಸಿದ ತ್ರಿವರ್ಣ ಧ್ವಜಗಳಿಗೆ ಇದುವರೆಗೆ ಹಣ ಪಾವತಿಸದಿರುವುದು ಕೇಂದ್ರದ ಸಹಕಾರಕ್ಕೆ ಅಗೌರವ ತೋರಿದಂತೆ' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊದಲ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಅನಂತರ ವಿವಿಧ ಜಿಲ್ಲೆಗಳಿಂದ ರಾಜ್ಯ ಸರ್ಕಾರ ಸೂಚಿಸಿದ ಖಾತೆಗಳಿಗೆ ₹ 6,64,96,032 ಪಾವತಿಯಾಗಿದೆ. ಕಲಬುರಗಿ ಜಿಲ್ಲೆ ಅತ್ಯಧಿಕ ಅಂದರೆ, 2,26,000 ತ್ರಿವರ್ಣ ಧ್ವಜಗಳನ್ನು ಖರೀದಿಸಿದ್ದು, ₹ 49,72,000 ಜಮೆ ಮಾಡಬೇಕಿದೆ. ಇದರಲ್ಲಿ ₹ 43,837,387 ಪಾವತಿಸಿದ್ದು, ₹ 5,84,613 ಮಾತ್ರ ಬಾಕಿ ಉಳಿಸಿದೆ. ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ತ್ರಿವರ್ಣ ಧ್ವಜಗಳನ್ನು ಪಡೆದಿರುವ ಎರಡನೇ ಜಿಲ್ಲೆ ಆಗಿದ್ದು, ₹ 1,55,986 ಮಾತ್ರ ಬಾಕಿ ಕೊಡಬೇಕಿದೆ.

48,000 ಧ್ವಜಗಳನ್ನು ಖರೀದಿಸಿರುವ ಚಾಮರಾಜನಗರ ಒಂದು ನಯಾ ಪೈಸೆ ಕಟ್ಟಿಲ್ಲ. 78 ಸಾವಿರ ಧ್ವಜಗಳನ್ನು ತರಿಸಿಕೊಂಡಿದ್ದ ಚಿಕ್ಕಮಗಳೂರು ಜಿಲ್ಲೆ ಸಂಪೂರ್ಣವಾಗಿ ಹಣ ಪಾವತಿಸಿದ ಏಕೈಕ ಜಿಲ್ಲೆ ಎನಿಸಿದೆ. 15 ಲಕ್ಷ ಧ್ವಜಗಳನ್ನು ಖರೀದಿಸಿದ್ದ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇನ್ನೂ ₹ 1,69,73,671 ಕೊಡಬೇಕಾಗಿದೆ. ಪೊಲೀಸ್ ಇಲಾಖೆ ಮತ್ತು ಕೆಪಿಟಿಸಿಎಲ್ ಕ್ರಮವಾಗಿ 1,00,000 ಮತ್ತು 66,000 ತ್ರಿವರ್ಣ ಧ್ವಜ ತರಿಸಿಕೊಂಡಿದ್ದು, ಸಂಪೂರ್ಣ ಹಣ ಕಟ್ಟಬೇಕಿದೆ. ಬಳ್ಳಾರಿ ಜಿಲ್ಲೆ 1,25,000 ಧ್ವಜಗಳನ್ನು ಖರೀದಿಸಿದ್ದು, ₹ 7,45,701 ಕೊಡಬೇಕಿದೆ.

ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುವ ಪತ್ರದಲ್ಲಿ ಈ ವಿವರಗಳಿದ್ದು, ಕೂಡಲೇ ಹಣ ಕಳುಹಿಸುವಂತೆ ಕೇಂದ್ರ ಸರ್ಕಾರ ಕೇಳಿರುವುದಾಗಿ ತಿಳಿಸಲಾಗಿದೆ.

ಪ್ರಜಾವಾಣಿ ವಿಶೇಷ

'ಖಾದಿ ಕೈಬಿಟ್ಟದ್ದು ಸರಿಯಲ್ಲ'

'ಕೇಂದ್ರ ಸರ್ಕಾರವು ಸ್ವಾತಂತ್ರ್ಯ ಸುವರ್ಣ ಮಹೋತ್ಸವಕ್ಕೆ ಖಾದಿ ತ್ರಿವರ್ಣ ಧ್ವಜಗಳನ್ನು ಕೈಬಿಟ್ಟು, ಫಾಲಿಫೈಬರ್ ರೀತಿಯ ಬಟ್ಟೆಯಿಂದ ಮಾಡಿದ ಧ್ವಜಗಳನ್ನು ಪೂರೈಸಿದ್ದು ಸಮರ್ಥನೀಯ ಕ್ರಮವಲ್ಲ' ಎಂದು ಧಾರವಾಡ ತಾಲ್ಲೂಕು ಸೇವಾ ಸಂಘದ ಕಾರ್ಯದರ್ಶಿ ಎನ್.ಕೆ. ಕಾಗಿನೆಲಿ ಅಭಿಪ್ರಾಯಪಟ್ಟರು.

'ಕಳೆದ ವರ್ಷ ತಯಾರಿಸಿದ ಧ್ವಜಗಳೇ ಮಾರಾಟವಾಗದೆ ಉಳಿದಿದ್ದು, ಈ ವರ್ಷ ಹೊಸದಾಗಿ ಧ್ವಜಗಳನ್ನು ತಯಾರಿಸಿಲ್ಲ.ಖಾದಿ ಕ್ಷೇತ್ರದಲ್ಲಿ ಸಾವಿರಾರು ಮಂದಿ ದುಡಿಯುತ್ತಿದ್ದಾರೆ. ಸರ್ಕಾರದ ಇಂಥ ನೀತಿಗಳಿಂದ ಖಾದಿ ಕಾರ್ಯಕರ್ತರ ಉದ್ಯೋಗಕ್ಕೆ ಕುತ್ತು ಬರಲಿದೆ. ಈಗಾಗಲೇ ಕೊಪ್ಪಳ, ಕುಕನೂರು, ಯಲಬುರ್ಗಾ ಹಾಗೂ ರಾಯಚೂರು ಖಾದಿ ಕೇಂದ್ರಗಳು ಬಂದ್ ಆಗಿವೆ' ಎಂದು ಸ್ಪಷ್ಟಪಡಿಸಿದರು.

ತೆವಳುತ್ತಿವೆ ಹೆದ್ದಾರಿಗಳ ಕಾಮಗಾರಿ

ಒಂದನೇ ಪುಟದಿಂದ

2017ರ ಮಾರ್ಚ್‌ನಲ್ಲಿ ಆರಂಭಗೊಂಡ 45 ಕಿ.ಮೀ. ಉದ್ದದ ಕಾಮಗಾರಿ 2019ರಲ್ಲಿ ಪೂರ್ಣಗೊಳ್ಳಬೇಕಿತ್ತು. ಇಲ್ಲಿಯವರೆಗೆ ಶೇ 50ರಷ್ಟು ಕಾಮಗಾರಿಯಷ್ಟೇ ಮುಗಿದಿದೆ.

ಕಾಮಗಾರಿಯ ಗುತ್ತಿಗೆ ವಹಿಸಿಕೊಂಡಿದ್ದ ಐಸೋಲೆಕ್ಸ್ ಕಂಪನಿ ದಿವಾಳಿಯಾಯಿತು. ಬಳಿಕ ಬೇರೆ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಯಿತು. ಗುತ್ತಿಗೆದಾರರಿಗೆ ಈವರೆಗೆ ₹299 ಕೋಟಿ ಮೊತ್ತ ಬಿಡುಗಡೆ ಮಾಡಲಾಗಿದ್ದು, ಆ ಮೊತ್ತವನ್ನು ಬಳಕೆ ಮಾಡಲಾಗಿದೆ. ಮಳೆ, ಕೋವಿಡ್ ಮತ್ತಿತರರ ಕಾರಣಗಳಿಂದಾಗಿ ಹೆದ್ದಾರಿಯ ಕಾಮಗಾರಿ ವಿಳಂಬವಾಗಿದೆ. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯು ಕಾಮಗಾರಿಯ ಮೇಲ್ವಿಚಾರಣೆ ಮಾಡುತ್ತಿದೆ.

ಹೊಸಪೇಟೆ–ಬಳ್ಳಾರಿ–ಕರ್ನಾಟಕ ಗಡಿ/ಬಳ್ಳಾರಿ ಗಡಿ (ಎನ್‌ಎಚ್ 63) ನಡುವಿನ 95 ಕಿ.ಮೀ.ಯ ಕಾಮಗಾರಿ ಶುರುವಾಗಿದ್ದು 2017ರ ಮಾರ್ಚ್‌ನಲ್ಲಿ. ಕಾಮಗಾರಿ ಪೂರ್ಣಕ್ಕೆ ಎರಡು ವರ್ಷಗಳ ಗಡುವು ವಿಧಿಸಲಾಗಿತ್ತು. ₹870 ಕೋಟಿ ಮೊತ್ತದ ಕಾಮಗಾರಿಗೆ ಈವರೆಗೆ ₹414 ಕೋಟಿ ವೆಚ್ಚ ಮಾಡಲಾಗಿದೆ. ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ.

ಬೆಂಗಳೂರಿನಿಂದ ತಮಿಳುನಾಡಿನ ದಿಂಡಿಗಲ್‌ಗೆ ಸಂಪರ್ಕ ಕಲ್ಪಿಸುವ 170 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು (ಎನ್‌ಎಚ್ 209) ಚತುಷ್ಪಥವನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಚಾಲನೆ ನೀಡಿದ್ದು 2017ರ ಆಗಸ್ಟ್‌ನಲ್ಲಿ. ಈ ಕೆಲಸ 2019ರ ಆಗಸ್ಟ್‌ನಲ್ಲಿ ಪೂರ್ಣಗೊಳ್ಳಬೇಕಿತ್ತು. ಆರಂಭದಲ್ಲಿ ಚುರುಕಿನಿಂದ ಕಾಮಗಾರಿ ಕೈಗೊಂಡ ಗುತ್ತಿಗೆದಾರ ಸಂಸ್ಥೆ, ನಂತರ ಆರ್ಥಿಕ ಸಂಕಷ್ಟದಿಂದ ಕೆಲಸ ಸ್ಥಗಿತಗೊಳಿಸಿತ್ತು. ಹದಗೆಟ್ಟ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿ ಹಲವು ಮಂದಿ ಗಾಯಗೊಂಡಿದ್ದರು. ಬಳಿಕ ರಸ್ತೆ ನಿರ್ವಹಣೆ ಕಾಮಗಾರಿ ನಡೆಸಲಾಗಿತ್ತು. ಮತ್ತೆ ವಿಸ್ತರಣೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಹೆದ್ದಾರಿಯಲ್ಲಿ ಭೂಸ್ವಾಧೀನಕ್ಕೆ ₹970 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಇಲ್ಲಿಯವರೆಗೆ ₹448 ಕೋಟಿ ಬಳಸಲಾಗಿದೆ.

ಬೆಳಗಾವಿ–ಖಾನಾಪುರ ನಡುವಿನ 30 ಕಿ.ಮೀ. ಹೆದ್ದಾರಿ ಕಾಮಗಾರಿಗೆ 2019ರ ಮಾರ್ಚ್‌ನಲ್ಲಿ ಚಾಲನೆ ನೀಡಲಾಗಿತ್ತು. ಎರಡೂವರೆ ವರ್ಷಗಳಲ್ಲಿ ಕೆಲಸ ಮುಗಿಯಬೇಕಿತ್ತು. ಆದರೆ, ₹856 ಕೋಟಿ ವೆಚ್ಚದ ಈ ಕಾಮಗಾರಿಗೆ ಇಲ್ಲಿಯವರೆಗೆ ಖರ್ಚು ಮಾಡಿರುವುದು ₹7.16 ಕೋಟಿ ಮಾತ್ರ.

ಕ್ಯಾಂಪಸ್ ಸಂದರ್ಶನ

ಉದ್ಯೋಗ ಗಳಿಕೆಯ ಸುವರ್ಣಾವಕಾಶ

ಇದು 'ಕ್ಯಾಂಪಸ್ ಸಂದರ್ಶನ'ದ ಸಮಯ. ವಿವಿಧ ಕಂಪನಿಗಳು ಉದ್ಯೋಗಕ್ಕೆ ಅಗತ್ಯವಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಕಾಲೇಜಿನ ಅಂಗಳಕ್ಕೇ ಬರುತ್ತವೆ. ಈ ಸಂದರ್ಶನಕ್ಕೆ ವಿದ್ಯಾರ್ಥಿಗಳು ಹೇಗೆ ಸಿದ್ಧರಾಗಬೇಕು? ಇಲ್ಲಿದೆ ಮಾಹಿತಿ.

ಗುರುರಾಜ್ ಎಸ್. ದಾವಣಗೆರೆ

'ಕ್ಯಾಂಪಸ್'ನಲ್ಲಿ ಸೆಲೆಕ್ಷನ್ ಆಗಿ, ಕೆಲಸ ಸಿಕ್ಕಿಬಿಟ್ಟರೆ.. ಅಲ್ಲಿಗೆ ಲೈಫ್ ಸೆಟ್ಲಾದಂತೆ...' – ವೃತ್ತಿಪರ ಶಿಕ್ಷಣದ ಕಲಿಕೆಯ ಅಂತಿಮ ವರ್ಷದಲ್ಲಿರುವ ಬಹುತೇಕ ವಿದ್ಯಾರ್ಥಿಗಳ ಮಾತು ಇದು. ಕೋರ್ಸ್ ಮುಗಿಸುತ್ತಿರುವ ವಿದ್ಯಾರ್ಥಿಗಳ ದೃಷ್ಟಿಯೆಲ್ಲ ಕ್ಯಾಂಪಸ್ ಸೆಲೆಕ್ಷನ್‌ನತ್ತಲೇ ನೆಟ್ಟಿರುತ್ತದೆ.

ವಿವಿಧ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವಂತಹ ಕಂಪನಿಗಳು, ಕೌಶಲಯುಕ್ತ ಉದ್ಯೋಗಿಗಳಿಗಾಗಿ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಹುಡುಕಾಟ ನಡೆಸುತ್ತವೆ. ಇಂಥ ಕಂಪನಿಗಳು ಕಲಿಕಾ ತಾಣಕ್ಕೆ ಹೋಗಿ ಉದ್ಯೋಗಿಗಳನ್ನು ಆಯ್ಕೆ ಮಾಡುವ ವಿಧಾನವೇ 'ಕ್ಯಾಂಪಸ್ ಇಂಟರ್‌ವ್ಯೂ' ಅರ್ಥಾತ್ ಕ್ಯಾಂಪಸ್ ಸಂದರ್ಶನ. ಇದನ್ನು 'ಕ್ಯಾಂಪಸ್ ಪ್ಲೇಸ್‌ಮೆಂಟ್' ಎಂದೂ ಕರೆಯುತ್ತಾರೆ.

ಪದವಿಗಳ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳನ್ನು ಕಂಪನಿಗಳು ಸಂದರ್ಶಿಸುತ್ತವೆ. ಮಾತ್ರವಲ್ಲ, ಕೌಶಲ ಆಧಾರಿತ ಪರೀಕ್ಷೆ ನಡೆಸಿ ತಮ್ಮ ಕಂಪನಿಯ ಕೆಲಸದ ಆಫರ್ ನೀಡುತ್ತವೆ. ಉದ್ಯೋಗಕ್ಕೆ ಆಯ್ಕೆಯಾಗುವ ವಿದ್ಯಾರ್ಥಿಗಳು ಕೋರ್ಸ್ ಮುಗಿದ ಕೂಡಲೇ ಕಂಪನಿಯ ಕೆಲಸಕ್ಕೆ ಹಾಜರಾಗಿ ಅಲ್ಲಿಯೇ ಮುಂದುವರಿಯುತ್ತಾ, ಕಂಪನಿಯ ನೌಕರರಾಗಿ ಬದಲಾಗುತ್ತಾರೆ. ಸಂಬಳದ ರೂಪದಲ್ಲಿ ಹಣ ಸಿಗುತ್ತದೆ. ವೃತಿ ಜೀವನದ ಒಂದೊಂದೇ ಹಂತ ಮೇಲೇರುತ್ತಾರೆ.

ಕ್ಯಾಂಪಸ್‌ಗೆ ಬರುವ ಕಂಪನಿ, ತಾನು ಯಾವೆಲ್ಲ ಉತ್ಪನ್ನ ತಯಾರಿಸುತ್ತದೆ? ಯಾವ ವಿಷಯ ಕಲಿತವರು ತನಗೆ ಬೇಕು? ಕೆಲಸ ಮಾಡುವ ವಿಧಾನ, ಅಲ್ಲಿನ ಉದ್ಯೋಗದ ಶೈಲಿ, ಮಾರುಕಟ್ಟೆಯಲ್ಲಿ ತನಗಿರುವ ಶೇರುಗಳು, ಒಟ್ಟು ಬಂಡವಾಳ ಇತ್ಯಾದಿ ವಿಷಯಗಳ ಕುರಿತು 'ಪ್ರಿ ಪ್ಲೇಸ್‌ಮೆಂಟ್ ಪ್ರೆಸೆಂಟೇಶನ್' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿರುತ್ತದೆ.

ಪೂರ್ವಭಾವಿ ಸ್ಕ್ರೀನಿಂಗ್ ಪರೀಕ್ಷೆ

ತನ್ನ ಕೆಲಸಗಳಿಗೆ ಬೇಕಾಗುವ ವಿದ್ಯಾರ್ಥಿಗಳ ವಿದ್ಯಾರ್ಹತೆ, ಪಡೆದಿರಬೇಕಾದ ಅಂಕಗಳು, ಕಲಿತಿರಬೇಕಾದ ವಿಷಯ, ಪ್ರಾಥಮಿಕ ಪರಿಣತಿಯ ಕುರಿತು ತಮ್ಮದೇ ಮಾನದಂಡ ಬಳಸುವ ಕಂಪನಿಗಳು 'ಸ್ಕ್ರೀನಿಂಗ್' (ಪೂರ್ವ ಭಾವಿ ಆಯ್ಕೆ) ಮೂಲಕ ಅರ್ಹರನ್ನು ಗುರುತಿಸಿರುತ್ತವೆ. ಅವರಿಗೆ ಮುಂದಿನ ಹಂತದ ಚಟುವಟಿಕೆಗಳಿಗೆ ತಯಾರಾಗಿರುವಂತೆ ನಿರ್ದೇಶನ ನೀಡುತ್ತವೆ. ಪ್ರತಿ ಉದ್ಯಮ, ಸಂಸ್ಥೆ, ಕಂಪನಿಗಳಲ್ಲಿ ಹಲವು ಬಗೆಯ ಉದ್ಯೋಗಾವಕಾಶಗಳಿರುತ್ತವೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ, ಕಲಿತ ವಿಷಯ, ಗ್ರೇಡ್‌ಗಳು ಕಂಪನಿಯ ಬೇಡಿಕೆಗಳಿಗೆ ಹೊಂದುತ್ತವೆಯೇ ಎಂಬುದನ್ನರಿತು ಕ್ಯಾಂಪಸ್ ಸಂದರ್ಶನಕ್ಕೆ ತಯಾರಾಗಬೇಕು.

ಸಾಮರ್ಥ್ಯ ಪರೀಕ್ಷೆ (Aptitude Test)

ಕಂಪನಿಯ ಪ್ರಾಥಮಿಕ ಅಗತ್ಯಗಳಿಗೆ ತಕ್ಕಂತೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಸಾಮರ್ಥ್ಯ ಪರೀಕ್ಷೆ ನಡೆಯುತ್ತದೆ. ಇದು ಅಭ್ಯರ್ಥಿ ಬಯಸುವ ಕೆಲಸಕ್ಕೆ ಅನುಗುಣವಾದ ವಿಷಯಗಳನ್ನು ಆಧರಿಸಿರುತ್ತದೆ. ಮಾರ್ಕೆಟಿಂಗ್, ಕ್ವಾಲಿಟಿ ಕಂಟ್ರೋಲ್, ಟೆಸ್ಟಿಂಗ್, ಪ್ಲಾನಿಂಗ್... ಹೀಗೆ ವಿವಿಧ ಜವಾಬ್ದಾರಿಗೆ ಸರಿಯಾದ ಸಾಮರ್ಥ್ಯ ಪರೀಕ್ಷೆ ನಡೆಯುತ್ತದೆ.

ಪತ್ರಿಕೋದ್ಯಮ, ಮ್ಯಾನೇಜ್‌ಮೆಂಟ್, ಹೆಲ್ತ್‌ಕೇರ್, ಫಾರ್ಮಾಕಾಲಜಿ, ಮಾಹಿತಿ ತಂತ್ರಜ್ಞಾನ, ಹೋಟೆಲ್ ಉದ್ಯಮಗಳಿಗೆ ಅದರದೇ ಆದ ಆಪ್ಟಿಟ್ಯೂಡ್ ಟೆಸ್ಟ್‌ಗಳಿರುತ್ತವೆ.

ಕೋಡಿಂಗ್, ಗಣಿತ ಕೌಶಲ, ಸಮಸ್ಯೆ ಬಿಡಿಸುವ ಜ್ಞಾನ, ಸಂಹವನ ಕೌಶಲ ಪರೀಕ್ಷಿಸುವ 'ವ್ಹೀಬಾಕ್ಸ್ ಗ್ರ್ಯಾಜುಯೇಟ್ ಎಂಪ್ಲಾಯಬಲಿಟಿ ಟೆಸ್ಟ್' ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರಮಾಣಿತ ಆಪ್ಟಿಟ್ಯೂಡ್ ಟೆಸ್ಟ್ ಎನ್ನಿಸಿದೆ.

ಪ್ರೋಗ್ರಾಮರ್ ಆ್ಯಪ್ಟಿಟ್ಯೂಟ್ ಟೆಸ್ಟ್ , ಇ - ಲಿಟ್ಮಸ್, ಆ್ಯಮ್‌ಕ್ಯಾಟ್ ,ಕೊ ಕ್ಯೂಬ್ಸ್ ನಂತಹ ಅನೇಕ ಸಾಮರ್ಥ್ಯ ಪರೀಕ್ಷೆಗಳಿವೆ. ಇಲ್ಲಿ ಪಡೆದ ಅಂಕಗಳನ್ನು ಭಾರತದ ಸುಮಾರು 800 ಪ್ರಸಿದ್ಧ ಕಂಪನಿಗಳು ಪರಿಗಣಿಸುತ್ತವೆ.

ಗುಂಪು ಚರ್ಚೆ

ಬಹುತೇಕ ಸಂಸ್ಥೆಗಳು ಅಭ್ಯರ್ಥಿಯಲ್ಲಿ ನಾಯಕತ್ವ ಗುಣ, ನಿರ್ಧಾರ ತೆಗೆದುಕೊಳ್ಳುವ ಕ್ಷಮತೆ, ತಂಡದಲ್ಲೊಬ್ಬನಾಗಿ ದುಡಿಯುವ ಮನೋಭಾವ, ವಿಷಯ ಗ್ರಹಣ, ಸಾರ್ವಜನಿಕ ಮಾತುಗಾರಿಕೆ, ಆತ್ಮವಿಶ್ವಾಸದ ಮಟ್ಟ ಪರೀಕ್ಷಿಸಲು ವಿಷಯವೊಂದನ್ನು ನೀಡಿ ಗುಂಪು ಚರ್ಚೆ ಏರ್ಪಡಿಸುತ್ತವೆ. ಚರ್ಚೆಯ ವಿಷಯಗಳು ಸಮಕಾಲೀನ ಜಗತ್ತಿಗೆ ಸಂಬಂಧಿಸಿರುತ್ತವೆ ಅಥವಾ ಅವರ ಸಂಸ್ಥೆಗೆ ಸಂಬಂಧಿಸಿದ ನಿರ್ದಿಷ್ಟ ವಿಷಯವೂ ಆಗಿರುತ್ತದೆ. ಚರ್ಚೆ ಯಲ್ಲಿ ಅಭ್ಯರ್ಥಿಯ ಮಾತಿನ ಶೈಲಿ, ಭಾಷೆಯ ಮೇಲಿನ ಹಿಡಿತ, ಪದ ಭಂಡಾರ, ಧ್ವನಿಯ ಏರಿಳಿತ ಮತ್ತು ವಿಷಯ ಪ್ರಸ್ತುತ ಪಡಿಸುವ ಚಾಕಚಕ್ಯತೆಯನ್ನು ಇಲ್ಲಿ ಪ್ರಮುಖವಾಗಿ ಗಮನಿಸಲಾಗುತ್ತದೆ.

(ಲೇಖಕರು: ಪ್ರಾಚಾರ್ಯರು, ವಿಡಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು.)

ಸಂದರ್ಶನ ಯಶಸ್ಸಿಗೆ ಪಂಚ ಸೂತ್ರಗಳು

ಸ್ಕ್ರೀನಿಂಗ್, ಆಪ್ಟಿಟ್ಯೂಡ್ ಟೆಸ್ಟ್, ಗುಂಪು ಚರ್ಚೆಯಂತಹ ಎಲ್ಲ ಪರೀಕ್ಷೆಗಳಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು ಅಂತಿಮ ಹಂತದ ಆಯ್ಕೆ/ಪರೀಕ್ಷೆ ಸಂದರ್ಶನಕ್ಕೆ ಕರೆಯಲಾಗುತ್ತದೆ. ನಿಜವಾದ ಸವಾಲು ಇರುವುದೇ ಇಲ್ಲಿ. ಅಭ್ಯರ್ಥಿಯ ನೈಜ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಈ ಸಂದರ್ಶನ ಅವರಲ್ಲಿರುವ ಸಕಾರಾತ್ಮಕ-ನಕಾರಾತ್ಮಕ ಎರಡೂ ಅಂಶಗಳನ್ನು ಅವರಿಗೇ ಪರಿಚಯಿಸುತ್ತದೆ!

ಹಿಂದಿನ ಹಂತಗಳನ್ನು ಸರಿಯಾಗಿ ಮುಗಿಸಿದವರು ಈ ಹಂತದಲ್ಲಿ ಎಡವುವುದೂ ಇದೆ. ಇದು ಅತ್ಯಂತ ಪ್ರಮುಖ ಘಟ್ಟ. ಈಗ ನೀವೇ ಈ ಸಂದರ್ಶನಕ್ಕೆ ಸಿದ್ಧರಾಗುತ್ತಿದ್ದೀರಿ ಎಂದುಕೊಂಡರೆ, ಅದಕ್ಕೆ ತಯಾರಿ ಹೀಗಿರಲಿ.

1. ಆಕರ್ಷಕ ಬಯೊಡೇಟಾ

ಇದರಲ್ಲಿ ಪ್ರಮುಖವಾಗಿ ನಿಮ್ಮ ವಿದ್ಯಾಭ್ಯಾಸ ಮತ್ತು ಶೈಕ್ಷಣಿಕ ಪ್ರಗತಿಯ ಕುರಿತ ಖಚಿತ ವಿವರಗಳಿರಬೇಕು. ಜೊತೆಗೆ ನೀವು ಮಾಡಿದ ಪ್ರಾಜೆಕ್ಟ್ ವರ್ಕ್, 'ಇಂಟರ್ನ್ ಶಿಪ್' ಸಮೀಕ್ಷೆ, ಭಾಗವಹಿಸಿದ ತರಬೇತಿ ಕಾರ್ಯಕ್ರಮ, ಪಡೆದ ಪ್ರಶಸ್ತಿ, ಪುರಸ್ಕಾರ, ಕಲಿತ ಹೆಚ್ಚುವರಿ ಕೋರ್ಸ್‌ಗಳ ಕುರಿತಾದ ಮಾಹಿತಿಯೂ ಇರಬೇಕು. ಕೆಲಸ ಬೇಕೆನ್ನುವ ನಿಮ್ಮ ಬೇಡಿಕೆಯ ಹಿಂದಿನ ಗಟ್ಟಿಯಾದ ಗುರಿ ಏನು? ಎಂಬುದನ್ನು ನೀವು ಆರಂಭದ ಸಾಲಿನ 'ಆಬ್ಜೆಕ್ಟಿವ್'ನಲ್ಲಿ ಹೇಳಿರಬೇಕು. ಬಯೊಡೇಟಾದ ಮೇಲ್ಭಾಗದಲ್ಲಿ ನಿಮ್ಮ ಇತ್ತೀಚಿನ ಸ್ಪಷ್ಟವಾದ ಭಾವಚಿತ್ರವೂ ಇರಲಿ. ಬಯೊಡೇಟಾ ನಿಮ್ಮ ಇಡೀ ವ್ಯಕ್ತಿತ್ವದ ಪ್ರತೀಕದಂತಿರಲಿ. ಇದನ್ನು ರಚಿಸಲು ಗೊತ್ತಿಲ್ಲದವರಿಗೆ 'ರೆಸುಮೆ' ತಯಾರಿಸುವುದನ್ನು ಹೇಳಿಕೊಡುವ ಅಲ್ಪಾವಧಿ ಕೋರ್ಸ್‌ಗಳೇ ಇವೆ!

2. ಕಂಪನಿಯ ಬಗ್ಗೆ ತಿಳಿದುಕೊಳ್ಳಿ

ನೀವು ಕೆಲಸ ಗಿಟ್ಟಿಸಿ ಕೊಳ್ಳಬೇಕೆನ್ನುವ ಸಂಸ್ಥೆಯ ಬಗ್ಗೆ ಸಂಶೋಧನೆ ಮಾಡಿ ಅದರ ಬಗ್ಗೆ ತಿಳಿದುಕೊಳ್ಳಿ. ಕಂಪನಿಯ ಕೆಲಸ ಕಾರ್ಯಗಳು, ಉತ್ಪನ್ನಗಳು, ಬಂಡವಾಳ, ನೌಕರರ ಸಂಖ್ಯೆ, ಲಾಭ - ನಷ್ಟ, ಶೇರುಗಳ ಬೆಲೆ, ಇರುವ ಜಾಗ ಎಲ್ಲದರ ಬಗ್ಗೆಯೂ ಕೂಲಂಕಷವಾಗಿ ಮಾಹಿತಿ ಸಂಗ್ರಹಿಸಿರಿ.

3. ಪ್ರಮಾಣ ಪತ್ರಗಳು ನೀಟಾಗಿರಲಿ

ನಿಮ್ಮ ವಿದ್ಯಾಭ್ಯಾಸ, ಸಾಧನೆ, ತರಬೇತಿ, ಪ್ರಶಸ್ತಿ ಪುರಸ್ಕಾರಗಳ ಕುರಿತಾದ ಪ್ರಮಾಣ ಪತ್ರಗಳನ್ನು ಆಕರ್ಷಕ ಬಣ್ಣದ ಫೈಲ್‌ನಲ್ಲಿ ಶಿಸ್ತುಬದ್ಧವಾಗಿ ಜೋಡಿಸಿರಬೇಕು. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಪ್ರಮಾಣ ಪತ್ರಗಳ ಒಂದೊಂದು ಫೋಟೊ ಪ್ರತಿ, ಖಾಲಿ ಬಿಳಿ ಹಾಳೆ ಫೈಲ್‌ನಲ್ಲಿರಲಿ.

4. ಹಾವಭಾವ, ಉಡುಪು ಪ್ಲಸ್ ಪಾಯಿಂಟ್

ಸಂದರ್ಶನದ ದಿನ ನೀವು ತೊಡುವ ದಿರಿಸು ಸೌಮ್ಯವಾಗಿರಲಿ ಮತ್ತು ಶುಭ್ರವಾಗಿರಲಿ. ಧರಿಸಿದ ಬಟ್ಟೆಗೆ ತಕ್ಕಂತೆ ನಿಮ್ಮ ಹಾವಭಾವವಿರಲಿ. ಉಡುಪಿಗೆ ತಕ್ಕಂತೆ ಮಾತನಾಡುವುದನ್ನು ರೂಢಿಸಿಕೊಳ್ಳಿ. ಜೀನ್ಸ್, ಟಿ-ಶರ್ಟ್, ತೆರೆದ ಚಪ್ಪಲಿಗಳನ್ನು ಧರಿಸಲೇ ಬೇಡಿ. ಈ ರೀತಿಯ ದಿರಿಸನ್ನು 'ಅನ್‌ಪ್ರೊಫೆಶನಲ್' ಎಂದೇ ಕಂಪನಿಗಳು ಭಾವಿಸು ತ್ತವೆ. ನೇರವಾಗಿ ನಡೆಯಿರಿ. ಸಮಚಿತ್ತದೊಂದಿಗೆ ಸಂದರ್ಶನ ಎದುರಿಸಿ.

5. ಖಚಿತ ಉತ್ತರಗಳೇ ಶ್ರೀರಕ್ಷೆ

ಕೇಳುವ ಪ್ರಶ್ನೆಗಳಿಗೆ ಖಚಿತವಾದ ಉತ್ತರ ಗೊತ್ತಿದ್ದರೆ ಉತ್ತರಿಸಿ. ಪ್ರಶ್ನೆ ಅರ್ಥವಾಗದಿದ್ದರೆ, ಇನ್ನೊಮ್ಮೆ ಹೇಳುವಂತೆ ವಿನಯದಿಂದ ಕೇಳಿ. ಗೊತ್ತಿರದಿದ್ದರೆ 'ಗೊತ್ತಿಲ್ಲ' ಎಂದು ತಿಳಿಸಿ, ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ ಎಂದು ಹೇಳಿ. ತೀರಾ ತಾಂತ್ರಿಕವಾದ ಪ್ರಶ್ನೆಗಳಿಗೆ ಚಿತ್ರ, ಸಮೀಕರಣ, ಕೋಡ್ ಬರೆದು ತೋರಿಸ ಬೇಕಾದರೆ, ಅದಕ್ಕೆ ಬೇಕಾದ ಪೆನ್ನು ಪೇಪರ್ ಕೇಳಿ ಪಡೆದುಕೊಂಡು ಉತ್ತರಿಸಿ ತೋರಿಸಿ. ಪ್ರಶ್ನೆ ಪೂರ್ತಿಯಾಗುವುದಕ್ಕೂ ಮುಂಚೆ ಉತ್ತರಿಸಲು ಪ್ರಾರಂಭಿಸಬೇಡಿ. ಅಂದಾಜು, ಹಾರಿಕೆಯ ಉತ್ತರಗಳನ್ನು ಕೊಡಲೇಬೇಡಿ. ಕಂಪನಿಯ ಕೆಲಸಕ್ಕೆ ನೀವು ಹೇಗೆ ಸೂಕ್ತ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿರಿ.

ಫೊರೆನ್ಸಿಕ್ ಸೈನ್ಸ್ ಕೋರ್ಸ್ ಕಲಿಕೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಪಿಯುಸಿ ಮುಗಿದ ಮೇಲೆ ಫೊರೆನ್ಸಿಕ್ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಕೋರ್ಸ್ ಮಾಡುವ ಆಸೆ ಇದೆ. ಅದರೆ, ಹೇಗೆ ಮುಂದುವರಿಯಬೇಕು ಎಂದು ತಿಳಿಯುತ್ತಿಲ್ಲ. ಈ ಬಗ್ಗೆ ಮಾರ್ಗದರ್ಶನ ನೀಡಿ.

ಊರು, ಹೆಸರು ತಿಳಿಸಿಲ್ಲ

ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಕ್ಷೇತ್ರದಲ್ಲಿ ವೃತ್ತಿಯ ಯಶಸ್ಸಿಗೆ ಬೇಕಾಗುವ ಕೌಶಲಗಳೆಂದರೆ ತಾರ್ಕಿಕ ಯೋಚನಾ ಶಕ್ತಿ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ವಿವರಗಳ ಕಡೆ ಗಮನ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಮಯದ ನಿರ್ವಹಣೆ ಇತ್ಯಾದಿ. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೋಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು. ಬಿ.ಎಸ್ಸಿ (ವಿಧಿ ವಿಜ್ಞಾನ) ಕೋರ್ಸ್ ಮಾಡಬಹುದಾದ ಕಾಲೇಜುಗಳ ವಿವರಕ್ಕಾಗಿ ಗಮನಿಸಿ: https://collegedunia.com/bsc/forensic-science/karnataka-colleges

2. ದ್ವಿತೀಯ ಪಿಯುಸಿ (ವಿಜ್ಞಾನ) ಓದುತ್ತಿದ್ದು, ಮನೆಯವರ ಒತ್ತಾಯಕ್ಕೆ ಇದನ್ನು ತೆಗೆದುಕೊಂಡಿದ್ದೇನೆ. ನನಗೆ ಕ್ರಿಮಿನಾಲಜಿ ಮಾಡಬೇಕೆಂಬ ಆಸೆಯಿದೆ. ಯಾವ ಕಾಲೇಜುಗಳಲ್ಲಿ ಈ ಕೋರ್ಸ್ ಇದೆ. ಕೋರ್ಸ್ ಬಗ್ಗೆ ಮಾಹಿತಿ ನೀಡಬಹುದಾ?

ರಜನೀಶ್, ಬೆಂಗಳೂರು.

ಅಪರಾಧ ಶಾಸ್ತ್ರ (ಕ್ರಿಮಿನಾಲಜಿ) ಅಧ್ಯಯನದಲ್ಲಿ ಅಪರಾಧ, ನಡವಳಿಕೆಯ ಕಾರಣಗಳು ಮತ್ತು ತಡೆಗಟ್ಟುವಿಕೆ, ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ, ಕಾನೂನು, ಮನೋವಿಶ್ಲೇಷಣೆ ಇತ್ಯಾದಿ ವಿಷಯಗಳಿರುತ್ತವೆ.

ಮನಃಶಾಸ್ತ್ರ, ವಿಧಿ ವಿಜ್ಞಾನ, ಸಮಾಜ ಶಾಸ್ತ್ರ, ಇವೆಲ್ಲವೂ ಅಪರಾಧ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳು. ಅಪರಾಧ ಶಾಸ್ತ್ರದ ಪದವಿ ಕೋರ್ಸ್‌ಗಳನ್ನು ಸಾಮಾನ್ಯವಾಗಿ ವಿಜ್ಞಾನ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಪಿಯುಸಿ ನಂತರ ಮಾಡಬಹುದು. ಈಗ ಅನುಷ್ಠಾನಗೊಳ್ಳುತ್ತಿರುವ ನೂತನ ಶಿಕ್ಷಣ ನೀತಿಯ ಅನುಸಾರ ಐಚ್ಛಿಕ ವಿಷಯವಾಗಿಯೂ ಅಧ್ಯಯನ ಮಾಡುವ ಸಾಧ್ಯತೆ ಇದೆ.

ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸ್ವಾಭಾವಿಕವಾದ ಒಲವು ಮತ್ತು ಆಸಕ್ತಿಯಿದ್ದು ವಿವೇಚನೆ, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ, ತಾರ್ಕಿಕ ಪ್ರತಿಪಾದನಾ ಕೌಶಲ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ಸಮಯ ಪ್ರಜ್ಞೆ ಇತ್ಯಾದಿ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಈ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಲು ಸ್ನಾತಕೋತ್ತರ ಪದವಿಯನ್ನು ಮಾಡುವುದು ಒಳ್ಳೆಯದು. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿತ್ತೇದಾರಿ ಸಂಸ್ಥೆಗಳು, ಪೋಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು. ಕಾಲೇಜುಗಳ ವಿವರಗಳಿಗಾಗಿ ಗಮನಿಸಿ:

https://www.shiksha.com/humanities-social-sciences/colleges/criminology-colleges-karnataka

3. ಬಿಎ (ಸೈಕಾಲಜಿ) ಮಾಡಿದ್ದೇನೆ. ಮದುವೆಯಾಗಿ, ಮಗುವಿದೆ. ಈಗ, ಮತ್ತೆ ಸೈಕಾಲಜಿಯಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳಬೇಕು ಎಂದಿದ್ದೇನೆ. ಹೇಗೆ ಮುಂದುವರಿಯಬೇಕು ಗೊತ್ತಾಗುತ್ತಿಲ್ಲ. ಮಾರ್ಗದರ್ಶನ ನೀಡಿ.

ಆಶಿಕಾ ಹೆಗಡೆ, ಹೊನ್ನಾವರ.

ಮನಃಶಾಸ್ತ್ರ (ಸೈಕಾಲಜಿ) ವಿಸ್ತಾರವಾದ ಕ್ಷೇತ್ರ. ಇದರಲ್ಲಿ ಕ್ಲಿನಿಕಲ್ ಸೈಕಾಲಜಿ, ಕಾಗ್ನೈಟಿವ್ ಸೈಕಾಲಜಿ, ಆಕ್ಯುಪೇಷನಲ್ ಸೈಕಾಲಜಿ, ಎಜುಕೇಷನಲ್ ಸೈಕಾಲಜಿ, ಫೊರೆನ್ಸಿಕ್ ಸೈಕಾಲಜಿ ಸೇರಿದಂತೆ ಅನೇಕ ವಿಭಾಗಗಳಿವೆ. ನಿಮಗೆ ಆಸಕ್ತಿ, ಅಭಿರುಚಿಯಿರುವ ವಿಭಾಗವನ್ನು ಆಯ್ಕೆ ಮಾಡಿಕೊಂಡು ಆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್ ಮಾಡಿ. ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳನ್ನು ನವೀಕರಿಸಿಕೊಂಡು ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

4. ನಾನು ಎಂ.ಕಾಂ ಪದವಿ ಮುಗಿಸಿ ಕೆಎಎಸ್ ಪರೀಕ್ಷೆಗೆ ತಯಾರಿ ನಡೆಸಿದ್ದೇನೆ. ಒಂದು ವರ್ಷವಾದರೂ ಪರೀಕ್ಷೆಯ ಅಧಿಸೂಚನೆಯೇ ಆಗಿಲ್ಲ. ನಾನು ಬಿ.ಇಡಿ ಮಾಡಬೇಕೆಂದುಕೊಂಡಿದ್ದೇನೆ. ಇದರಿಂದಾಗುವ ಅವಕಾಶಗಳನ್ನು ತಿಳಿಸಿ; ಇನ್ನೊಂದೆಡೆ ಕೆಲಸ ಮಾಡಬೇಕು ಎನ್ನಿಸುತ್ತಿದೆ. ಏನು ಮಾಡಬೇಕೆಂದು ಸಲಹೆ ನೀಡಿ.

ಸಚಿನ್, ಬೆಂಗಳೂರು

ನೀವು ಪರಿಶೀಲಿಸುತ್ತಿರುವ ಎರಡೂ ಆಯ್ಕೆಗಳೂ ವಿಭಿನ್ನವಾಗಿವೆ. ಶಿಕ್ಷಕ ವೃತ್ತಿಗೂ ಕೆಎಎಸ್ ವೃತ್ತಿಗೂ ಅಗತ್ಯವಾದ ಜ್ಞಾನ, ಕೌಶಲ ಮತ್ತು ಮನೋಧೋರಣೆಗಳಲ್ಲಿ ಪ್ರಮುಖ ವ್ಯತ್ಯಾಸಗಳಿವೆ. ಹಾಗಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ ಮತ್ತು ಅಭಿರುಚಿಗೆ ಯಾವ ವೃತ್ತಿ ಸೂಕ್ತವೆಂದು ಅರಿತು, ಅದರಂತೆ ವೃತ್ತಿಯೋಜನೆ ಯನ್ನು ಮಾಡಿದರೆ, ಮುಂದಿನ ಹಾದಿ ಸುಗಮವಾಗುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

ಹೆಚ್ಚಿನ ಪ್ರಶ್ನೋತ್ತರಗಳಿಗೆ ಓದಿ www.prajavani.net/education-career

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ

ಮಾದರಿ ಪ್ರಶ್ನೋತ್ತರ–

19) ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x-2)^2+1=2x-3$ (ii) $x(2x+3)=x^2+1$

ಪರಿಹಾರ :

(i) ಎಡಭಾಗ $= (x-2)^2+1$

$= x^2-4x+4+1$

$= x^2-4x+5$

$\therefore (x-2)^2+1 = 2x-3$

$x^2-4x+5 = 2x-3$

ಅಂದರೆ $x^2-6x+8=0$

ಇದು $ax^2+bx+c=0$ ರೂಪದಲ್ಲಿದೆ.

ಆದ್ದರಿಂದ, ದತ್ತ ಸಮೀಕರಣವು ಒಂದು ವರ್ಗ ಸಮೀಕರಣವಾಗಿದೆ.

(ii) ಇಲ್ಲಿ, $x(2x+3) = 2x^2+3x$

$\therefore x(2x+3) = x^2+1$ ಇದನ್ನು

$2x^2+3x = x^2+1$ ಎಂದು ಬರೆಯಬಹುದು.

$2x^2+3x = x^2+1$

$x^2+3x-1 = 0.$

ಇದು $ax^2+bx+c = 0$ ರೂಪದಲ್ಲಿದೆ.

20) ಕೆಳಗಿನ ಆವೃತ್ತಿ ವಿತರಣಾ ಪೈಯಲ್ಲಿರುವ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯಿರಿ (2019 ಜೂನ್)

ಕುಟುಂಬ ಗಾತ್ರ	1–3	3–5	5–7	7–9	9–11
ಕುಟುಂಬಗಳ ಸಂಖ್ಯೆ	7	8	2	2	1

ಪರಿಹಾರ:–

ವರ್ಗಾಂತರ	ಆವೃತ್ತಿ
1–3	7
3–5	8
5–7	2
7–9	2
9–11	1

L=3, $f_1=8$ $f_0=7$ $f_2=2$ $h=2$

ಬಹುಲಕ=

$$L+\left[\frac{f_1-f_0}{2f_1-f_0-f_2}\right] x\ h$$

$$=3+\left[\frac{8-7}{2x8-7-2}\right] x\ 2$$

$$=3+\left[\frac{1}{16-9}\right] x\ 2$$

$$=3+\frac{1}{7}x2=3+\frac{2}{7}=\frac{21+2}{2}$$

$$=\frac{23}{7}=3.285$$

ಅಥವಾ

ಕೆಳಗಿನ ಆವೃತ್ತಿ ವಿತರಣಾ ಪೈಯಲ್ಲಿರುವ ದತ್ತಾಂಶಗಳಿಗೆ ಮಧ್ಯಾಂಕವನ್ನು ಕಂಡುಹಿಡಿಯಿರಿ (2019 ಜೂನ್)

ಕುಟುಂಬ ಗಾತ್ರ	15–20	20–25	25–30	30–35	35–40
ಕುಟುಂಬಗಳ ಸಂಖ್ಯೆ	2	3	6	4	5

ಪರಿಹಾರ:–

ವರ್ಗಾಂತರ	ಆವೃತ್ತಿ	ಸಂಚಿತ ಆವೃತ್ತಿ
15–20	2	2
20–25	3	5
25–30	6	11
30–35	4	15
35–40	5	20

L= 25, $f_1=6$ $cf=5$ $h=5$

ಮಧ್ಯಾಂಕ=

$$L+\left[\frac{\frac{n}{2}-cf}{f}\right] x\ h$$

$$=25+\frac{5}{6}x5$$

$$=25+\frac{25}{6}$$

$= 25+ 4.166$

$=29. 166$

21) $800m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯವೇ? ಹೌದು ಎಂದಾದರೆ, ಅದರ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ.

ಪರಿಹಾರ:–

ಒಂದು ಆಯತಾಕಾರದ ಮಾವಿನ ತೋಪ ಅಗಲ x m ಆಗಿರಲಿ

ಒಂದು ಆಯತಾಕಾರದ ಮಾವಿನ ತೋಪ ಉದ್ದ $2x$ m ಆಗಿರಲಿ

ಆದ್ದರಿಂದ ಒಂದು ಆಯತಾಕಾರದ ಮಾವಿನ ತೋಪಿನ ವಿಸ್ತೀರ್ಣ=

= ಉದ್ದ x ಅಗಲ

$= 2x\ X\ x$ m

ಸಮಸ್ಯೆಯ ಪ್ರಕಾರ

$2x^2 = 800$

$x^2 = 800/2 = 400$

$x = \pm\sqrt{400}$

$x = \pm 20$

$x=+20,\quad x=-20,$

x ನ ಬೆಲೆ ನಕಾರಾತ್ಮಕವಾಗಿರಲು ಸಾಧ್ಯವಿಲ್ಲ ಹಿಗಾಗಿ $x=20$

$2x = 2(20) = 40$

$800m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯ

ಅದರ ಉದ್ದ = **20** m ಮತ್ತು ಅಗಲ=**40** m

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಲದುಮಾ ದಮೆಚಾ ಯುವ ಸ್ಕಾಲರ್‌ಶಿಪ್ ಪ್ರೊಗ್ರಾಂ– 2022

ವಿದ್ಯಾರ್ಥಿ ವೇತನ ಕೈಪಿಡಿ

ಆರ್ಥಿಕ ದುರ್ಬಲ ಕುಟುಂಬಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಕೋರ್ಸ್‌ಗೆ ಸೇರಲು ಅನುಕೂಲ ಕಲ್ಪಿಸುವುದಕ್ಕಾಗಿ ಲಿ ಲದುಮಾ ದಮೆಚಾ ಯುವ ಸ್ಕಾಲರ್‌ಶಿಪ್ ಯೋಜನೆ ರೂಪಿಸಲಾಗಿದೆ.

ಬೆಂಗಳೂರು, ಅಹಮದಾಬಾದ್, ಮುಂಬೈ ಹಾಗೂ ದೆಹಲಿ ಎನ್‌ಸಿಆರ್ ರಾಜ್ಯಗಳ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಅರ್ಜಿದಾರ ವಿದ್ಯಾರ್ಥಿಗಳು 10 ಅಥವಾ 12ನೇ ತರಗತಿ(ಪಿಯುಸಿ)ಯನ್ನು ಶೇ 85ರಷ್ಟು ಅಂಕಗಳೊಂದಿಗೆ ಪೂರ್ಣ ಗೊಳಿಸಿರಬೇಕು. ಜೊತೆಗೆ ಜೆಇಇ/ಎನ್‌ಇಇಟಿ ಕೋಚಿಂಗ್ ಪಡೆದಿರಬೇಕು. ಈ ಎಲ್ಲ ಅರ್ಹತೆಗಳನ್ನು ಪೂರೈಸುವ ಮೊದಲ ವರ್ಷದ ಎಂಜಿನಿಯ ರಿಂಗ್ / ವೈದ್ಯಕೀಯ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹3 ಲಕ್ಷಕ್ಕಿಂತ ಹೆಚ್ಚಿರಬಾರದು.

ಆರ್ಥಿಕ ನೆರವು: ಪ್ರತಿ ವರ್ಷ ₹50ಸಾವಿರ

ಅರ್ಜಿ ಸಲ್ಲಿಕೆಗೆ ಕೊನೆ ದಿನ: 15-12-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/YUUS1

ಮಾದರಿ ಪ್ರಶ್ನೋತ್ತರ

ರಸಾಯನ ವಿಜ್ಞಾನ

ಪಿಯುಸಿ

18) ಬಹು ಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ

1) ಮಣ್ಣಿನ ಸೂಕ್ಷ್ಮಾಣು ಜೀವಿಯಿಂದ ಪಡೆದ 'ಕ್ಲೋರಾಂಫಿನಿಕಾಲ್' ಎಂಬ ಜೀವ ನಿರೋಧಕ ....ದ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ.

ಎ) ವಿಷಮಶೀತಜ್ವರ ಬಿ) ಏಡ್ಸ್
ಸಿ) ಕ್ಯಾನ್ಸರ್ ಡಿ) ನಾಯಿಕೆಮ್ಮು

ಉತ್ತರ:- ಎ

2) 1873ರಲ್ಲಿ ಕ್ಲೋರಿನೀಕರಣಗೊಂಡ ಪ್ರಪ್ರಥಮ ಸಾವಯವ ಕೀಟನಾಶಕ ಡಿ.ಡಿ.ಟಿಯನ್ನು ತಯಾರಿಸಿದ್ದರೂ. ಅದರ ಪರಿಣಾಮಕಾರಿ ಕೀಟನಾಶಕತೆಯನ್ನು 1939ರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಔಷಧಿ ತಯಾರಿಕಾ ಘಟಕದ ....ಕಂಡುಹಿಡಿದರು.

ಎ) ಗ್ರೆಗರ್ ಮೆಂಡಲ್ ಬಿ) ಸ್ಯಾಮ್ ಕುಕ್
ಸಿ) ಜಾನ್ ಕೆ ಗ್ರೆಗೇರಿಯನ್ ಡಿ) ಪೌಲ್ ಮುಲ್ಲರ್

ಉತ್ತರ:- ಡಿ

3) ನಮ್ಮ ದೇಹವು ಅಯೋಡಿನ್ ಯುಕ್ತ 'ಥೈರೋಕ್ಸಿನ್' ಎಂಬ ಹಾರ್ಮೋನ್ ಉತ್ಪತ್ತಿ ಮಾಡುತ್ತದೆ. ಇದರ ಕೊರತೆಯು ....ರೋಗವನ್ನು ಉಂಟುಮಾಡುತ್ತದೆ.

ಎ) ಕೋವಿಡ್-19 ಬಿ) ಗಾಯಿಟರ್
ಸಿ) ಮಂಡಿನೋವು ಡಿ) ಹೃದಯಕಾಯಿಲೆ

ಉತ್ತರ:- ಬಿ

4) ಒಂದೇ ಬಗೆಯ ಹ್ಯಾಲೋಜನ್ ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳನ್ನು ....ಗಳು (ಹ್ಯಾಲೋಜನ್ ಪರಮಾಣುಗಳು ಒಂದೇ ಕಾರ್ಬನ್‌ಗೆ ಬಂಧಿಸಿರುವ) ಮತ್ತು 'ವಿಸಿನಲ್ ಹ್ಯಾಲೈಡ್'ಗಳು(ಹ್ಯಾಲೋಜನ್ಪ ರಮಾಣುಗಳು ಅಕ್ಕಪಕ್ಕದ ಕಾರ್ಬನ್‌ನೊಂದಿಗಿರುವ) ಎಂದು ವರ್ಗೀಕರಿಸಿದೆ.

ಎ) 'ಜೆಮಿನಲ್ ಹ್ಯಾಲೈಡ್' ಬಿ) ನೇಸಲ್ ಹ್ಯಾಲೈಡ್
ಸಿ) 'ಕೋರೋಕ್ವಿನ್' ಡಿ) ಮೇಲಿನ ಯಾವುದೂ ಅಲ್ಲ

ಉತ್ತರ-ಎ

5) ಸಂಶ್ಲೇಷಿತ ಹ್ಯಾಲೋಜನ್ ಸಂಯುಕ್ತಗಳಾದ ....ನನ್ನು ಮಲೇರಿಯಾದ ಚಿಕಿತ್ಸೆಯಲ್ಲಿಯೂ ಬಳಸುತ್ತಾರೆ.

ಎ) 'ಕೋರೋಕ್ವಿನ್' ಬಿ) ಆಕ್ಸಿಫಿರೋನ್
ಸಿ) 'ಹ್ಯಾಲೋಥೇನ್' ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಎ

19) ಯಾವುದನ್ನು ``ಸಾವಯವ ಲೋಹೀಯ ಸಂಯುಕ್ತಗಳು" ಎನ್ನುವರು?

ಉತ್ತರ:- ಬಹುತೇಕ ಸಾವಯವ ಕ್ಲೋರೈಡ್, ಬ್ರೋಮೈಡ್ ಮತ್ತು ಅಯೋಡೈಡ್‌ಗಳು ಕೆಲವು ಲೋಹಗಳೊಂದಿಗೆ ವರ್ತಿಸಿ ಕಾರ್ಬನ್- ಲೋಹೀಯ ಬಂಧಗಳಿರುವಸಂಯುಕ್ತಗಳನ್ನು ಉಂಟುಮಾಡುತ್ತವೆ. ಅವುಗಳನ್ನು " ಸಾವಯವ ಲೋಹೀಯ ಸಂಯುಕ್ತಗಳು" ಎನ್ನುವರು.

ಹೆಚ್ಚಿನ ಮಾಹಿತಿ ಸಾವಯವ ಲೋಹೀಯ ಸಂಯುಕ್ತಗಳ ಪ್ರಮುಖ ವಿಧವಾದ ಆಲ್ಕೈಲ್ ಮೆಗ್ನೇಷಿಯಂ ಹ್ಯಾಲೈಡ್ (ಖಒgಫಿ)ಅನ್ನು 1900ರಲ್ಲಿ ವಿಕ್ಟರ್ ಗ್ರಿಗ್ನಾರ್ಡ್ ಕಂಡು ಹಿಡಿದರು. ಅವುಗಳನ್ನು ಗ್ರಿಗ್ನಾರ್ಡ್ ಕಾರಕಗಳು ಎಂದು ಹೆಸರಿಸುತ್ತಾರೆ. ಈ ಕಾರಕಗಳನ್ನು ಹ್ಯಾಲೋ ಆಲ್ಕೇನ್‌ಗಳು ಮೆಗ್ನೇಷಿಯಂ ಲೋಹದೊಂದಿಗೆ ಶುಷ್ಕ ಈಥರ್‌ನಲ್ಲಿ ವರ್ತಿಸಿ ಪಡೆಯುತ್ತಾರೆ.

20) ಯಾವ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ (wurtz) ಕ್ರಿಯೆ ಎನ್ನುವರು?

ಉತ್ತರ:- ಅಲ್ಕೈಲ್ ಹ್ಯಾಲೈಡ್‌ಗಳು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿ, ಹ್ಯಾಲೈಡ್‌ಗಳಲ್ಲಿರುವ ಎರಡರಷ್ಟು ಸಂಖ್ಯೆಯ ಕಾರ್ಬನ್ ಪರಮಾಣುಗಳುಳ್ಳ ಹೈಡ್ರೋಕಾರ್ಬನ್‌ಗಳನ್ನು ಉಂಟುಮಾಡುತ್ತದೆ. ಈ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ ((wurtz)) ಕ್ರಿಯೆ ಎನ್ನುವರು.

21) ವುರ್ಟ್ಸ ಫಿಟ್ಟಿಗ್ ರಾಸಾಯನಿಕ ಕ್ರಿಯೆ ಬಗ್ಗೆ ಬರೆಯಿರಿ

ಉತ್ತರ:- ಅಲ್ಕೈಲ್ ಮತ್ತು ಆರೈಲ್ ಹ್ಯಾಲೈಡುಗಳ ಒಂದು ಮಿಶ್ರಣವನ್ನು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿದಾಗ ಅಲ್ಕೈಲ್ ಆರೀನ್‌ಗಳನ್ನು ಉಂಟುಮಾಡುತ್ತದೆ. ಇದನ್ನು ವುರ್ಟ್ಸ ಫಿಟ್ಟಿಗ್ ಕ್ರಿಯೆ ಎನ್ನುವರು

22) ಯಾವುದನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು?

ಉತ್ತರ:- ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್ ಸಂಯುಕ್ತಗಳನ್ನು "ಬಹುಹ್ಯಾಲೋಜನ್ ಸಂಯುಕ್ತಗಳು" ಎನ್ನುವರು ಇವುಗಳಲ್ಲಿ ಹೆಚ್ಚುನವು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉಪಯುಕ್ತವಾಗಿವೆ.

23) ಡೈಕ್ಲೋರೋ ಮಿಥೇನ್ (ಮಿಥಲೀನ್ ಕ್ಲೋರೈಡ್) ಎಲ್ಲೆಲ್ಲಿ ಬಳಸುತ್ತಾರೆ?

ಉತ್ತರ:- ಬಣ್ಣವನ್ನು ತೆಗೆಯಲು ವ್ಯಾಪಕವಾಗಿ ಡೈಕ್ಲೋರೋ ಮಿಥೇನ್‌ನ್ನು ದ್ರಾವಕವಾಗಿ ಉಪಯೋಗಿಸುತ್ತಾರೆ.

ಏರೋಸೋಲ್‌ಗಳಲ್ಲಿ ನೋದನಾಕಾರಿಯಾಗಿ, ಡ್ರಗ್ಸ್ ತಯಾರಿಕೆಯಲ್ಲಿ ಪ್ರಕ್ರಿಯಾ ದ್ರಾವಕವಾಗಿ ಉಪಯೊಗಿಸುತ್ತಾರೆ.

ಇದನ್ನು ಲೋಹಗಳನ್ನು ಸ್ವಚ್ಛಗೊಳಿಸುವ ದ್ರಾವಕವಾಗಿ ಬಳಸುತ್ತಾರೆ.

ನಿಮಗಿದು ಗೊತ್ತಿರಲಿ

- ರಸಾಯನಶಾಸ್ತ್ರದ ಮೊದಲ ನೊಬೆಲ್ ಪಾರಿತೋಷಕವನ್ನು 1901ರಲ್ಲಿ ದ್ರಾವಣದ ಕುರಿತು ಮಾಡಿದ ಸಂಶೋಧನೆಗೆ ಜಕೋಬಸ್ ಹೆಂಡ್ರಿಯಸ್ ವಾಂಟ್ ಹಾಫ್ (1852- 1911) ನೀಡಲಾಯಿತು.

ಪ್ರಜಾವಾಣಿ ನೋಡಿಯೊ — ಪಿಯು ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಂಸದೀಯ ಸಮಿತಿ ವರದಿಯಲ್ಲಿ ತೀವ್ರ ಆಕ್ಷೇಪ

ನ್ಯಾಯಮೂರ್ತಿ ನೇಮಕ: ಪಾಲಿಸದ ಕಾಲಮಿತಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಕೊಲಿಜಿಯಂ ವ್ಯವಸ್ಥೆ ಮೂಲಕ ನ್ಯಾಯಮೂರ್ತಿಗಳ ಹುದ್ದೆಗಳನ್ನು ಕಾಲಮಿತಿಯೊಳಗೆ ಭರ್ತಿ ಮಾಡಲು ಕಾರ್ಯಾಂಗ ಮತ್ತು ನ್ಯಾಯಾಂಗವು ಬದ್ಧತೆ ಹೊಂದಿಲ್ಲದಿರುವುದು ವಿಷಾದದ ಸಂಗತಿ ಎಂದು ಸಂಸದೀಯ ಸಮಿತಿ ಹೇಳಿದೆ.

ನ್ಯಾಯಮೂರ್ತಿಗಳ ನೇಮಕ ವಿಚಾರದಲ್ಲಿ ಮುಸುಕಿನ ಗುದ್ದಾಟ ಬಿಟ್ಟು, ಉನ್ನತ ನ್ಯಾಯಾಲಯಗಳಲ್ಲಿ ದೀರ್ಘಕಾಲದಿಂದ ಖಾಲಿ ಇರುವ ಹುದ್ದೆಗಳ ನೇಮಕಾತಿ ಸಮಸ್ಯೆ ಪರಿಹರಿಸಲು ನ್ಯಾಯಾಂಗ ಮತ್ತು ಕಾರ್ಯಾಂಗವು ವಿಶಾಲ ದೃಷ್ಟಿಯಿಂದ ಹೊಸ ರೀತಿ ಯೋಚಿಸಬೇಕು ಎಂದು ಸಂಸದೀಯ ಸಮಿತಿ ಹೇಳಿದೆ.

ಕಾನೂನು ಮತ್ತು ಸಿಬ್ಬಂದಿ ಇಲಾಖೆಗೆ ಸಂಬಂಧಿಸಿದ ಸ್ಥಾಯಿ ಸಮಿತಿಯು ಗುರುವಾರ ಸಂಸತ್‌ನಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ, ಕೇಂದ್ರ ಕಾನೂನು ಸಚಿವಾಲಯವು ನ್ಯಾಯಾಂಗ ಇಲಾಖೆಯ ಅಭಿಪ್ರಾಯಗಳೊಂದಿಗೆ ನ್ಯಾಯಮೂರ್ತಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕಾಲಮಿತಿಯನ್ನು ಅಳವಡಿಸಿಕೊಂಡಿಲ್ಲ. ನೇಮಕಕ್ಕೆ ಸಂಬಂಧಿಸಿದ ಕಾರ್ಯವಿಧಾನದ ಜ್ಞಾಪಕ ಪತ್ರದಲ್ಲಿ (ಎಂಒಪಿ) ಕಾಲ ಮಿತಿಯ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂದೂ ಗಮನ ಸೆಳೆಯಲಾಗಿದೆ.

‘ವಿಷಾದದ ಸಂಗತಿ ಎಂದರೆ, ಆ ಕಾಲಮಿತಿಗೆ ನ್ಯಾಯಾಂಗ ಮತ್ತು ಶಾಸಕಾಂಗ ಎರಡೂ ಬದ್ಧವಾಗಿಲ್ಲ. ಇದು ಹೈಕೋರ್ಟ್‌ಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಳಂಬಕ್ಕೆ ಪ್ರಮುಖ ಕಾರಣವಾಗಿದೆ. ಈ ದೀರ್ಘಕಾಲಿಕ ಸಮಸ್ಯೆ ನಿವಾರಣೆಗೆ ಸರ್ಕಾರ ಮತ್ತು ನ್ಯಾಯಾಂಗವು ಹೊಸಬಗೆಯಲ್ಲಿ ಯೋಚಿಸಬೇಕು’ ಎಂದು ಸಮಿತಿ ಹೇಳಿದೆ.

ಸರ್ಕಾರದ ಮಾಹಿತಿಯ ಪ್ರಕಾರ, 2021ರ ಡಿಸೆಂಬರ್ 31ರವರೆಗೆ ತೆಲಂಗಾಣ, ಪಟ್ನಾ ಮತ್ತು ದೆಹಲಿಯ ಮೂರು ಹೈಕೋರ್ಟ್‌ಗಳಲ್ಲಿ ಖಾಲಿ ಹುದ್ದೆಗಳು ಶೇ 50ಕ್ಕಿಂತ ಹೆಚ್ಚಿವೆ. ಅಲ್ಲದೆ 10 ಹೈಕೋರ್ಟ್‌ಗಳಲ್ಲಿ ಶೇ 40ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ.

‘ಇವೆಲ್ಲವೂ ದೊಡ್ಡ ರಾಜ್ಯಗಳು. ಅಲ್ಲಿನ ಜನಸಂಖ್ಯೆಯ ಅನುಪಾತಕ್ಕೆ ನ್ಯಾಯಮೂರ್ತಿಗಳ ಸಂಖ್ಯೆ ಅತೀ ಕಡಿಮೆ ಇದೆ. ಖಾಲಿ ಹುದ್ದೆಗಳ ಭರ್ತಿಗೆ ತುರ್ತು ಕಾಳಜಿ ವಹಿಸಬೇಕು’ ಎಂದು ಬಿಜೆಪಿಯ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಂಸದೀಯ ಸಮಿತಿಯು ಹೇಳಿದೆ.

‘ಸುಪ್ರೀಂ’ ನ್ಯಾಯಮೂರ್ತಿ ಹುದ್ದೆಗೆ ದೀಪಾಂಕರ್ ದತ್ತಾ

ನವದೆಹಲಿ (ಪಿಟಿಐ): ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೀಪಾಂಕರ್ ದತ್ತಾ ಅವರು ಭಾನುವಾರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೇರಿದ್ದಾರೆ.

ದತ್ತಾ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 28ಕ್ಕೆ ಏರಿಕೆಯಾಗಲಿದೆ. ಮುಖ್ಯ ನ್ಯಾಯಮೂರ್ತಿ ಹುದ್ದೆಯೂ ಸೇರಿ ಸುಪ್ರೀಂ ಕೋರ್ಟ್‌ನಲ್ಲಿ 34 ಮಂಜೂರಾತಿ ಹುದ್ದೆಗಳಿವೆ.

ನ್ಯಾಯಮೂರ್ತಿ ಯು.ಯು. ಲಲಿತ್ (ನಿವೃತ್ತ) ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ದತ್ತಾ ಅವರ ಹೆಸರನ್ನು ಕಳೆದ ಸೆಪ್ಟೆಂಬರ್ 26ರಂದು ಈ ಹುದ್ದೆಗೆ ಶಿಫಾರಸು ಮಾಡಿತ್ತು. ದತ್ತಾ ಅವರು 2020ರ ಏಪ್ರಿಲ್‌ನಲ್ಲಿ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆಗೇರಿದ್ದರು. ಕೊಲಿಜಿಯಂ ಶಿಫಾರಸನ್ನು ಕೇಂದ್ರ ಸರ್ಕಾರ ಅನುಮೋದಿಸಿರುವುದನ್ನು ಕಾನೂನು ಸಚಿವ ಕಿರಣ್ ರಿಜಿಜು ಅವರು ಟ್ವಿಟರ್‌ನಲ್ಲಿ ಅಧಿಕೃತವಾಗಿ ಪ್ರಕಟಿಸಿದ್ದಾರೆ.

330 ನ್ಯಾಯಮೂರ್ತಿಗಳ ಹುದ್ದೆ ಖಾಲಿ

ನವದೆಹಲಿ: ದೇಶದಲ್ಲಿ 25 ಹೈಕೋರ್ಟ್‌ಗಳಿವೆ. ಡಿ. 5ರವರೆಗಿನ ಮಾಹಿತಿ ಪ್ರಕಾರ, ಮಂಜೂರಾದ 1,108 ನ್ಯಾಯಮೂರ್ತಿಗಳ ಹುದ್ದೆಗಳ ಪೈಕಿ 778 ನ್ಯಾಯಮೂರ್ತಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕ ಸಂಬಂಧ 20 ಕಡತಗಳನ್ನು ಮರುಪರಿಶೀಲಿಸುವಂತೆ ನವೆಂಬರ್ 25 ರಂದು ಕೇಂದ್ರ ಸರ್ಕಾರವು ಕೊಲಿಜಿಯಂಗೆ ಕೇಳಿಕೊಂಡಿತ್ತು. ನೇಮಕಾತಿಯಲ್ಲಿ ಪ್ರಮುಖವಾಗಿ ಮೀಸಲಾತಿ ಪಾಲಿಸುವಂತೆಯೂ ಪ್ರತಿಪಾದಿಸಿತ್ತು. 20 ಹೆಸರುಗಳಲ್ಲಿ, 11 ಹೊಸ ಹೆಸರುಗಳು ಮತ್ತು ಒಂಬತ್ತು ಹೆಸರುಗಳು ಕೊಲಿಜಿಯಂ ಮತ್ತೊಮ್ಮೆ ಶಿಫಾರಸು ಮಾಡಿದವುಗಳಾಗಿದ್ದವು. ಕೊಲಿಜಿಯಂ ಜತೆಗಿನ ಭಿನ್ನಾಭಿಪ್ರಾಯಗಳಿಂದಾಗಿ ಕೇಂದ್ರ ಸರ್ಕಾರ, ಕೊಲಿಜಿಯಂ ಶಿಫಾರಸು ಮಾಡಿದ್ದ ಹೆಸರುಗಳ ಪಟ್ಟಿ ವಾಪಸ್ ಕಳುಹಿಸಿದೆ ಎಂದು ಮೂಲಗಳು ತಿಳಿಸಿವೆ.

‘ಪರಿಷ್ಕೃತ ಎಂಒಪಿ ಅಂತಿಮಗೊಳಿಸಿ’

‘ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನೇಮಕದ ಕಾರ್ಯವಿಧಾನದ ಜ್ಞಾಪಕ ಪತ್ರ (ಎಂಒಪಿ) ಪರಿಷ್ಕರಣೆ ಕುರಿತು ಒಮ್ಮತದ ನಿರ್ಧಾರಕ್ಕೆ ಬರಲು ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರ ವಿಫಲವಾಗಿರುವುದು, ಈ ಸಮಸ್ಯೆ ಸುಮಾರು ಏಳು ವರ್ಷಗಳಿಂದ ಮುಂದುವರಿದಿರುವುದು ಆಶ್ಚರ್ಯ. ಪರಿಷ್ಕೃತ ಎಂಒಪಿ ಹೆಚ್ಚು ಪರಿಣಾಮಕಾರಿ ಮತ್ತು ಪಾರದರ್ಶಕವಿದೆ. ಇದನ್ನು ಕೇಂದ್ರ ಸರ್ಕಾರ ಮತ್ತು ನ್ಯಾಯಾಂಗವು ಅಂತಿಮಗೊಳಿಸುವುದನ್ನು ಸಮಿತಿ ನಿರೀಕ್ಷಿಸುತ್ತದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಡಿಜಿಸಿಎ: 1,081 ಪೈಲಟ್ ಪರವಾನಗಿ ಮಂಜೂರು

ನವದೆಹಲಿ (ಪಿಟಿಐ): ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಈ ವರ್ಷ 1,081 ವಾಣಿಜ್ಯ ಪೈಲಟ್ ಪರವಾನಗಿಯನ್ನು (ಸಿಪಿಎಲ್) ನೀಡಿದೆ. ಒಂದು ದಶಕದಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ಪ್ರಮಾಣದಲ್ಲಿ ಪೈಲಟ್ ಪರವಾನಗಿಯನ್ನು ನೀಡಲಾಗಿದೆ.

ಕೋವಿಡ್ ಸಾಂಕ್ರಾಮಿಕದ ಬಳಿಕ ದೇಶದ ನಾಗರಿಕ ವಿಮಾನಯಾನ ಕ್ಷೇತ್ರವಾಗಿ ವೇಗವಾಗಿ ಚೇತರಿಸಿಕೊಳ್ಳುತ್ತಿರುವ ಈ ಸಮಯದಲ್ಲಿ, ದೇಶಿಯ ವಿಮಾನ ಸಂಚಾರದಲ್ಲಿ ದಾಖಲೆಯ ಪ್ರಮಾಣದಲ್ಲಿ ವಾಣಿಜ್ಯ ಪೈಲಟ್ ಪರವಾನಗಿ ನೀಡಲಾಗಿದೆ ಎನ್ನಲಾಗಿದೆ.

ಡಿಜಿಸಿಎಯ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಡಿ. 6ರ ವೇಳೆಗೆ 1,081 ಸಿಪಿಎಲ್ ನೀಡಲಾಗಿದ್ದು, ಈ ವರ್ಷಾಂತ್ಯದ ವೇಳೆಗೆ ಈ ಸಂಖ್ಯೆಯು 1,100ಕ್ಕೆ ಏರಿಕೆಯಾಗಲಿದೆ. 2011ರ ಬಳಿಕ ಇದೇ ಮೊದಲ ಬಾರಿಗೆ ಇಷ್ಟು ಪ್ರಮಾಣದಲ್ಲಿ ಪರವಾನಗಿ ನೀಡಲಾಗಿದೆ. 2014ರಲ್ಲಿ 896 ಹಾಗೂ 2021ರಲ್ಲಿ 862 ಸಿಪಿಎಲ್ ನೀಡಲಾಗಿತ್ತು.

ಕನಿಷ್ಠ 200 ಗಂಟೆಗಳ ಹಾರಾಟವನ್ನು ಪೂರ್ಣಗೊಳಿಸಿದ ಹಾಗೂ ಇತರ ಷರತ್ತುಗಳನ್ನು ಪೂರೈಸಿದವರು ಮಾತ್ರ ವಾಣಿಜ್ಯ ಪೈಲಟ್ ಪರವಾನಗಿಗೆ ಅರ್ಜಿ ಸಲ್ಲಿಸಲು ಅರ್ಹತೆ ಪಡೆಯುತ್ತಾರೆ.

ಸಿಪಿಎಲ್‌ಗೆ ಅರ್ಜಿ ಸಲ್ಲಿಸುವ ಮುನ್ನ ವಿಮಾನಯಾನ ತರಬೇತಿ ಸೇರಿದಂತೆ ಪೈಲಟ್ ತರಬೇತಿಗೆ ಸುಮಾರು ₹ 50 ಲಕ್ಷದ ತನಕ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

‘ಡಿಜಿಸಿಎ ಇದುವರೆಗೆ 25 ಸಾವಿರ ಪೈಲಟ್ ಪರವಾನಗಿ ನೀಡಿದ್ದು, ಇದರಿಂದ 11 ಸಾವಿರದಿಂದ 12 ಸಾವಿರ ಸಕ್ರಿಯ ಪೈಲಟ್‌ಗಳಿದ್ದಾರೆ. ಅವರಲ್ಲಿ 9ರಿಂದ 10 ಸಾವಿರ ಪೈಲಟ್‌ಗಳು ವಾಣಿಜ್ಯ ವಿಮಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

₹ 75 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ

‘ದೇಶಕ್ಕೆ ಅಡ್ಡಹಾದಿಯ ರಾಜಕೀಯ ಅಗತ್ಯವಿಲ್ಲ’

ನಾಗ್ಪುರ (ಪಿಟಿಐ): ‘ದೇಶಕ್ಕೆ ಸುಸ್ಥಿರ ಅಭಿವೃದ್ಧಿ ಅಗತ್ಯವಿದೆಯೇ ಹೊರತು ಅಡ್ಡಹಾದಿಯ ರಾಜಕೀಯವಲ್ಲ. ಕೆಲವು ಪಕ್ಷಗಳು ದೇಶದ ಆರ್ಥಿಕತೆಯನ್ನು ನಾಶಮಾಡಲು ಯತ್ನಿಸುತ್ತಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಆರೋಪಿಸಿದರು.

₹ 75 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಇಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ‘ಅಭಿವೃದ್ಧಿಯ ಕಡೆಗೆ ನಾವು ಸಂಕುಚಿತವಾಗಿ ಮುನ್ನಡೆದರೆ ಸೀಮಿತ ಅವಕಾಶಗಳು ಮಾತ್ರವೇ ಒದಗಿ ಬರುತ್ತವೆ. ಕಳೆದ 8 ವರ್ಷಗಳಲ್ಲಿ ಈ ಮನೋಭಾವವನ್ನು ಬದಲಾಯಿಸಿರುವ ನಾವು ಎಲ್ಲರ ನಂಬಿಕೆ, ಬೆಂಬಲ ಮತ್ತು ಪ್ರಯತ್ನಗಳ ಜೊತೆ ಮುಂದುವರಿದಿದ್ದೇವೆ’ ಎಂದರು.

‘ನಾಗ್ಪುರದಲ್ಲಿ ಚಾಲನೆ ನೀಡಿರುವ ಯೋಜನೆಗಳು ಅಭಿವೃದ್ಧಿಗೆ ಸಮಗ್ರತಾ ದೃಷ್ಟಿಯನ್ನು ನೀಡಿವೆ. ಹುಸಿ ಭರವಸೆಗಳನ್ನು ನೀಡಿ ಅಧಿಕಾರಕ್ಕೇರಿ ತೆರಿಗೆದಾರರನ್ನು ದೋಚುವ ರಾಜಕಾರಣಿಗಳ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು’ ಎಂದೂ ಕಿವಿಮಾತು ಹೇಳಿದರು.

‘ಸುಸ್ಥಿರ ಅಭಿವೃದ್ಧಿಯ ಕಡೆಗೆ ಗಮನಹರಿಸಲು ಎಲ್ಲಾ ರಾಜಕಾರಣಿಗಳಲ್ಲಿ ಮನವಿ ಮಾಡುತ್ತೇನೆ. ಇದರಿಂದ ಚುನಾವಣೆಗಳಲ್ಲಿ ಗೆಲ್ಲಬಹುದು’ ಎಂದೂ ಮೋದಿ ಪ್ರತಿಪಾದಿಸಿದರು.

‘ಈ ಹಿಂದೆ ಮತಬ್ಯಾಂಕ್ ರಾಜಕಾರಣ, ಭ್ರಷ್ಟಾಚಾರದಿಂದಾಗಿ ತೆರಿಗೆದಾರರ ಹಣ ವ್ಯರ್ಥವಾಗುತ್ತಿತ್ತು. ಈಗ ನಮ್ಮ ಸರ್ಕಾರವು ಮುಂದಿನ ಭವಿಷ್ಯವನ್ನು ಉಜ್ವಲಗೊಳಿಸುವ ದೃಷ್ಟಿಯಿಂದ ಸುಸ್ಥಿರ ಮತ್ತು ಆಧುನಿಕ ಮೂಲಸೌಕರ್ಯ ಅಭಿವೃದ್ಧಿಯತ್ತ ಗಮನ ಕೇಂದ್ರೀಕರಿಸಿದೆ’ ಎಂದೂ ತಿಳಿಸಿದರು.

ಬಾಂದ್ರಾ ಜಿಲ್ಲೆಯ ಗೋಸಿಖುರ್ದ್ ಅಣೆಕಟ್ಟೆ ಯೋಜನೆಯು ಮೂರು ದಶಕಗಳಿಂದ ವಿಳಂಬವಾಗಿರುವುದನ್ನು ಉದಾಹರಿಸಿ, ಮಹಾರಾಷ್ಟ್ರದಲ್ಲಿ ಡಬಲ್ ಎಂಜಿನ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಈ ಯೋಜನೆಯು ಪೂರ್ಣಗೊಳ್ಳುವ ಹಂತಕ್ಕೆ ತಲುಪಿದೆ ಎಂದರು.

ಪ್ರಧಾನಿ ಹೇಳಿಕೆಗೆ ತಿರುಗೇಟು: ಅಡ್ಡಹಾದಿಯ ರಾಜಕೀಯ ಕುರಿತು ಪ್ರಧಾನಿ ಮೋದಿ ಅವರು ನೀಡಿರುವ ಹೇಳಿಕೆಗೆ ಶಿವಸೇನಾ ಉದ್ಧವ್ ಠಾಕ್ರೆ ಬಣವು ತಿರುಗೇಟು ನೀಡಿದೆ.

ಪ್ರಧಾನಿ ಹೇಳಿಕೆಯು ‘ತಮಾಷೆ’ಯಾಗಿದೆ ಎಂದಿರುವ ಶಿವಸೇನಾ ಉದ್ಧವ್ ಠಾಕ್ರೆ ಬಣದ ವಕ್ತಾರೆ ಪ್ರಿಯಾಂಕಾ ಚತುರ್ವೇದಿ, ‘ಅಲ್ಪಾವಧಿ ರಾಜಕೀಯವು ಸಂವಿಧಾನ, ದೇಶದ ಒಕ್ಕೂಟ ರಚನೆಯನ್ನು ದುರ್ಬಲಗೊಳಿಸುತ್ತದೆ’ ಎಂದಿದ್ದಾರೆ.

ಏಕನಾಥ ಶಿಂದೆ ನೇತೃತ್ವದ ಸರ್ಕಾರವನ್ನು ಉಲ್ಲೇಖಿಸಿ ಪ್ರಿಯಾಂಕಾ ಅವರು ಈ ಹೇಳಿಕೆ ನೀಡಿದ್ದಾರೆ.

ಚಾಲನೆ ದೊರೆತ ಯೋಜನೆಗಳು

- ನಾಗ್ಪುರ -ಮುಂಬೈ ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯ ಮೊದಲ ಹಂತ ಉದ್ಘಾಟನೆ (ಇದು ನಾಗ್ಪುರದಿಂದ ಶಿರಡಿಗೆ ಸಂಪರ್ಕ ಕಲ್ಪಿಸುತ್ತಿದೆ)
- ನಾಗ್ಪುರ -ಬಿಲಾಸ್‌ಪುರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ
- ನಾಗ್ಪುರ ಮೆಟ್ರೊ ರೈಲು ಯೋಜನೆಯ ಮೊದಲ ಹಂತ ಉದ್ಘಾಟನೆ
- ನಾಗ್ಪುರ ಏಮ್ಸ್ ಘಟಕ ಉದ್ಘಾಟನೆ

ನಾಗ್ಪುರದ ಫ್ರೀಡಂ ಪಾರ್ಕ್ ನಿಲ್ದಾಣದಿಂದ ಖಾಪ್ರಿ ನಿಲ್ದಾಣದವರೆಗೆ ಮೆಟ್ರೊದಲ್ಲಿ ಪ್ರಯಾಣಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಗೋವಾ: ಅಖಿಲ ಭಾರತ ಆಯುರ್ವೇದ ಸಂಸ್ಥೆಗೆ ಚಾಲನೆ

ಮುಂಬೈ (ಪಿಟಿಐ): ಗೋವಾದ ಧಾರ್ಗಲ್‌ನಲ್ಲಿ ಅಖಿಲ ಭಾರತ ಆಯುರ್ವೇದ ಸಂಸ್ಥೆಯನ್ನು (ಎಐಐಎ) ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಆಯುರ್ವೇದ ಔಷಧ ಪದ್ಧತಿಗೆ ಜಾಗತಿಕ ಸ್ಥಾನಮಾನ ನೀಡಲು ಎಲ್ಲ ದೇಶಗಳು ಭಾರತದ ಜೊತೆ ಕೈಜೋಡಿಸಬೇಕು ಎಂದು ಕೋರಿದ್ದಾರೆ.

ವಿಶ್ವ ಆಯುರ್ವೇದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದಿದ್ದ ಪ್ರಧಾನಿ ಅವರು ಸಂಸ್ಥೆಯನ್ನು ಉದ್ಘಾಟಿಸಿದರು. ಈ ಸಮ್ಮೇಳನದಲ್ಲಿ 50 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಪ್ರಧಾನಿ ಅವರು ಬಳಿಕ ಗೋವಾದ ಮೋಪಾದಲ್ಲಿ ನಿರ್ಮಿಸಲಾಗಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತವನ್ನು ಉದ್ಘಾಟಿಸಿದರು. ಈ ವಿಮಾನ ನಿಲ್ದಾಣಕ್ಕೆ ಮನೋಹರ್ ಪರಿಕ್ಕರ್ ಅವರ ಹೆಸರನ್ನು ಇಡಲಾಗಿದೆ.

ಈ ಮೂಲಕ ಗೋವಾದಲ್ಲಿ ಕೇವಲ 50 ಕಿ.ಮೀ.ಅಂತರದಲ್ಲಿ ಎರಡು ಅಂತರರಾಷ್ಟ್ರೀಯ ವಿಮಾನನಿಲ್ದಾಣಗಳು ತಲೆ ಎತ್ತಿದಂತಾಗಿದೆ.

‘ಲವ್ ಜಿಹಾದ್ ನಿಷೇಧ ಕಾಯ್ದೆ ಜಾರಿಗೆ ರಾಜ್ಯಗಳ ಮನವಿ’

ಹುಬ್ಬಳ್ಳಿ: ‘ಲವ್ ಜಿಹಾದ್ ನಿಷೇಧ ಕಾಯ್ದೆ ಜಾರಿಗೆ ತರುವಂತೆ ಕೆಲವು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿವೆ. ಕೇಂದ್ರ ಗೃಹ ಇಲಾಖೆ ಪರಿಶೀಲನೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳಲಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮತಾಂತರ ಮತ್ತು ಲವ್ ಜಿಹಾದ್ ಪ್ರಕರಣಗಳು ಕೆಲ ರಾಜ್ಯಗಳಲ್ಲಿ ನಡೆದಿರುವುದು ಬೆಳಕಿಗೆ ಬಂದಿದ್ದು, ಆಯಾ ರಾಜ್ಯಗಳು ಕಾನೂನು ಕ್ರಮ ಕೈಗೊಳ್ಳುತ್ತಿವೆ. ಕಾಯ್ದೆ ಜಾರಿಗಾಗಿ ಕೆಲ ರಾಜ್ಯ ಸರ್ಕಾರಗಳು ಕೇಂದ್ರಕ್ಕೆ ಇತ್ತೀಚೆಗೆ ಮನವಿ ನೀಡಿವೆ. ಅದಕ್ಕೆ ಸಂಬಂಧಿಸಿ ಕೈಗೊಂಡ ನಿರ್ಣಯ ಪ್ರಕ್ರಿಯೆಗಳ ಬಗ್ಗೆ ನನಗೆ ಮಾಹಿತಿಯಿಲ್ಲ’ ಎಂದರು.

‘ಮೀಸಲಾತಿ ಶೇ 50ಕ್ಕಿಂತ ಹೆಚ್ಚಳವಿಲ್ಲ ಎನ್ನುವ ಕೇಂದ್ರ ಸರ್ಕಾರದ ಪತ್ರವನ್ನು ಕೆಲವು ಮಾಧ್ಯಮಗಳಲ್ಲಿ ನೋಡಿದ್ದೇನೆ. ಯಾವ ಹಿನ್ನೆಲೆಯಲ್ಲಿ ಹಾಗೆ ಹೇಳಲಾಗಿದೆ ಎಂದು ಪರಿಶೀಲಿಸುತ್ತೇನೆ. ಈಗಾಗಲೇ ಕೆಲವು ರಾಜ್ಯಗಳಲ್ಲಿ ಮೀಸಲಾತಿ ಹೆಚ್ಚಿಸಲಾಗಿದೆ. ರಾಜ್ಯದಲ್ಲಿ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಅನುಕೂಲವಾಗುವಂತೆ ಮೀಸಲಾತಿ ಹೆಚ್ಚಿಸಲಾಗಿದೆ. ಬಿಜೆಪಿ ಸರ್ಕಾರ ಯಾವ ಸಮುದಾಯಕ್ಕೂ ಅನ್ಯಾಯವಾಗದ ಹೇಗೆ ನೋಡಿಕೊಳ್ಳಲು ಬದ್ಧ’ ಎಂದು ಪ್ರತಿಕ್ರಿಯಿಸಿದರು.

ಶಬರಿಮಲೆ: ದಟ್ಟಣೆ ನಿರ್ವಹಣೆಗೆ ಕ್ರಮ– ಹೈಕೋರ್ಟ್ ನಿರ್ದೇಶನ

ಕೊಚ್ಚಿ (ಪಿಟಿಐ): ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶಬರಿಮಲೆಗೆ ಭೇಟಿ ನೀಡುವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ, ದಟ್ಟಣೆ ನಿರ್ವಹಣೆ ಹಾಗೂ ವಾಹನಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಪೊಲೀಸರು ಹಾಗೂ ಅಯ್ಯಪ್ಪ ದೇವಸ್ಥಾನ ಮಂಡಳಿಗೆ ಕೇರಳ ಹೈಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಅನಿಲ್ ಕೆ.ನರೇಂದ್ರನ್, ಪಿ.ಜಿ.ಅಜಿತ್ ಕುಮಾರ್ ಅವರಿದ್ದ ನ್ಯಾಯಪೀಠ ವಿಶೇಷ ವಿಚಾರಣೆ ನಡೆಸಿ, ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪತ್ತನಂತಿಟ್ಟ ಡಿಸಿ ಹಾಗೂ ಎಸ್‌ಪಿಗೆ ನಿರ್ದೇಶನ ನೀಡಿತು.

ರಾಜ್ಯದ ಮೊದಲ ಉಪಮುಖ್ಯಮಂತ್ರಿಯಾಗಿ ಮುಕೇಶ್ ಅಗ್ನಿಹೋತ್ರಿ ಅಧಿಕಾರ ಸ್ವೀಕಾರ

ಹಿಮಾಚಲ ಸಿ.ಎಂ ಆಗಿ ಸುಖು ಪ್ರಮಾಣ

ಶಿಮ್ಲಾ (ಪಿಟಿಐ): ನಾಲ್ಕನೇ ಅವಧಿಗೆ ಶಾಸಕರಾಗಿರುವ ಸುಖ್ವಿಂದರ್ ಸಿಂಗ್ ಸುಖು ಅವರು ಹಿಮಾಚಲ ಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಿರ್ಗಮಿತ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಮುಕೇಶ್ ಅಗ್ನಿಹೋತ್ರಿ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇವರು ಹಿಮಾಚಲ ಪ್ರದೇಶದ ಮೊದಲ ಉಪಮುಖ್ಯಮಂತ್ರಿ. ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ಪ್ರಮಾಣ ವಚನ ಬೋಧಿಸಿದರು.

ತಳಮಟ್ಟದಲ್ಲಿ ಕೆಲಸ ಮಾಡಿ ಮೇಲಕ್ಕೆ ಬಂದಿರುವ ಸುಖು ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟಿರುವುದು ಕಾಂಗ್ರೆಸ್ ಪಕ್ಷದದಲ್ಲಿ ಆಗಿರುವ ಪರಿವರ್ತನೆಯ ಭಾಗ ಎಂದು ಹೇಳಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ನೆರಳಿನಲ್ಲಿಯೇ ಕಾಂಗ್ರೆಸ್ ಪಕ್ಷವು ಸುದೀರ್ಘ ಕಾಲ ಇತ್ತು. ವೀರಭದ್ರ ಅವರ ಹೆಂಡತಿ ಪ್ರತಿಭಾ ಸಿಂಗ್ ಅವರು ಮುಖ್ಯಮಂತ್ರಿ ಹುದ್ದೆಗೆ ಭಾರಿ ಲಾಬಿ ನಡೆಸಿದ್ದರು. ಆದರೆ, ಇದಕ್ಕೆ ಮನ್ನಣೆ ನೀಡಲಾಗಿಲ್ಲ. ವೀರಭದ್ರ ಅವರ ಭಾವಚಿತ್ರಕ್ಕೆ ಪ್ರಮಾಣವಚನಕ್ಕೂ ಮುನ್ನ ನಾಯಕರು ಪುಷ್ಪ ನಮನ ಸಲ್ಲಿಸಿದರು.

ಹೀಗೆ, ಪಕ್ಷದ ನಾಯಕರ ನಡುವೆ ಯಾವುದೇ ಭಿನ್ನಮತ ಇಲ್ಲ ಎಂಬುದನ್ನು ತೋರಿಸುವುದಕ್ಕೂ ಪ್ರಮಾಣವಚನ ಸಮಾರಂಭವನ್ನು ಬಳಸಿಕೊಳ್ಳಲಾಯಿತು.

ಪ್ರಧಾನಿ ನರೇಂದ್ರ ಮೋದಿ ಅವರು ಸುಖು ಅವರನ್ನು ಅಭಿನಂದಿಸಿದ್ದಾರೆ. ಹಿಮಾಚಲ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರದಿಂದ ಸಾಧ್ಯವಾಗುವ ಎಲ್ಲ ನೆರವು ಒದಗಿಸುವುದಾಗಿ ಭರವಸೆ ನೀಡಿದ್ದಾರೆ.

ದೇಶದ ಮೂರು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಪಕ್ಷದ ಸರ್ಕಾರ ಇದೆ. ಇನ್ನೆರಡು ರಾಜ್ಯಗಳಾದ ರಾಜಸ್ಥಾನ ಮತ್ತು ಛತ್ತೀಸಗಢದ ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್ ಮತ್ತು ಭೂಪೇಶ್ ಬಘೇಲ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡರಾದ ಆನಂದ್ ಶರ್ಮಾ, ಭೂಪಿಂದರ್ ಸಿಂಗ್ ಹೂಡಾ, ಸಚಿನ್ ಪೈಲಟ್, ಹಿಮಾಚಲ ಪ್ರದೇಶಕ್ಕೆ ಕಾಂಗ್ರೆಸ್ ಉಸ್ತುವಾರಿ ರಾಜೀವ್ ಶುಕ್ಲಾ, ಹಿಮಾಚಲ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ಅವರು ಸಮಾರಂಭದಲ್ಲಿ ಇದ್ದರು.

ಹಿಮಾಚಲ ಪ್ರದೇಶದಲ್ಲಿ ಸರ್ಕಾರ ರಚನೆಯು ಪಕ್ಷದಲ್ಲಿ ಹೊಸ ಹುರುಪು ತುಂಬಿದೆ. ಗುಡ್ಡಗಾಡು ಪ್ರದೇಶದಿಂದ ಬೀಸುವ ಬದಲಾವಣೆಯ ಗಾಳಿಯು ಕೆಳಗಿನ ಬಯಲಿನತ್ತ ಸಾಗಲಿದೆ ಎಂದು ಹೂಡಾ ಅವರು ಹೇಳಿದ್ದಾರೆ.



ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಮತ್ತು ಉಪಮುಖ್ಯಮಂತ್ರಿ ಮುಕೇಶ್ ಅಗ್ನಿಹೋತ್ರಿ ಅವರು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರಿಗೆ ಸ್ಮರಣಿಕೆ ನೀಡಿದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಇದ್ದರು ಪಿಟಿಐ ಚಿತ್ರ

ಜನತಂತ್ರದ ಹಬ್ಬ 2022

ಗುಜರಾತ್: 40 ಶಾಸಕರ ಮೇಲೆ ಕ್ರಿಮಿನಲ್ ಪ್ರಕರಣ-ಎಡಿಆರ್

ಅಹಮದಾಬಾದ್ (ಪಿಟಿಐ): 182 ಸದಸ್ಯ ಬಲದ ಗುಜರಾತ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿರುವ ಶಾಸಕರ ಪೈಕಿ 40 ಮಂದಿಯ ಮೇಲೆ ಕ್ರಿಮಿನಲ್ ಪ್ರಕರಣಗಳು ಇವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಮಾಡಿದೆ.

40ರ ಪೈಕಿ 29 ಶಾಸಕರು ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಕೊಲೆ ಯತ್ನ, ಅತ್ಯಾಚಾರದಂತಹ ಆರೋಪಗಳನ್ನು ಇವರು ಹೊತ್ತಿದ್ದಾರೆ. 20 ಮಂದಿ ಬಿಜೆಪಿ, ನಾಲ್ವರು ಕಾಂಗ್ರೆಸ್ ಹಾಗೂ ಇಬ್ಬರು ಆಮ್ ಆದ್ಮಿ ಪಕ್ಷ, ಇಬ್ಬರು ಪಕ್ಷೇತರರಾಗಿ ಆಯ್ಕೆಯಾಗಿದ್ದಾರೆ.

ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣಗಳ ಕುರಿತು ಇವರು ನಾಮಪತ್ರ ಸಲ್ಲಿಕೆ ವೇಳೆ ಮಾಹಿತಿ ನೀಡಿದ್ದರು.2017ರ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ, ಈ ಬಾರಿ ಅಪರಾಧ ಹಿನ್ನೆಲೆಯ ಶಾಸಕರ ಸಂಖ್ಯೆಯಲ್ಲಿ ಇಳಿಕೆಯಾಗಿದೆ.

ಕಳೆದ ಬಾರಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ 47 ಶಾಸಕರು ಆಯ್ಕೆಯಾಗಿದ್ದರು.

ಶಾಸಕರಾದ ಅನಂತ್ ಪಟೇಲ್, ಕಿರೀಟ್ ಪಟೇಲ್ ಹಾಗೂ ಕುಲಭಾಯಿ ರಾಥೋಡ್ ಅವರು ಕೊಲೆಗೆ ಯತ್ನಿಸಿದ ಆರೋಪ ಹೊತ್ತಿದ್ದಾರೆ. ಮಹಿಳೆಯ ಮೇಲೆ ದೌರ್ಜನ್ಯ ಎಸಗಿದ ಆರೋಪವನ್ನು ನಾಲ್ವರು ಶಾಸಕರು ಎದುರಿಸುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ದೆಹಲಿ ಬಿಜೆಪಿ ಅಧ್ಯಕ್ಷ ಆದೇಶ್ ಗುಪ್ತಾ ರಾಜೀನಾಮೆ

ನವದೆಹಲಿ (ಪಿಟಿಐ): ಮಹಾನಗರ ಪಾಲಿಕೆ ಚುನಾವಣೆಯ ಸೋಲಿನ ಹೊಣೆ ಹೊತ್ತು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನಕ್ಕೆ ಆದೇಶ್ ಗುಪ್ತಾ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ. ಘಟಕದ ಉಪಾಧ್ಯಕ್ಷ ವೀರೇಂದ್ರ ಸಚ್‌ದೇವ್ ಅವರಿಗೆ ತಾತ್ಕಾಲಿಕ ಜವಾಬ್ದಾರಿ ನೀಡಲಾಗಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೂಚನೆಯಂತೆ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. 250 ವಾರ್ಡ್‌ಗಳಲ್ಲಿ 134 ವಾರ್ಡ್‌ಗಳನ್ನು ಗೆದ್ದುಕೊಂಡ ಎಎಪಿ, ಪಾಲಿಕೆಯಲ್ಲಿ ಬಿಜೆಪಿಯ 15 ವರ್ಷಗಳ ಆಡಳಿತವನ್ನು ಕೊನೆಗೊಳಿಸಿತ್ತು. ಫಲಿತಾಂಶ ಪ್ರಕಟವಾದ ಕೂಡಲೇ, ಸಂಘಟನಾತ್ಮಕ ಹುದ್ದೆಯಲ್ಲಿ ಬದಲಾವಣೆಗೆ ಆಗ್ರಹ ಕೇಳಿಬಂದಿತ್ತು.

2020ರಲ್ಲಿ ಅಧಿಕಾರ ವಹಿಸಿಕೊಂಡಿದ್ದ ಗುಪ್ತಾ ಅವರ ನೇತೃತ್ವದಲ್ಲಿ ಪಾಲಿಕೆಯ ಕೆಲವು ವಾರ್ಡ್‌ಗಳಿಗೆ ನಡೆದ ಉಪಚುನಾವಣೆಯಲ್ಲಿ ಪಕ್ಷ ಪರಾಭವಗೊಂಡಿತ್ತು. ರಾಜೇಂದ್ರನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲೂ ವೈಫಲ್ಯ ಕಂಡಿತ್ತು. ಹೀಗಾಗಿ ಗುಪ್ತಾ ಅವರ ಮೇಲೆ ತೂಗುಗತ್ತಿ ಇತ್ತು. ಬರುವ ಜನವರಿಯಲ್ಲಿ ಸಂಘಟನಾತ್ಮಕ ಹುದ್ದೆಗಳಿಗೆ ಚುನಾವಣೆ ಪೂರ್ಣಗೊಳ್ಳಲಿದೆ.

ಬಿಜೆಪಿಗೆ ಈಗಲೇ ಹೋಗಲ್ಲ: ಗುಜರಾತ್ ಎಎಪಿ ಶಾಸಕ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದಿಂದ (ಎಎಪಿ) ಆಯ್ಕೆಯಾಗಿರುವ ಶಾಸಕ ಭೂಪತ್ ಭಯಾನಿ ಅವರು ಬಿಜೆಪಿ ಸೇರುತ್ತಾರೆ ಎಂಬ ಊಹಾಪೋಹಗಳು ಹರಿದಾಡುತ್ತಿವೆ. ಆದರೆ ಇದನ್ನು ನಿರಾಕರಿಸಿರುವ ಭಯಾನಿ, ಬಿಜೆಪಿ ಸೇರ್ಪಡೆ ಬಗ್ಗೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಭಾನುವಾರ ಸ್ಪಷ್ಟಪಡಿಸಿದ್ದಾರೆ.

‘ಪ್ರಧಾನಿ ಮೋದಿ ಅವರ ಬಗ್ಗೆ ನನಗೆ ಹೆಮ್ಮೆಯಿದೆ. ಆದರೆ, ಎಎಪಿ ಜತೆ ನನಗೆ ಯಾವುದೇ ಅತೃಪ್ತಿ ಇಲ್ಲ. ಬಿಜೆಪಿ ಸೇರ್ಪಡೆ ಬಗ್ಗೆ ಈವರೆಗೆ ಯಾವುದೇ ನಿರ್ಧಾರವನ್ನು ನಾನು ತೆಗೆದುಕೊಂಡಿಲ್ಲ. ನನ್ನ ಜನರು ಹಾಗೂ ಬೆಂಬಲಿಗರನ್ನು ಭೇಟಿ ಮಾಡಿದ ಬಳಿಕವಷ್ಟೇ ನಿರ್ಧಾರ ತೆಗೆದುಕೊಳ್ಳುತ್ತೇನೆ. ಸದ್ಯಕ್ಕೆ ನಾನು ಎಎಪಿಯಲ್ಲೇ ಇದ್ದೇನೆ’ ಎಂದು ಭೂಪತ್ ಭಯಾನಿ ಅವರು ಹೇಳಿದ್ದಾರೆ.

ಅನಿರ್ದಿಷ್ಟ ಉಪವಾಸ ವಿಫಲ: ಶರ್ಮಿಳಾ ಆಸ್ಪತ್ರೆಗೆ ದಾಖಲು

ಹೈದರಾಬಾದ್ (ಪಿಟಿಐ): ವೈಎಸ್‌ಆರ್ ತೆಲಂಗಾಣ ಪಕ್ಷದ (ವೈಎಸ್‌ಆರ್‌ಟಿಪಿ) ಅಧ್ಯಕ್ಷೆ ವೈ.ಎಸ್. ಶರ್ಮಿಳಾ ಅವರ ಅನಿರ್ದಿಷ್ಟಾವಧಿ ಉಪವಾಸವನ್ನು ವಿಫಲಗೊಳಿಸಿದ ಪೊಲೀಸರು, ಆರೋಗ್ಯ ಹದಗೆಟ್ಟಿದ್ದ ಅವರನ್ನು ಭಾನುವಾರ ಇಲ್ಲಿನ ಆಸ್ಪತ್ರೆಗೆ ದಾಖಲಿಸಿದ್ದಾರೆ.

ರಾಜ್ಯದಾದ್ಯಂತ ತಮ್ಮ ‘ಪಾದಯಾತ್ರೆ’ಗೆ ಅನುಮತಿ ನಿರಾಕರಿಸಿದ್ದನ್ನು ವಿರೋಧಿಸಿ ಶರ್ಮಿಳಾ ಅವರು ತಮ್ಮ ಪಕ್ಷದ ಕೇಂದ್ರ ಕಚೇರಿ ಯಲ್ಲಿ ಶುಕ್ರವಾರದಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು.

‘ನೆರೆದಿದ್ದ ಮಾಧ್ಯಮ ಪ್ರತಿನಿಧಿಗಳು, ಪಕ್ಷದ ಮುಖಂಡರು ಮತ್ತು ಇತರ ಪದಾಧಿಕಾರಿಗಳನ್ನು ಉಪವಾಸ ನಡೆಸುತ್ತಿದ್ದ ಸ್ಥಳದಿಂದ ತೆರವುಗೊಳಿಸುವಂತೆ ಪೊಲೀಸರು ಒತ್ತಾಯಿಸಿದರು. ಬಳಿಕ ಶರ್ಮಿಳಾ ಅವರ ಉಪವಾಸಕ್ಕೆ ಬಲವಂತವಾಗಿ ತಡೆಯೊಡ್ಡಿ, ಮಧ್ಯಾಹ್ನ 1 ಗಂಟೆಯ ವೇಳೆಗೆ ಅವರನ್ನು ಆಸ್ಪತ್ರೆಗೆ ದಾಖಲಿಸಿದರು’ ಎಂದು ಪಕ್ಷ ತಿಳಿಸಿದೆ.

‘ಶರ್ಮಿಳಾ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಯಾಗುವ ನಿರೀಕ್ಷೆ ಇದೆ’ ಎಂದು ಖಾಸಗಿ ಆಸ್ಪತ್ರೆಯ ವರದಿಯು ತಿಳಿಸಿದೆ.

‘ಪೆನ್ನಾರ್ ನದಿ ನೀರು ಬಳಕೆ ವಿವಾದ: ನ್ಯಾಯಮಂಡಳಿ ರಚನೆ ಸಾಧ್ಯತೆ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮತ್ತು ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಬಳಕೆ ವಿವಾದ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ನ್ಯಾಯಮಂಡಳಿ ಸ್ಥಾಪಿಸುವ ಸಾಧ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ.

ಈ ವಿವಾದವನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳುವಂತೆ ಎರಡೂ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚಿಸುವ ಸಾಧ್ಯತೆ ಇದೆ ಎಂದೂ ಹೇಳಿದೆ.

‘ಈ ನದಿಯ ನೀರಿನ ಪ್ರಮಾಣವು ಕಡಿಮೆ ಇದ್ದು, ಈ ಕುರಿತಂತೆ ಯಾವುದೇ ವಿವಾದವಿದ್ದರೂ ಎರಡೂ ರಾಜ್ಯಗಳು ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಬಹುದು. ಹಿಗಾಗಿ ಜಲಶಕ್ತಿ ಸಚಿವಾಲಯವು ನ್ಯಾಯಮಂಡಳಿ ರಚಿಸುವ ಪರವಾಗಿಲ್ಲ’ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ಹಿಂದೆ ಎರಡು ಸಭೆಗಳನ್ನು ನಡೆಸಿದ್ದರೂ ವಿವಾದವನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ವಿವಾದ ಪರಿಹಾರಕ್ಕೆ ಎರಡೂ ರಾಜ್ಯಗಳಿಗೂ ನಾವು ಇನ್ನಷ್ಟು ಅವಕಾಶ ನೀಡಲಿದ್ದೇವೆ’ ಎಂದೂ ಹೇಳಿದ್ದಾರೆ.

‘ಸಮಸ್ಯೆ ಪರಿಹಾರಕ್ಕಾಗಿ ನ್ಯಾಯ ಮಂಡಳಿ ಸ್ಥಾಪಿಸುವ ವಿಚಾರವು ತುಂಬಾ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿದೆ’ ಎಂದೂ ವಿವರಿಸಿದ್ದಾರೆ.

ಈ ಕುರಿತು ಜಲಶಕ್ತಿ ಸಚಿವಾಲಯವು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಈಚೆಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು. ಅಂತರರಾಜ್ಯ ಜಲವಿವಾದ ನ್ಯಾಯಮಂಡಳಿ ಸ್ಥಾಪಿಸಬೇಕೆಂದು ಕೋರಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿತ್ತು.

ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು ಎಂದು ಕರ್ನಾಟಕ ವಾದ ಮಂಡಿಸಿತ್ತು.

ಕರ್ನಾಟಕವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಕೋಲಾರ ಜಿಲ್ಲೆಯ ಯರಗೋಳ ಗ್ರಾಮದ ಬಳಿ ಅಣೆಕಟ್ಟು (ಕೋಲಾರ, ಬಂಗಾರಪೇಟೆ, ಮಾಲೂರಿನ ಹಲವು ಹಳ್ಳಿಗಳಿಗೆ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ) ನಿರ್ಮಿಸುತ್ತಿದೆ. ₹240 ಕೋಟಿ ವೆಚ್ಚದಲ್ಲಿ ಅಣೆಕಟ್ಟು ನಿರ್ಮಿಸಲು ಅಗತ್ಯವಿರುವ ಎಲ್ಲ ಅನುಮತಿಯನ್ನು ಕರ್ನಾಟಕ ಪಡೆದುಕೊಂಡಿದೆ.

ಮಾರ್ಕಂಡೇಯ ನದಿಯು ಪೆನ್ನಾರ್ ನದಿಯ ಉಪನದಿಯಾಗಿರುವುದರಿಂದ ಕರ್ನಾಟವು ಅಣೆಕಟ್ಟು ನಿರ್ಮಿಸಿದರೆ ನದಿಯ ಕೆಳಭಾಗಕ್ಕೆ ನೀರಿನ ನೈಸರ್ಗಿಕ ಹರಿವಿಗೆ ತಡೆಯುಂಟಾಗುತ್ತದೆ ಎಂಬುದು ಯೋಜನೆಯನ್ನು ವಿರೋಧಿಸುತ್ತಿರುವ ತಮಿಳುನಾಡಿನ ವಾದವಾಗಿದೆ. ಕೃಷಿ ಚಟುವಟಿಕೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ತಮಿಳುನಾಡಿನ ಜನರು ಪೆನ್ನಾರ್ ನದಿಯನ್ನು ಅವಲಂಬಿಸಿದ್ದಾರೆ ಎಂದೂ ಹೇಳಿದೆ. ಪೆನ್ನಾರ್ ನದಿಯ ಉಪ ನದಿಗೆ ಜಲಾಶಯ ನಿರ್ಮಿಸುವುದು ಅಂತರ ರಾಜ್ಯ ಜಲವಿವಾದ ಕಾಯ್ದೆಯ ಉಲ್ಲಂಘನೆ ಎಂದೂ ತಮಿಳುನಾಡು ಪ್ರತಿಪಾದಿಸಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾರ್ಯಾಚರಣೆ & ನಿರ್ವಹಣೆ)
6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂಖ್ಯೆ.: ಬೆಂಜಮಂ/ಮುಅಕಾ(ಕಾ&ನಿ)ಟಿಇ/ತಾಂಸ–01/01/2021/988/2022–23		ದಿನಾಂಕ: 07.12.2022
1.	3 ವರ್ಷಗಳ ಅವಧಿಗೆ ಕಾವೇರಿ ನೀರು ಸರಬರಾಜು ಯೋಜನೆ ಹಂತ - IV, ಘಟ್ಟ–1ರ ಟಿ.ಕೆ ಹಳ್ಳಿಯಲ್ಲಿನ 400 ಎಂಎಲ್‌ಡಿ ನೀರು ಶುದ್ಧೀಕರಣ ಘಟಕದ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿ.	ರೂ. 1134.90 ಲಕ್ಷಗಳು / ರೂ. 13.40 ಲಕ್ಷಗಳು
ಸಂಖ್ಯೆ.: ಬೆಂಜಮಂ/ಮುಅ(ಕಾ–ಕಾ&ನಿ)/ತಾಂಸ01/01/2021/991/2022–23		ದಿನಾಂಕ: 07.12.2022
2.	3 ವರ್ಷಗಳ ಅವಧಿಗೆ ಕಾವೇರಿ ನೀರು ಸರಬರಾಜು ಯೋಜನೆ ಹಂತ–4, ಘಟ್ಟ–2ರ ಹಾರೋಹಳ್ಳಿ & ತಾತಗುಣಿಯಲ್ಲಿನ 220ಕೆವಿ/66ಕೆವಿ/6.6ಕೆ.ವಿ ಉಪವಿಭಾಗಗಳು ಒಳಗೊಂಡಂತೆ ಟಿ.ಕೆ ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿನ 500ಎಂಎಲ್‌ಡಿ ಪಂಪಿಂಗ್ ಸ್ಟೇಷನ್‌ಗಳ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿ.	ರೂ. 2664.30 ಲಕ್ಷಗಳು / ರೂ. 31.44 ಲಕ್ಷಗಳು

ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10.01.2023 ರಂದು ಮಧ್ಯಾಹ್ನ 3.00 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 12.01.2023ರ ಸಂಜೆ 04.00 ಗಂಟೆಗೆ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಕಾವೇರಿ–ಕಾ&ನಿ)

DIPR/CP/3471/Zen/2022-23

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_BACKHOE_LOADER _JCB_3DX_JCB
YOM – 2021
Reg No – KA40N3101
2) CB_BACKHOE_LOADER _JCB_3DX_JCB
YOM – 2020
Reg No – KA13Z1954
3) CB_MARUTI SUPER CARRY
YOM – 2019
Reg No – KA04AC2443
4) CB_TATA ACE MEGA
YOM – 2017
Reg No – KA51AB1418
5) CB_TATA LPT 1518 FULLY BUILT GOODS
YOM – 2017
Reg No – KA02AG4839
6) CB_PC300_Exc
YOM – 2015
Reg No – N300369
Min Reserve Price – 1150000/

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 12.12.2022

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249



❦ ಸುಭಾಷಿತ ❦

ಹೊಗಳಿಕೆಯ ಮಾಲಿನ್ಯವನ್ನು ತೊಡೆದುಹಾಕಲು ಇರುವ ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.
-ಆಲ್ಬರ್ಟ್ ಐನ್‌ಸ್ಟೀನ್

ಐಒಎ ಚುಕ್ಕಾಣಿ ಉಷಾ ಕೈಗೆ ಎದುರಿಗಿವೆ ಕಠಿಣ ಸವಾಲು

ಭಾರತದ ಕ್ರೀಡಾಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದವರು ಪಿ.ಟಿ. ಉಷಾ. ಅಥ್ಲೀಟ್ ಮತ್ತು ತರಬೇತುದಾರರಾಗಿ ಅವರ ಕೊಡುಗೆ ಅನನ್ಯವಾದುದು. ಈ ಕ್ರೀಡಾತಾರೆ ಈಗ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. 95 ವರ್ಷಗಳ ಇತಿಹಾಸವಿರುವ ಸಂಸ್ಥೆಯ ಅತ್ಯುನ್ನತ ಸ್ಥಾನಕ್ಕೆ ಆಯ್ಕೆಯಾಗಿರುವ ಮೊದಲ ಮಹಿಳೆ ಎಂಬ ಹೆಗ್ಗಳಿಕೆಯೂ ಅವರದ್ದು. ಅದೂ ಅವಿರೋಧ ಆಯ್ಕೆ. ಇದರೊಂದಿಗೆ ಭಾರತದ ಕ್ರೀಡಾರಂಗದಲ್ಲಿ ನವಯುಗವೊಂದು ಆರಂಭವಾಗುವ ನಿರೀಕ್ಷೆ ಮೂಡಿದೆ. 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಚಿನ್ನ ಗೆದ್ದ ನಂತರ ಭವಿಷ್ಯದಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಇನ್ನೂ ದೊಡ್ಡ ಸಾಧನೆಯ ಭರವಸೆ ಮೂಡಿದೆ. ಇದೇ ಹೊತ್ತಿನಲ್ಲಿ ಉಷಾ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಆಶಾದಾಯಕ ಬೆಳವಣಿಗೆ. ಐಒಎ ಮತ್ತು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಪದಾಧಿಕಾರಿಗಳು ಮತ್ತು ಸದಸ್ಯರಲ್ಲಿ ಕ್ರೀಡಾಪಟುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು ಎಂಬ ನಿಯಮ ಜಾರಿಯಾಗಿರುವುದರಿಂದ ಉಷಾ ಅವರಂತಹ ಮೇರು ಅಥ್ಲೀಟ್‌ಗೆ ಅಧ್ಯಕ್ಷೆಯಾಗುವ ಅವಕಾಶ ಸಿಕ್ಕಿದೆ. ಆದರೆ ಅವರ ಮುಂದೆ ಹತ್ತಾರು ಕಠಿಣ ಸವಾಲುಗಳ ಹಾದಿ ಇದೆ.

ಕ್ರಿಕೆಟ್ ಆಕರ್ಷಣೆಯೇ ಹೆಚ್ಚಿರುವ ಈ ದೇಶದಲ್ಲಿ ಮಕ್ಕಳನ್ನು ಅಥ್ಲೆಟಿಕ್ಸ್‌ನತ್ತ ಸೆಳೆಯುವಂತಹ ವ್ಯವಸ್ಥೆಯೊಂದು ರೂಪುಗೊಳ್ಳಬೇಕಾದ ಅಗತ್ಯವಿದೆ

ಕೆಲವು ವರ್ಷಗಳಿಂದ ಪಟ್ಟಭದ್ರರಿಂದ ಆಗಿರುವ ಅವ್ಯವಸ್ಥೆಗಳನ್ನು ಸರಿಪಡಿಸುವುದರ ಜೊತೆಗೆ ಭಾರತದ ಕ್ರೀಡಾರಂಗದ ಭವಿಷ್ಯದ ಬೆಳವಣಿಗೆಗೆ ಅಡಿಪಾಯ ಹಾಕುವ ಗುರುತರ ಹೊಣೆ ಅವರ ಮೇಲೆ ಇದೆ. ಐಒಎ ಅಧೀನದಲ್ಲಿ ಬರುವ ಕೆಲವು ಕ್ರೀಡಾ ಫೆಡರೇಷನ್‌ಗಳು ರಾಷ್ಟ್ರೀಯ ಕ್ರೀಡಾ ನೀತಿ ಜಾರಿಗೊಳಿಸಲು ವಿರೋಧ ವ್ಯಕ್ತಪಡಿಸುತ್ತಲೇ ಇವೆ. ಅಲ್ಲದೆ ಫೆಡರೇಷನ್‌ಗಳಲ್ಲಿ ಸ್ವಜನಪಕ್ಷಪಾತ, ಭ್ರಷ್ಟಾಚಾರದೊಂದಿಗೆ ಪಟ್ಟಭದ್ರರ ಬಿಗಿಹಿಡಿತ ಇದೆ. ಅವುಗಳೆಲ್ಲವನ್ನೂ ಕಾನೂನಿನ ನೆರವಿನೊಂದಿಗೆ ಪರಿಹರಿಸಬೇಕಿದೆ. ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ಕ್ರೀಡೆಗಳಿಗೂ ಕೇಂದ್ರ ಸರ್ಕಾರ ಮತ್ತು ಖಾಸಗಿ ಪ್ರಾಯೋಜಕರಿಂದ ಹಣದ ಹರಿವು ಹೆಚ್ಚಿದೆ. ಇದರಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕ್ರೀಡಾಪಟುಗಳು ಗಮನಾರ್ಹ ಸಾಧನೆ ಮಾಡುತ್ತಿದ್ದಾರೆ. ಆದರೆ ಇದು ಸಾಲದು. ಈಗಲೂ ತಂಡಗಳ ಆಯ್ಕೆ ಮತ್ತು ತರಬೇತಿ ವಿಷಯಗಳಲ್ಲಿ ತಾರತಮ್ಯಗಳಾಗುತ್ತಿರುವ ಆರೋಪಗಳಿವೆ. ಹೋದ ವರ್ಷ 'ವಾಡಾ' (ವಿಶ್ವ ಉದ್ದೀಪನ ಮದ್ದು ತಡೆ ಸಂಸ್ಥೆ) ಪ್ರಕಟಿಸಿರುವ ನಿಯಮ ಉಲ್ಲಂಘನೆಯ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಇದು ಕ್ರೀಡಾಕ್ಷೇತ್ರಕ್ಕೆ ಅತ್ಯಂತ ಕಳವಳಕಾರಿ ಮತ್ತು ಅವಮಾನಕರ ಸಂಗತಿ. ಉದ್ದೀಪನ ಮದ್ದು ಪರೀಕ್ಷೆಗೆ ಅತ್ಯಾಧುನಿಕ ಪ್ರಯೋಗಾಲಯಗಳ ಸ್ಥಾಪನೆ ಹಾಗೂ ಕ್ರೀಡಾಪಟುಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೆ ಕ್ರೀಡಾ ಇಲಾಖೆ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರದ ಮೇಲೆ ಒತ್ತಡ ಹಾಕುವ ಕೆಲಸ ಉಷಾ ಅವರಿಂದ ಆಗಬೇಕಿದೆ. ಮಹಿಳಾ ಕ್ರೀಡಾಪಟುಗಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಲಿಂಗ ತಾರತಮ್ಯ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಇವುಗಳನ್ನು ತೊಡೆದುಹಾಕುವ ಸವಾಲೂ ಅವರ ಮುಂದಿದೆ.

ಐಒಎಯು ತನ್ನ ಅಧೀನದಲ್ಲಿರುವ ರಾಜ್ಯ ಒಲಿಂಪಿಕ್ ಸಂಸ್ಥೆಗಳಿಗೂ ಕಾಯಕಲ್ಪ ನೀಡುವ ಅಗತ್ಯವಿದೆ. ಅಥ್ಲೆಟಿಕ್ಸ್‌ನ ವಿವಿಧ ವಿಭಾಗಗಳಲ್ಲಿ ಕ್ರೀಡೆಗಳನ್ನು ಆಯ್ಕೆ ಮಾಡಿಕೊಳ್ಳುವ ಬಹಳಷ್ಟು ಕ್ರೀಡಾಪಟುಗಳು ಗ್ರಾಮೀಣ ಮತ್ತು ಬಡ ಕುಟುಂಬಗಳಿಂದಲೇ ಬಂದವರಾಗಿರುತ್ತಾರೆ. ಕ್ರಿಕೆಟ್ ಆಕರ್ಷಣೆಯೇ ಹೆಚ್ಚಿರುವ ಈ ದೇಶದಲ್ಲಿ ಮಕ್ಕಳನ್ನು ಅಥ್ಲೆಟಿಕ್ಸ್‌ನತ್ತ ಸೆಳೆಯುವಂತಹ ವ್ಯವಸ್ಥೆಯೊಂದು ರೂಪುಗೊಳ್ಳಬೇಕಾದ ಅಗತ್ಯವಿದೆ. ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡೆಗಳನ್ನು ಆಯ್ಕೆ ಮಾಡಿಕೊಳ್ಳುವ ಮಕ್ಕಳಿಗೆ ವೃತ್ತಿಪರ ಭವಿಷ್ಯ ಲಭಿಸುವಂತಾಗಬೇಕು. ಆಗ ಮಾತ್ರ ಅಮೆರಿಕ, ಚೀನಾ ಮತ್ತು ಯುರೋಪ್ ದೇಶಗಳ ಮಾದರಿಯಲ್ಲಿ ಭಾರತದ ಕ್ರೀಡಾ ಕ್ಷೇತ್ರ ಬೆಳೆಯಲು ಸಾಧ್ಯ. ಬಡ ಕುಟುಂಬದಿಂದಲೇ ಬಂದ ಉಷಾ ಅವರು 1984ರ ಲಾಸ್ ಏಂಜಲೀಸ್ ಒಲಿಂಪಿಕ್ ಕೂಟದ 400 ಮೀಟರ್ಸ್ ಹರ್ಡಲ್ಸ್ ಓಟದಲ್ಲಿ ನಾಲ್ಕನೇ ಸ್ಥಾನ ಗಳಿಸಿ ದಂತಕಥೆಯಾದರು. ಆ ಕಾಲದಲ್ಲಿ ಇದ್ದ ಕನಿಷ್ಠ ಸೌಲಭ್ಯಗಳು ಮತ್ತು ಅವಕಾಶಗಳಲ್ಲಿಯೇ ಅಂತಹದೊಂದು ಸಾಧನೆ ಮಾಡಿದ್ದು ಅವರ ಹೆಗ್ಗಳಿಕೆ. ಅಂದು ಅವರು ಕೂದಲೆಳೆಯ ಅಂತರದಲ್ಲಿ ಪದಕವಂಚಿತರಾಗಿದ್ದರು. ಇದೀಗ ಒಲಿಂಪಿಕ್ಸ್‌ನಲ್ಲಿ ಅಂತಹ ಹತ್ತಾರು ಪದಕಗಳನ್ನು ಜಯಿಸಿ ಬರುವ ಪ್ರತಿಭಾವಂತರನ್ನು ಸಿದ್ಧಗೊಳಿಸುವ ಅವಕಾಶವಿರುವ ಅಧಿಕಾರ ಅವರಿಗೆ ಲಭಿಸಿದ್ದು ಅಪಾರ ನಿರೀಕ್ಷೆ ಮೂಡಿಸಿದೆ. ಅವರಿಗೆ ಮಹಾಕಾರ್ಯದರ್ಶಿ ರಾಜೀವ್ ಮೆಹ್ತಾ ಮತ್ತು ಉಳಿದ ಪದಾಧಿಕಾರಿಗಳು ಬೆಂಬಲವಾಗಿ ನಿಲ್ಲಬೇಕಾದ ಅಗತ್ಯವೂ ಇದೆ.

ದಿನದ ಟ್ವೀಟ್

ಹೂಡಿಕೆ–ವರ್ತನೆ

ನಮಗೆ ಹೂಡಿಕೆ ಮಾಡಲು ಮೂರು ಅಥವಾ ನಾಲ್ಕು ದಶಕಗಳಷ್ಟು ಸಮಯಾವಕಾಶ ಇರುತ್ತದೆ. ಆದರೂ ನಾವು ಮಾತ್ರ ಹೂಡಿಕೆ ಮಾಡಲು ಮೂರು ಅಥವಾ ನಾಲ್ಕು ವರ್ಷಗಳಷ್ಟೇ ಇವೆ ಎಂಬಂತೆ ವರ್ತಿಸುತ್ತೇವೆ.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ರಾಹುಲ್ ಗಾಂಧಿ ಅವರ ಉದ್ದೇಶ ಭಾರತವನ್ನು ಜೋಡಿಸುವುದಲ್ಲ, ಮತ್ತೆ ಕುರ್ಚಿ ಪಡೆಯುವುದೇ ಆಗಿದೆ. ಕುರ್ಚಿ ಇಲ್ಲದಿದ್ದರೆ ಗಾಂಧಿ ಪರಿವಾರವು ಚಡಪಡಿಸುತ್ತದೆ– ನೀರಿನಿಂದ ಹೊರಬಂದ ಮೀನಿನಂತೆ. ಅಷ್ಟಕ್ಕೂ, ಹಿಂದೂಸ್ಥಾನವು ಅವರ ಕುಟುಂಬದ ಜಹಗೀರಾಗಿದೆ.

ಮಾರ್ಕಂಡೇಯ ಕಾಟ್ಜು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

25 ವರ್ಷಗಳ ಹಿಂದೆ

ಶುಕ್ರವಾರ, 12-12-1997

● **ಮತೀಯ ಸಾಮರಸ್ಯ ಮೂಡಿಸುವ ಸಾಹಿತ್ಯಕ್ಕೆ ಕರೆ**

ಅಬ್ಬಕ್ಕರಾಣಿ ನಗರ (ಮಂಗಳೂರು) ಡಿಸೆಂಬರ್ 11– ಕನ್ನಡ ನಾಡಿನ ಪ್ರತೀ ಮನೆಯಲ್ಲಿ ಒಂದು ಚಿಕ್ಕ ಪುಸ್ತಕ ಭಂಡಾರವಿರುವಂಥ ಸಾಹಿತ್ಯ ಸಾಂಸ್ಕೃತಿಕ ವ್ಯವಸ್ಥೆಗೆ ನೈತಿಕ ಜನಾಂದೋಲನ, ರಾಜ್ಯದ ಮಕ್ಕಳಿಗೆ ಐದನೆಯ ತರಗತಿಯ ವರೆಗೆ ಮಾತೃಭಾಷೆಯಲ್ಲಿ ಶಿಕ್ಷಣ ಕಡ್ಡಾಯ ಮಾಡುವ ಕಟ್ಟುನಿಟ್ಟಾದ ಸರ್ಕಾರಿ ಕ್ರಮ, ಮಾನವೀಯತೆ ಮೂಡಿಸುವ ಪಠ್ಯಕ್ರಮ, ಸಮಾಜದಲ್ಲಿ ಮತೀಯ ಸಾಮರಸ್ಯ ಮೂಡಿಸಲು ಸಾಹಿತ್ಯದಲ್ಲಿ ಹೊಸ ಪ್ರಯೋಗ ಮತ್ತು ಮಹಾಜನ ವರದಿ ಜಾರಿಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ– ಇವುಗಳಿಗೆ ಸಂಕಲ್ಪ ತೊಡಬೇಕೆಂದು ಅಖಿಲ ಭಾರತ ಅರವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಕಯ್ಯಾರ ಕಿಞ್ಞಣ್ಣ ರೈ ಅವರು ಕನ್ನಡ ಜನತೆ ಮತ್ತು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿದರು.

'ಭಾರತಾಂತರ್ಗತ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ'ಗಳ ವಿಹಂಗಮಾವಲೋಕನದ ಬೆಳಕಿನಲ್ಲಿ ಸಮಕಾಲೀನ ಬದುಕಿನ ಜ್ವಲಂತ ಸಮಸ್ಯೆಗಳನ್ನು ವಿಶ್ಲೇಷಿಸಿದ ಅವರು, ಕನ್ನಡಿಗರು ಸಮಗ್ರ ಕರ್ನಾಟಕದಲ್ಲಿ ವಿಕೇಂದ್ರೀಕೃತ ರೀತಿಯಲ್ಲಿ ಮಾಡಬೇಕಾದ ಕೆಲವೊಂದು ಸಾಹಿತ್ಯಕ ಕಾರ್ಯಕಲಾಪಗಳ ಸೂಚನೆಗಳನ್ನು ಸಮ್ಮೇಳನದ ಮುಂದೆ ಮಂಡಿಸಿದರು.

● **ಉತ್ತಮ ವ್ಯಕ್ತಿಗಳಿಗೆ ಟಿಕೆಟ್: ಪಕ್ಷಗಳಿಗೆ ರಾಷ್ಟ್ರಪತಿ ಸಲಹೆ**

ನವದೆಹಲಿ, ಡಿಸೆಂಬರ್ 11– 'ಎಲ್ಲ ರಾಜಕೀಯ ಪಕ್ಷಗಳು ಉತ್ತಮ ಅಭ್ಯರ್ಥಿಗಳನ್ನೇ ಚುನಾವಣಾ ಕಣಕ್ಕೆ ಇಳಿಸಬೇಕು; ರಾಜಕೀಯದಲ್ಲಿ ಅಪರಾಧಿಗಳು ಪ್ರವೇಶಿಸುವುದನ್ನು ತಡೆಯಬೇಕು' ಎಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ಸಲಹೆ ನೀಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 12-12-1972

● **ಸರ್ವಾನುಮತದಿಂದ ಎಂ.ಪಿ.ಸಿ.ಸಿ. ಅಧ್ಯಕ್ಷರ ಆಯ್ಕೆ ಖಚಿತ**

ಬೆಂಗಳೂರು, ಡಿಸೆಂಬರ್ 11– ಇಂದು ರಾತ್ರಿ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್. ರಂಗನಾಥ್ ನಡುವೆ ನಡೆದ ತೆರೆದ ಮನಸ್ಸಿನ ಮಾತುಕತೆಯಿಂದಾಗಿ ಎಂ.ಪಿ.ಸಿ.ಸಿ. ನೂತನ ಅಧ್ಯಕ್ಷರ ಚುನಾವಣೆ ಸರ್ವಾನುಮತದಿಂದ ಆಗುವುದು ಖಚಿತವಾಗಿದೆ.

ರಂಗನಾಥ್ ಅವರು ರಾತ್ರಿ ಮುಖ್ಯಮಂತ್ರಿಗಳನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿ ಸುಮಾರು 50 ನಿಮಿಷ ಕಾಲ ಮಾತುಕತೆ ನಡೆಸಿದರು.

● **ರಾಜ್ಯದಲ್ಲಿ ತೀವ್ರ ಬರಗಾಲ: 'ಹಸಿವಿನಿಂದ ಐವರ ಸಾವು'**

ನವದೆಹಲಿ, ಡಿಸೆಂಬರ್ 11– ಮೈಸೂರು ರಾಜ್ಯದ ಕಲ್ಬುರ್ಗಿ, ಬೀದರ್, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಭೀಕರವಾಗಿದ್ದು, ಐವರು ಹಸಿವಿನಿಂದ ಸತ್ತಿದ್ದಾರೆಂದು ಕಾಂಗ್ರೆಸ್ಸಿನ ಜಗನ್ನಾಥ ಮಿಶ್ರಾ ಅವರು ಇಂದು ಲೋಕಸಭೆಯಲ್ಲಿ ಆಪಾದಿಸಿದರು.

ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಇಂಥ ವರದಿಯೇನೂ ಬಂದಿಲ್ಲವೆಂದು ಕೃಷಿ ಶಾಖೆ ರಾಜ್ಯ ಸಚಿವ ಎ.ಸಿ. ಶಿಂಧೆಯವರು ಹೇಳಿದರು.

ನಿರ್ವಾತ ಸ್ಥಿತಿಯನ್ನು ನಿಸರ್ಗವೇ ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಬಿಜೆಪಿ ಮರೆತಿರುವಂತಿದೆ

ಕಾಂಗ್ರೆಸ್ ಅವಸಾನ ದೇಶಹಿತಕ್ಕೆ ಪೂರಕವೇ?

ಸೂರ್ಯ–ನಮಸ್ಕಾರ

ಎ. ಸೂರ್ಯಪ್ರಕಾಶ್

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸಾಧಿಸಿರುವ ಭರ್ಜರಿ ಜಯ ಹಾಗೂ ಅದರ ಎದುರಾಳಿಗಳು ಸಂಪೂರ್ಣವಾಗಿ ಸೋತಿರುವುದು ಬಿಜೆಪಿಯ ಬೆಂಬಲಿಗರನ್ನೂ ಆಶ್ಚರ್ಯಗೊಳಿಸಿದೆ. ಗುಜರಾತ್‌ನಲ್ಲಿ ಬಿಜೆಪಿ ಶೇಕಡ 52.50ರಷ್ಟು ಮತಗಳನ್ನು ಪಡೆದಿರುವುದು ಸಾಟಿಯಿಲ್ಲದ್ದು. ಅದು ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆಯು ತವರು ರಾಜ್ಯದಲ್ಲಿ ಹೆಚ್ಚುತ್ತಿರುವುದನ್ನು ತೋರಿಸುತ್ತದೆ. ಹಿಮಾಚಲ ಪ್ರದೇಶದಲ್ಲಿ ಮತದಾರರು ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಿದ್ದಾರೆ. ದೆಹಲಿ ಮಹಾನಗರ ಪಾಲಿಕೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಅಧಿಕಾರ ಹಿಡಿದಿದೆ.

ಈ ಮೂರೂ ಪಕ್ಷಗಳು ಸಂಭ್ರಮಾಚರಣೆಯಲ್ಲಿ ತೊಡಗಿವೆ. ಚುನಾವಣಾ ಫಲಿತಾಂಶವು ಮೂರೂ ಪಕ್ಷಗಳಿಗೆ ಮಹತ್ವದ ಸಂದೇಶ ಒಳಗೊಂಡಿದೆ. ಹೀಗಾಗಿ, ಇದು ಅವಲೋಕನದ ಸಮಯವೂ ಹೌದು. 'ಕಾಂಗ್ರೆಸ್ ಮುಕ್ತ ಭಾರತ' ಎಂಬ ತನ್ನ ಘೋಷಣೆಯು ಎಷ್ಟು ಸಾರ್ಥಕವಾದುದು ಎಂಬುದನ್ನು ಗಂಭೀರವಾಗಿ ಮರುಪರಿಶೀಲಿಸಬೇಕು. ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ಸೋಲಿಸಿಹಾಕುವುದು ಪಕ್ಷದ ಹಿತಾಸಕ್ತಿಗೆ ಪೂರಕವೇ? ಅದಕ್ಕಿಂತ ಹೆಚ್ಚಾಗಿ, ದೇಶದ ಅತ್ಯಂತ ಹಳೆಯ ಪಕ್ಷವು ಅವಸಾನ ಹೊಂದುವುದು ದೇಶದ ಹಿತಾಸಕ್ತಿಗೆ ಪೂರಕವಾಗಿದೆಯೇ?

ಹಲವು ವಿಷಯಗಳಲ್ಲಿ ಕಾಂಗ್ರೆಸ್‌ನ ಸಾಧನೆ ಕಳಪೆಯಾಗಿದೆ. ಕಾಂಗ್ರೆಸ್ಸಿನ ನಕಲಿ ಧರ್ಮನಿರಪೇಕ್ಷ ನೀತಿಗಳು, ಭ್ರಷ್ಟಾಚಾರ, ಕಳಪೆ ಆಡಳಿತದ ಬಗ್ಗೆ ಜನ ಹೊಂದಿರುವ ಅಸಮಾಧಾನವನ್ನು ಬಿಜೆಪಿಯು ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ತನ್ನ ಏಳಿಗೆಗಾಗಿ ಬಳಸಿಕೊಂಡಿತು. ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ಇಲ್ಲವಾಗಿಸುವುದಾಗಿ ಭರವಸೆ ನೀಡಿತು. ಆರಂಭದಲ್ಲಿ ಇದು ಬಿಜೆಪಿಯ ಪಾಲಿಗೆ ಗಂಭೀರವಾದ ಗುರಿಯಾಗಿಯೇ ಕಂಡಿತ್ತು. ಆದರೆ, ನಿರ್ವಾತ ಸ್ಥಿತಿಯನ್ನು ನಿಸರ್ಗವೇ ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಬಿಜೆಪಿ ಮರೆತಿರುವಂತೆ ಕಾಣುತ್ತಿದೆ. ಪ್ರಧಾನ ವಿರೋಧ ಪಕ್ಷದ ಸ್ಥಾನವನ್ನು ಕಾಂಗ್ರೆಸ್ ತೆರವುಗೊಳಿಸುತ್ತಿರುವ ಹೊತ್ತಿನಲ್ಲಿ ಹೆಚ್ಚು ಅಪಾಯಕಾರಿಯಾದ ಎಎಪಿ ಆ ಸ್ಥಾನವನ್ನು ತುಂಬಲಾರಂಭಿಸಿದೆ.

ಇದರಲ್ಲಿ ಸಮಸ್ಯೆ ಏನು ಎಂಬ ಪ್ರಶ್ನೆ ಮೂಡಬಹುದು. ಎಎಪಿ ಚುನಾವಣೆಗಳ ಹೊತ್ತಿನಲ್ಲಿ ಮಾಡುತ್ತಿರುವ ಜವಾಬ್ದಾರಿರಹಿತ ಭರವಸೆಗಳಲ್ಲಿ ಸಮಸ್ಯೆ ಇದೆ. ಅಧಿಕಾರಕ್ಕೆ ಬಂದರೆ 18 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹೆಣ್ಣುಮಕ್ಕಳಿಗೆ ತಿಂಗಳಿಗೆ ₹ 1,000 ನೀಡುವುದಾಗಿ ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಎಎಪಿ ಭರವಸೆ ನೀಡಿತ್ತು. ಲಂಚದಂತೆ ಕಾಣುತ್ತಿರುವ ಈ ಕೊಡುಗೆಯ ಹಿಂದಿನ ತರ್ಕವೇನು? ಇದರಿಂದ ರಾಜ್ಯದ ಬೊಕ್ಕಸದ ಮೇಲೆ ಆಗುವ ಪರಿಣಾಮವೇನು? ಪಂಜಾಬ್‌ನಲ್ಲಿ ಮಾಡಿದ ರೀತಿಯಲ್ಲೇ, ಗುಜರಾತ್‌ನ ಪ್ರತೀ ಮನೆಗೆ 300 ಯುನಿಟ್ ಉಚಿತ ವಿದ್ಯುತ್, ರೈತರಿಗೆ ಉಚಿತ ನೀರು, ಸರಪಂಚರಿಗೆ ₹ 10 ಸಾವಿರ ನಿಶ್ಚಿತ ಸಂಬಳದ ಭರವಸೆ ನೀಡಿತ್ತು. ಪಂಜಾಬ್‌ನಲ್ಲಿ ಪ್ರತೀ ಮನೆಗೆ ಉಚಿತ ವಿದ್ಯುತ್ ಒದಗಿಸುವುದರಿಂದ ಬೊಕ್ಕಸದ ಮೇಲೆ ₹ 1,800 ಕೋಟಿ ಹೊರೆಯಾಗುತ್ತದೆ. ಆ ರಾಜ್ಯದ ಮೇಲಿರುವ ಸಾಲದ ಹೊರೆ ₹ 2.70 ಲಕ್ಷ ಕೋಟಿ, ರಾಜ್ಯದ ವಾರ್ಷಿಕ ವರಮಾನದ ಶೇ 20ರಷ್ಟು ಬಡ್ಡಿ ಪಾವತಿಗೇ ವಿನಿಯೋಗವಾಗುತ್ತಿದೆ. ಹೀಗಾಗಿ, ಈ ಬಗೆಯ ಕ್ರಮಗಳು ಬೇಜವಾಬ್ದಾರಿಯವು. ಈ ಬಗೆಯ ಪ್ರವೃತ್ತಿಯನ್ನು ಹತ್ತಿಕ್ಕದೇ ಇದ್ದರೆ ಪ್ರಜಾತಂತ್ರವು ಅಣಕವಾಗುತ್ತದೆ, ರಾಜ್ಯಗಳು ದಿವಾಳಿಯಾಗುತ್ತವೆ.

ಗುಜರಾತ್‌ನಲ್ಲಿ ಶೇ 13ರಷ್ಟು ಮತಗಳನ್ನು ಪಡೆದಿರುವ ಎಎಪಿ, ಈಗ ರಾಷ್ಟ್ರೀಯ ಪಕ್ಷವಾಗಿದೆ. ಕಾಂಗ್ರೆಸ್ ತೆರವು ಮಾಡುತ್ತಿರುವ ಸ್ಥಾನವನ್ನು ತಾನು ತುಂಬುವುದಾಗಿ ಬಹಿರಂಗವಾಗಿ ಹೇಳುತ್ತಿದೆ. ರಾಷ್ಟ್ರ ರಾಜಕಾರಣ ಹಾಗೂ ರಾಷ್ಟ್ರದ ಅರ್ಥ ವ್ಯವಸ್ಥೆಯ ಮೇಲೆ ಇದರಿಂದ ಆಗುವ ಪರಿಣಾಮಗಳ ಬಗ್ಗೆ ಬಿಜೆಪಿ ಗಂಭೀರವಾಗಿ ಆಲೋಚನೆ ಮಾಡಬೇಕಿದೆ. ಕಾಂಗ್ರೆಸ್ ಪಕ್ಷದಲ್ಲಿ ನುರಿತ ರಾಜಕಾರಣಿಗಳು ಹಲವರಿದ್ದಾರೆ, ನೆಹರೂ–ಗಾಂಧಿ ಕುಟುಂಬವು ಈಗ ತುಸು ಹಿಂದಕ್ಕೆ ಸರಿದಿರುವ ಕಾರಣ 'ಪರಿವಾರವಾದ' ಕುರಿತ ಆಕ್ಷೇಪಗಳನ್ನು ಎದುರಿಸಲು ಪಕ್ಷವು ಸನ್ನದ್ಧವಾಗಿರುವಂತಿದೆ. ಇವೆಲ್ಲವೂ ಬಿಜೆಪಿಯನ್ನು ಆಲೋಚನೆಗೆ ಹಚ್ಚಲು ಕಾರಣವಾಗಬೇಕು.

ಚುನಾವಣಾ ಫಲಿತಾಂಶದಲ್ಲಿ ಕಾಂಗ್ರೆಸ್ಸಿಗೂ ಪಾಠ ಇದೆ. ಈ ಸಲದ ಚುನಾವಣೆಗೂ ಮೊದಲು ಪಕ್ಷದಲ್ಲಿ ಕೆಲವು ಮಹತ್ವದ ಬದಲಾವಣೆಗಳು ಆದವು. ಇದು ಜನರಿಗೂ ಗೊತ್ತಿದೆ. 25 ವರ್ಷಗಳ ಅವಧಿಯ ನಂತರ ಪಕ್ಷಕ್ಕೆ ನೆಹರೂ–ಗಾಂಧಿ ಕುಟುಂಬದವರಲ್ಲದ ಮೊದಲ ಅಧ್ಯಕ್ಷ ದೊರೆತರು, ಮಲ್ಲಿಕಾರ್ಜುನ ಖರ್ಗೆ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಅದಕ್ಕಿಂತ ಮುಖ್ಯವಾದುದು, ಈ ಬಾರಿಯ ಚುನಾವಣೆಯ ಪ್ರಚಾರದಿಂದ ನೆಹರೂ–ಗಾಂಧಿ ಕುಟುಂಬದವರು ಹಿಂದೆ ಸರಿದಿದ್ದರು. ಚುನಾವಣಾ ವ್ಯವಹಾರಗಳಿಂದ ಸೋನಿಯಾ ಗಾಂಧಿ ದೂರವಿದ್ದರು. ರಾಹುಲ್ ಗಾಂಧಿ ಅವರು ಭಾರತ್ ಜೋಡೊ ಯಾತ್ರೆಯ ಮೇಲೆ ಗಮನ ಕೇಂದ್ರೀಕರಿಸಿದ್ದರು. ಅವರು ಹಿಮಾಚಲ ಪ್ರದೇಶದಲ್ಲಿ ಪ್ರಚಾರ ನಡೆಸಲಿಲ್ಲ. ಗುಜರಾತ್‌ನಲ್ಲಿ ಒಂದು ದಿನ ಎರಡು ಸಭೆ ಮಾತ್ರ ನಡೆಸಿದರು. ಪ್ರಿಯಾಂಕಾ ಗಾಂಧಿ ಅವರು ಹಿಮಾಚಲ ಪ್ರದೇಶದಲ್ಲಿ ಕೆಲವು ಸಭೆಗಳಲ್ಲಿ ಮಾತನಾಡಿದರು. ಆದರೆ ಕುಟುಂಬದ ಸದಸ್ಯರು ಚುನಾವಣಾ ಅಭಿಯಾನವನ್ನು ಮುನ್ನಡೆಸಲಿಲ್ಲ.

ಹಿಮಾಚಲ ಪ್ರದೇಶದಲ್ಲಿ ಪ್ರಚಾರವನ್ನು ಸ್ಥಳೀಯ ನಾಯಕರೇ ಮುನ್ನಡೆಸಿದರು, ಸ್ಥಳೀಯ ವಿಷಯಗಳನ್ನೇ ಪ್ರಸ್ತಾಪಿಸಿದರು. ಸಾವರ್ಕರ್, ಸಂಘ ಪರಿವಾರ, ಬ್ರಿಟಿಷ್ ಆಡಳಿತ ಅಥವಾ ಕೆಲವರಿಗೆ ಮಾತ್ರ ಅರ್ಥವಾಗುವ ಇಂತಹ ಇತರ ವಿಷಯಗಳ ಬಗ್ಗೆ ಮಾತನಾಡಲಿಲ್ಲ. ಇಂತಹ ವಿಚಾರಗಳನ್ನು ಪ್ರಸ್ತಾಪಿಸುವುದರಲ್ಲಿ ರಾಹುಲ್ ಗಾಂಧಿ ಸಿದ್ಧಹಸ್ತರು. ಇನ್ನೊಂದೆಡೆ, ರಾಜ್ಯ ಕಾಂಗ್ರೆಸ್ ಅಧ್ಯಕ್ಷೆ ಪ್ರತಿಭಾ ಸಿಂಗ್ (ಇವರು ರಾಜ್ಯದ ಜನಪ್ರಿಯ ನಾಯಕರಾಗಿದ್ದ ವೀರಭದ್ರ ಸಿಂಗ್ ಅವರ ಪತ್ನಿ) ಮುಂಚೂಣಿಯಲ್ಲಿ ನಿಂತು ಪ್ರಚಾರ ಕೈಗೊಂಡರು. ರಾಜ್ಯದ ಇತರ ನಾಯಕರ ಜೊತೆ ಪಕ್ಷದ ಪರವಾಗಿ ಪ್ರಚಾರ ನಡೆಸಿದರು.

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತು ನೆಹರೂ–ಗಾಂಧಿ ಕುಟುಂಬಕ್ಕೆ ಸ್ಪಷ್ಟ ಸಂದೇಶವೊಂದು ಇದೆ. ಪಕ್ಷದ ರಾಜ್ಯ ಘಟಕಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಕನಿಷ್ಠ ಮಟ್ಟಕ್ಕೆ ಇರಿಸಿದರೆ, ರಾಜ್ಯ ಮಟ್ಟದ ನಾಯಕರಲ್ಲಿ ಇರುವ ಮತ ಸೆಳೆಯುವ ತಾಕತ್ತಿನ ಮೇಲೆ ಗೌರವ ಇರಿಸಿದರೆ, ಚುನಾವಣೆಯ ಸಂದರ್ಭದಲ್ಲಿ ಆಯಾ ರಾಜ್ಯಕ್ಕೆ ಸಂಬಂಧಿಸಿದ ವಿಚಾರದ ಮೇಲೆ ಗಮನ ಕೇಂದ್ರೀಕರಿಸಿದರೆ ಒಳ್ಳೆಯ ಫಲಿತಾಂಶ ಸಿಗುವುದು ಖಚಿತ. ಜವಾಹರಲಾಲ್ ನೆಹರೂ ಮತ್ತು ಇಂದಿರಾ ಗಾಂಧಿ ಅವರು ಪಕ್ಷದ ನೇತೃತ್ವ ವಹಿಸಿದ್ದ ಸಂದರ್ಭದಲ್ಲಿ ಇದ್ದಂತಹ ಮತ ಸೆಳೆಯುವ ಶಕ್ತಿಯು ಈಗ ನೆಹರೂ–ಗಾಂಧಿ ಕುಟುಂಬಕ್ಕೆ ಇಲ್ಲವಾಗಿರುವಾಗ, ಈ ಬಗೆಯ ಕಾರ್ಯತಂತ್ರ ಒಳ್ಳೆಯ ಫಲಿತಾಂಶ ಕೊಡುತ್ತದೆ.

ಈಗ ಆಮ್ ಆದ್ಮಿ ಪಕ್ಷದ ಬಗ್ಗೆ ಗಮನ ಹರಿಸೋಣ. ಉಚಿತ ಕೊಡುಗೆಗಳನ್ನು ಜವಾಬ್ದಾರಿ ಇಲ್ಲದೆ ನೀಡುವುದು ದೇಶದ ಅರ್ಥ ವ್ಯವಸ್ಥೆ ಪಾಲಿಗೆ ವಿನಾಶಕಾರಿ ಆಗಬಹುದು. ಎರಡನೆಯದಾಗಿ, ಪಕ್ಷವು ತನ್ನ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುವುದನ್ನು ನಿಲ್ಲಿಸಬೇಕು. ಈಚೆಗೆ ಒಂದು ಟಿ.ವಿ. ಸಂದರ್ಶನದಲ್ಲಿ ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ದೆಹಲಿ ಮಹಾನಗರ ಪಾಲಿಕೆಯಲ್ಲಿ ಬಿಜೆಪಿಗೆ 20ಕ್ಕಿಂತ ಹೆಚ್ಚಿನ ಸ್ಥಾನಗಳು ಬರುವುದಿಲ್ಲ ಎಂದು ಹೇಳಿದರು. ಅಲ್ಲದೆ, ಅದನ್ನು ಕಾಗದದ ಚೀಟಿಯೊಂದರಲ್ಲಿ ಬರೆದು ಟಿ.ವಿ. ನಿರೂಪಕನಿಗೆ ನೀಡಿದರು ಸಹ! ಕೊನೆಯಲ್ಲಿ, ಬಿಜೆಪಿ 104 ಸ್ಥಾನ ಗೆದ್ದಿತ್ತು. ಎಎಪಿ 134 ಸ್ಥಾನ ಪಡೆದಿತ್ತು. ಗುಜರಾತ್‌ನಲ್ಲಿ ಎಎಪಿ ಸರ್ಕಾರ ರಚಿಸಲಿದೆ ಎಂದೂ ಅವರು ಹೇಳಿದ್ದರು! ವಾಸ್ತವದಿಂದ ದೂರ ಆಗಿರುವುದನ್ನು ಇವೆಲ್ಲವೂ ತೋರಿಸುತ್ತಿವೆ. ಬಡಾಯಿ ವರ್ತನೆ ಹಾಗೂ ಉದ್ಧಟತನವನ್ನು ಕೂಡ ತೋರಿಸುತ್ತಿವೆ.

ಚುರುಮುರಿ

ಪದಾರ್ಥ ಚಿಂತಾಮಣಿ

• ಸುಮಂಗಲಾ

'ಒದ್ದಾಟ, ಪರದಾಟಕ್ಕೆ ಏನು ವ್ಯತ್ಯಾಸ ಹೇಳು ನೋಡಾಮು' ಬೆಕ್ಕಣ್ಣ ಭಾರಿ ಗಂಭೀರವಾಗಿ ಪ್ರಶ್ನಿಸಿತು.

ಥಟ್ಟನೆ ಉತ್ತರ ಹೊಳೆಯದೇ ತಲೆ ಕೆರೆದುಕೊಂಡೆ.

'ಡಿಕೆಶಿ ಮಾಮಂದು ಒದ್ದಾಟ ಅಲ್ಲ, ಪರದಾಟ ಅಂತ ನಮ್ಮ ಅಶೋಕಣ್ಣ ಹೇಳ್ಯಾನ. ಅದಕ್ಕೇ ಕೇಳಿದೆ' ಎಂದು ಸುದ್ದಿ ತೋರಿಸಿತು.

'ಗುಜರಾತವಳಗ ಕಾಂಗ್ರೆಸ್ ಹದಿನೇಳು ಸೀಟು ಗೆಲ್ಲೋ ಪ್ರಯತ್ನ ಮಾಡಿತಲ್ಲ, ಅದು ಒದ್ದಾಟ. ಹಿಮಾಚಲ ಪ್ರದೇಶದಾಗೆ ಆಪರೇಷನ್ ಕಮಲ ಮಾಡೋ ಚಾನ್ಸ್ ಕೈತಪ್ಪಿತಲ್ಲ ಅಂತ ಬಿಜೆಪಿ ಬವಣೆಪಡ್ತಾ ಇದೆಯಲ್ಲ, ಅದು ಪರದಾಟ' ಅಂದೆ.

'ದೆಹಲಿ ಮುನ್ಸಿಪಾಲ್ಟಿ ಚುನಾವಣೆದಾಗೆ ಎಎಪಿ ಬಿಜೆಪಿನ ಹಣಿಯಿತಲ್ಲ, ಅದು ಯಾವ ಕೆಟಗರಿವಳಗ ಬರತೈತಿ?'

'ಅದು ಎಎಪಿ- ಬಿಜೆಪಿ ಗುದ್ದಾಟ. ಕೈಪಕ್ಷದ್ದು ಸೋಲಾಟ. ಅದೆಲ್ಲ ಬಿಡಲೇ... ನೋಡಿಲ್ಲಿ, ಮ್ಯಾಂಡಸ್ ಚಂಡಮಾರುತ ಎಷ್ಟು ಹಾವಳಿ, ಹಾನಿ ಮಾಡ್ತೈತಿ ಅಂತ. ತಮಿಳುನಾಡಿನಾಗೆ ಐವರು ಸತ್ತವರೆ. ಏನೇ ಅಂದ್ರೂ ಈ ಚಂಡಮಾರುತ ಬಡವರ ಮೇಲೆ ಬ್ರಹ್ಮಾಸ್ತ್ರ ಬೀಸತ್ತೈತಿ' ಎಂದೆ.

'ನಾವು ಎದಕ್ಕ ಮ್ಯಾಂಡಸ್ ಅಂತ ಅರೇಬಿಕ್ ಹೆಸರಿಂದ ಕರೀಬಕು? ನಮ್ಮ ರಾಜ್ಯದಾಗೆ ಆ ಚಂಡಮಾರುತ ಮಾಡೋ ಹಾನಿಗೆ ನಮ್ಮ ಹೆಸರಿಂದ ಕರಿಯೂಣು. ಮಹಾಮಾರಿ ಅಂತ ಕನ್ನಡದ ಹೆಸರು ಇಡೂಣು' ಎನ್ನುತ್ತ ಬೆಕ್ಕಣ್ಣ ಇನ್ನು ಮುಂದೆ ಕೆಲವು ದೇವಸ್ಥಾನಗಳಲ್ಲಿ ಪೂಜೆಗೆ ಸಲಾಂ ಹೆಸರು ಬದಲಿಗೆ, ನಮಸ್ಕಾರ ಹೆಸರು ಬಳಸುವುದು ಎಂಬ ಸುತ್ತೋಲೆಯ ಸುದ್ದಿ ತೋರಿಸಿತು.

'ಬರೋಬ್ಬರಿ ಅದ ಮತ್ತ. ನಮ್ಮ ಪದ್ಧತಿಗಳಿಗೆ ನಮ್ಮ ಭಾಷೆ ಪದನೇ ಬಳಸಬಕು. ಆದರೆ ಮೊದಲು ಮುಜರಾಯಿ ಇಲಾಖೆ ಹೆಸರೇ ಬದಲು ಮಾಡಬೇಕಾತೈತಿ. ಎದಕ್ಕಂದ್ರ ಮುಜರಾಯಿ ಅನ್ನೂ ಪದನೇ ಹಿಂದಿ ಪದ' ನಾನೂ ಯೋಚನೆಗೆ ಬಿದ್ದೆ.

'ಹ್ಹೆಹ್ಹೆ... ಹಿಂದಿ ನಮ್ಮ ರಾಷ್ಟ್ರ ಭಾಷೆ, ಹಂಗಾಗಿ ಆ ಪದ ಇದ್ದರ ಅಡ್ಡಿಲ್ಲ... ಅರೇಬಿಕ್ ಪದ ಇದ್ದರಷ್ಟೇ ಬದಲು ಮಾಡೂಣು' ಎಂದು ಬೆಕ್ಕಣ್ಣ ಹಲ್ಲುಕಿರಿಯಿತು.

ಸಂಗತ

ಮಾನವ ಹಕ್ಕು ಮತ್ತು ಹೊಣೆಗಾರಿಕೆ

ಮಾನವ ಹಕ್ಕುಗಳ ಸುಗಮ ಪರಿಪಾಲನೆಗೆ ಜವಾಬ್ದಾರಿಯೇ ಅಂಬಾರಿ

• ಯೋಗಾನಂದ

ಬೀದಿಯಲ್ಲಿ ತರಕಾರಿ ವ್ಯಾಪಾರಿ ಮತ್ತು ಮನೆ ಮಾಲೀಕನ ನಡುವೆ ವಾಗ್ವಾದ ನಡೆದಿತ್ತು. ದೂಡುಗಾಡಿಗೆ ಲಗತ್ತಾಗಿದ್ದ ಧ್ವನಿವರ್ಧಕಕ್ಕೆ ಮಾಲೀಕನ ಆಕ್ಷೇಪ. ಮಕ್ಕಳು ಹೋಂವರ್ಕ್ ಮಾಡುತ್ತಿರುತ್ತಾರೆ, ವೃದ್ಧರು ಏರುಧ್ವನಿಯಿಂದ ಕಿರಿಕಿರಿಗೆ ಒಳಗಾಗುತ್ತಾರೆ ಎನ್ನುವ ವಾದ ಸರಿಯಾಗಿಯೇ ಇತ್ತು. ಉಳಿದ ಮನೆಯವರಿಗೆ ಈ ದೃಶ್ಯವು ರಂಜನೆಯಾಗಿತ್ತೇ ವಿನಾ ಯಾರೂ ಸಾಥ್ ನೀಡಲಿಲ್ಲ. ನಿಜ, ತರಕಾರಿ ಮಾರಾಟ ಆ ವ್ಯಾಪಾರಿಯ ಹಕ್ಕು. ಆದರೆ ಶಾಂತ ಪರಿಸರದಲ್ಲಿ ವಾಸಿಸುವ ಹಕ್ಕು ಆ ನಿವಾಸಿಗಳಿಗಿದೆ ಎನ್ನುವುದನ್ನು ಆತ ಅಲಕ್ಷಿಸಿದ್ದೇ ಬಂತು. ಪರರ ಹಕ್ಕುಗಳನ್ನು ಗೌರವಿಸುವುದರಲ್ಲಿ ನಮ್ಮ ಹಕ್ಕು ಅಂತರ್ಗತವಾಗಿದೆ ಎನ್ನುವುದು ಸಾರಾಂಶ.

ಹೇಳಿ ಕೇಳಿ ಮಾಹಿತಿ ಸುನಾಮಿ ದಿನಮಾನಗಳಿವು. ನಮ್ಮ ಮನಸ್ಸನ್ನು ಗಲಿಬಿಲಿಗೊಳಿಸುವ ಸಂಗತಿಗಳಿಗೆ ಲೆಕ್ಕವಿಲ್ಲ. ದೃಶ್ಯ ಮಾಧ್ಯಮಗಳಿಗೋ ಪ್ರಸರಿಸಿದ್ದನ್ನೇ ಪ್ರಸರಿಸುವ ಗೀಳು. ಸೆಲೆಬ್ರಿಟಿಗಳು ಆಸ್ಪತ್ರೆಗೆ ದಾಖಲಾಗುವುದೇ ತಡ ರೋಚಕತೆಗಿಳಿಯುತ್ತವೆ. ಇಲಿ ಹುಲಿಯಾಗುತ್ತದೆ. ಬಸ್ಸು, ರೈಲನ್ನು ಹತ್ತುವಾಗ ಅಥವಾ ಅವುಗಳಿಂದ ಇಳಿಯುವಾಗ ಏಕಾಗ್ರತೆಯೂ ಇರದಷ್ಟು ನಮ್ಮ ಸ್ವಾತಂತ್ರ್ಯವನ್ನು ಮೊಬೈಲ್ ಕಸಿದಿದೆ. ಸಾಮಾನ್ಯ ಪ್ರಜ್ಞೆಯೇ ಯಾವುದೇ ಕಾನೂನು, ಕಟ್ಟಲೆಗೆ ಮೂಲ.

ಮನುಷ್ಯರಾಗಿರುವುದೇ ಮಾನವ ಹಕ್ಕುಗಳನ್ನು ಪಡೆಯಲು ಇರುವ ಅರ್ಹತೆ. ಬಾಳು, ಬಾಳಗೊಡು ಎಂಬ ದಿವ್ಯ ತತ್ವಾಧಾರಿತ ನೆಲೆಯಲ್ಲಿ ಗುಲಾಮಗಿರಿಯಿರದು, ಹಿಂಸೆಯಿರದು, ನಿಂದನೆಯಿರದು, ಮೇಲು ಕೀಳೆಂಬುದಿರದು. ಸೌಕರ್ಯ, ಅನುಕೂಲ ಕಲ್ಪಿಸಿ ಹಂಗಿಗೊಳಪಡಿಸುವುದೂ ಸ್ವಾತಂತ್ರ್ಯಹರಣದ ಒಂದು ರೂಪ. ಕವಿ ಜಾನ್ ಮಿಲ್ಟನ್ ತನ್ನ 'ಪ್ಯಾರಡೈಸ್ ಲಾಸ್ಟ್' ಕೃತಿಯಲ್ಲಿ 'ಸ್ವರ್ಗದಲ್ಲಿ ಒಬ್ಬರ ಆಳಾಗಿರುವುದಕ್ಕಿಂತ ನರಕದಲ್ಲಿ ರಾಜನಾಗಿರುವುದೇ ಲೇಸು' ಎನ್ನುತ್ತಾನೆ.

ಬಲುವಳಿ ಅಥವಾ ಸೌಲಭ್ಯಕ್ಕೂ ಹಕ್ಕಿಗೂ ಇರುವ ವ್ಯತ್ಯಾಸ ಅರಿಯಬೇಕಿದೆ. ಸ್ವಾತಂತ್ರ್ಯ, ನ್ಯಾಯ ಮತ್ತು ಶಾಂತಿ ಜಗತ್ತನ್ನೇ ಒಂದು ಕುಟುಂಬವಾಗಿ ಇರಿಸುತ್ತವೆ. ಹಾಗಾಗಿ 'ಮಾನವ ಹಕ್ಕು' ಏಕೈಕ ಶ್ರೇಷ್ಠ ವಿಶ್ವಭಾಷೆ. ಬಿ.ಆರ್. ಅಂಬೇಡ್ಕರ್ ಅವರು 'ಮಾನವ ಹಕ್ಕುಗಳನ್ನು ಮಾನ್ಯ ಮಾಡದೆ ಸಮ ಸಮಾಜ ಅಸಾಧ್ಯ' ಎಂದರು. ಹಕ್ಕುಗಳು ನಿರ್ವಾತದಲ್ಲಿ ಹುಟ್ಟುವುದಿಲ್ಲ. ಕರ್ತವ್ಯ ಪ್ರಜ್ಞೆ, ಸಹಿಷ್ಣುತೆ ಕಾರ್ಯರೂಪಕ್ಕೆ ತರದೆ ಹಕ್ಕುಗಳ ನಿರೀಕ್ಷೆ ಬತ್ತಿದ ಕೆರೆಯಲ್ಲಿ ನೀರು ಬಯಸಿದಂತೆ. ಹಕ್ಕು ಮತ್ತು ಹೊಣೆಗಾರಿಕೆ ಒಂದೇ ನಾಣ್ಯದ ಎರಡು ಮುಖಗಳು. ಮಾನವ ಹಕ್ಕುಗಳ ಆಶ್ರಯದಲ್ಲಿ ನಮಗೆ ಭಯಕ್ಕಿಂತ ಬಂದೀಖಾನೆಯಿಲ್ಲ ಅನ್ನಿಸುವುದು, ನಿರ್ಭಯವೇ ನಿಜ ಸ್ವಾತಂತ್ರ್ಯ ಎಂಬ ಭಾವ ಮೂಡುವುದು.

1948ರ ಡಿಸೆಂಬರ್ 10ರಂದು ಸಭೆ ಸೇರಿದ್ದ ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಬಗ್ಗೆ ಗಹನವಾದ ಚರ್ಚೆ ನಡೆಸಿತು. ಮೂಡಿಬಂದ ನಿರ್ಣಯಗಳನ್ನು 'ಯೂನಿವರ್ಸಲ್ ಡಿಕ್ಲರೇಷನ್ ಆಫ್ ಹ್ಯೂಮನ್ ರೈಟ್ಸ್' (ಯುಡಿಎಚ್‌ಆರ್) ಎನ್ನಲಾಗುತ್ತದೆ. ಮಾನವ ಹಕ್ಕುಗಳ ಕುರಿತ ವಿಶ್ಲೇಷಣೆಯನ್ನು 500 ಭಾಷೆಗಳಲ್ಲಿ ಹೊತ್ತಿಗೆಯಾಗಿ ಹೊರತರಲಾಯಿತು. ಭಾಷಾಂತರದ್ದೇ ಒಂದು ವಿಶ್ವದಾಖಲೆ. ಮಹತ್ತರ ಸಭೆಯ ಗೌರವಾರ್ಥವಾಗಿ ಪ್ರತಿವರ್ಷ ಡಿಸೆಂಬರ್ 10 'ವಿಶ್ವ ಮಾನವ ಹಕ್ಕುಗಳ ದಿನ' ಎಂದು ಜಾಗತಿಕ ಮಟ್ಟದಲ್ಲಿ ಆಚರಿಸಲಾಗುತ್ತದೆ. ಈ ಬಾರಿಯ ಘೋಷಣಾ ವಾಕ್ಯ 'ಪ್ರತಿಯೊಬ್ಬರಿಗೂ ಘನತೆ, ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆ'. ಹಕ್ಕುಗಳು ಅಂದರೆ ಜವಾಬ್ದಾರಿಗಳು ಎಂದೇ ಅರ್ಥ. ಖಾಸಗಿತನ, ವಿವಾಹವಾಗುವುದು ಮತ್ತು ಕುಟುಂಬ ಹೊಂದುವುದು, ಸಮಾಜಸೇವೆ, ಅಭಿಪ್ರಾಯ ಮಂಡನೆ, ಧರ್ಮಾಚರಣೆ... ಇವೆಲ್ಲವೂ ಮಾನವ ಹಕ್ಕುಗಳು.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಸೂಕ್ಷ್ಮವೂ ಗಂಭೀರವೂ ಆದ ಅಂಶಗಳನ್ನು ಮನಗಾಣಬೇಕು. ಮೂಲತಃ ಶಿಕ್ಷಣ ಪಡೆಯುವುದು ಮಾನವ ಹಕ್ಕು. ಅದೇ ಶಿಕ್ಷಣವು ಮಾನವ ಹಕ್ಕುಗಳನ್ನು ತಿಳಿಯಲು ನೆರವಾಗಬೇಕು. ಅಷ್ಟಕ್ಕೇ ನಿಂತರೆ ಶಿಕ್ಷಣದ ಸಾರ್ಥಕ್ಯ ಅಪೂರ್ಣವಾದೀತು. ಶಿಕ್ಷಣವು ಮಾನವ ಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ಉಪಯೋಗವಾಗುವುದು ಹೇಗೆ ಎನ್ನುವುದು ಮುಖ್ಯವಾಗುತ್ತದೆ. ಎಂದರೆ ಶಿಕ್ಷಣವು ಮಾನವ ಹಕ್ಕುಗಳ ಕುರಿತಲ್ಲ, ಮಾನವ ಹಕ್ಕುಗಳಿಗಾಗಿ. ರಸಾಯನ ಶಾಸ್ತ್ರದ ವ್ಯಾಸಂಗ ಒಂದೆಡೆ ಆಗಲಿ. ಇನ್ನೊಂದೆಡೆ, ಕೈಗಾರಿಕೆಗಳಿಂದ ಅದೆಷ್ಟು ಹಾನಿಕಾರಕ ಹೊಗೆ, ಕಲುಷಿತ ನೀರು ಬಿಡುಗಡೆಯಾಗಿ ಸುತ್ತಲ ಜನಜೀವನಕ್ಕೆ ಕಂಟಕವಾಗುತ್ತಿದೆ ಎನ್ನುವುದನ್ನು ಅವಲೋಕಿಸುವುದರ ಜೊತೆಗೆ ಪರಿಹಾರಾರ್ಥ ಕಾರ್ಯಯೋಜನೆಯೂ ಆಗಬೇಕು.

ಭಾರತೀಯ ಪರಂಪರೆಯಲ್ಲೇ 'ಸರ್ವೇ ಜನಾಃ ಸುಖಿನೋ ಭವಂತು'- ಎಲ್ಲರೂ ಸುಖದಿಂದ ಬಾಳಲಿ ಎಂಬ ದಿವ್ಯಾಶಯ ಬೆಸೆದುಹೋಗಿದೆ. ಆದರೆ ಮಹಿಳೆಯು ತನ್ನ ಮನೆಯಲ್ಲೇ, ತನ್ನ ಮನೆಯವರಿಂದಲೇ ನಾಗರಿಕತೆ ನಾಚುವಷ್ಟು ನಾನಾ ಬಗೆಯ ವಿಕೃತ ಕ್ರೌರ್ಯಕ್ಕೆ ಒಳಗಾಗುತ್ತಿದ್ದಾಳೆ. ಇದು ಸಮಾಜದ ಅತಿ ದೊಡ್ಡ ದುರಂತ. ಮಾನವ ಹಕ್ಕುಗಳಿಂದ ಮಹಿಳೆಯರ ಹಕ್ಕುಗಳನ್ನು ಪ್ರತ್ಯೇಕಿಸಲಾಗದು. ಎಲ್ಲಿಯವರೆಗೂ ಮಹಿಳೆಯ ಹಕ್ಕುಗಳೇ ಮಾನವ ಹಕ್ಕುಗಳು ಮತ್ತು ಮಾನವ ಹಕ್ಕುಗಳೇ ಮಹಿಳೆಯ ಹಕ್ಕುಗಳು ಎನ್ನುವುದು ಮನವರಿಕೆಯಾಗದೋ ಅಲ್ಲಿತನಕ ಯಾವುದೇ ದೇಶದ, ಯಾವುದೇ ಆಳ್ವಿಕೆಯಲ್ಲಿ ಸುಖ, ನೆಮ್ಮದಿ ಕೈಗೂಡದು.

ಹಣ, ಆಸ್ತಿ, ಅಂತಸ್ತಿಗಿಂತ ನಿರ್ಭೀತಿ, ಘನತೆ, ನಿರೋಗ ಬದುಕನ್ನು ಕಟ್ಟುವ ಧಾತುಗಳು.

ವಾಚಕರ ವಾಣಿ

ಸಂಘಟನೆಗಳೊಂದಿಗೆ ನಂಟು ತರವಲ್ಲ

ಸರ್ಕಾರಿ ನೌಕರರು ಜಾತಿ, ಧರ್ಮ, ಭಾಷೆಯಂತಹ ಸಂಘಟನೆಗಳ ಜೊತೆ ಕೈಜೋಡಿಸುವುದನ್ನು ನಿಷೇಧಿಸುವ ಉದ್ದೇಶದ ಸರ್ಕಾರದ ಪ್ರಸ್ತಾವ ಸ್ವಾಗತಾರ್ಹ. ಈಗಾಗಲೇ ಹಲವು ಹನ್ನೊಂದು ಜಾತಿ ಸಂಘಟನೆಗಳಲ್ಲಿ ಭಾಗಿಯಾದ ಭಾಗೀದಾರರ ಶಕ್ತಿಯು ಸರ್ಕಾರವನ್ನೇ ಹೆದರಿಸುವ ಮಟ್ಟಕ್ಕೆ ಹೋಗಿದೆ. ಜೊತೆಗೆ ಸರ್ಕಾರದಲ್ಲಿ ಇರುವವರೂ ಇಂತಹ ಸಂಘಟನೆಗಳ ಭಾಗವಾದರೆ ಹೇಗೆ? ಇಲ್ಲಿ, ಸರ್ಕಾರದ ಗತಿ ಏನು ಅನ್ನುವುದಕ್ಕಿಂತ ಸಾಮಾನ್ಯ ಜನರ ಸ್ಥಿತಿ ಏನಾಗಬಹುದು ಎಂಬುದನ್ನು ಯೋಚಿಸಬೇಕು.

ಭಾಷಾ ಸಂಘಟನೆಗಳ ಜತೆ ನಂಟು ಹೊಂದುವುದನ್ನು ನಿರ್ಬಂಧಿಸುವುದು ಸರಿಯಲ್ಲ ಎಂದು ಪತ್ತಂಗಿ ಎಸ್. ಮುರಳಿ (ವಾ.ವಾ., ಡಿ. 9) ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಊರಿನಲ್ಲಿ ಎಷ್ಟು ಜಾತಿಗಳಿವೆಯೋ ಅಷ್ಟು ಭಾಷೆಗಳಿವೆ. ಹೀಗಾಗಿ ಜಾತಿ ಬೇರೆ ಅಲ್ಲ, ಭಾಷೆ ಬೇರೆ ಅಲ್ಲ. ಎರಡಕ್ಕೂ ನಂಟಿದೆ. ವ್ಯಕ್ತಿಯೊಬ್ಬನ ಜಾತಿ ಗೊತ್ತಾದ ಕೂಡಲೆ ನಮ್ಮ ನಡವಳಿಕೆಯೇ ಬೇರೆಯಾಗುತ್ತದೆ. ಅವನು ಒಳಗಿನವನೋ ಹೊರಗಿನವನೋ ಎಂಬುದನ್ನು ತಿಳಿಯುವುದು ಹಲವಾರು ಜನರಿಗೆ ಆದ್ಯತೆ ಆಗಿರುತ್ತದೆ. ಈ ರೋಗವು ಸರ್ಕಾರಿ ನೌಕರರನ್ನೂ ಬಿಟ್ಟಿಲ್ಲ. ಕರ್ನಾಟಕದಲ್ಲಿ ಇರುವವರು ಬರೀ ಕನ್ನಡಿಗರಲ್ಲ. ಕರ್ನಾಟಕವನ್ನು ಕಟ್ಟುವಲ್ಲಿ ಅನೇಕ ಭಾಷಿಕರ, ಅಸಂಖ್ಯ ಜನರ ಬೆವರು ಇದೆ. ಅವರೆಲ್ಲರ ಭಾಷೆ ಬೇರೆ ಬೇರೆಯೇ ಆಗಿದೆ. ಹೀಗೆ ಎಲ್ಲಾ ಜಾತಿಯವರೂ ತಮಗಾಗಿ ಹೋರಾಟಕ್ಕೆ ನಿಂತರೆ ಸರ್ವ ಜನಾಂಗದ ಶಾಂತಿಯ ತೋಟ ಬದುಕುವುದು ಹೇಗೆ?

ಎಂದೋ ಎಲ್ಲಿಯೋ ಓದಿದ್ದು ನನಗೆ ನೆನಪಿದೆ. 'ನೀನು ಒಂದು ಸಂಘಟನೆಯ ಭಾಗವಾದ ಗಳಿಗೆಯಿಂದ, ನೀನು ಇನ್ನೊಂದು ಸಂಘಟನೆಯ ವಿರುದ್ಧವಾಗಿ ವರ್ತಿಸಲು ತೊಡಗುತ್ತೀಯ'. ಇದು ಸಾರ್ವಕಾಲಿಕ ಸತ್ಯವೂ ಹೌದು.

ಡಾ. ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ಸವಕಲು ಮಾತು ನಿಲ್ಲಿಸಿ

'ನಾವೇನೂ ಬಳೆ ಹಾಕಿಲ್ಲ' ಎಂಬುದು ರಾಜಕಾರಣಿಗಳ ಬಾಯಲ್ಲಿ ಪದೇ ಪದೇ ಬರುವ ಪರಾಕ್ರಮದ ಮಾತು! ಈಗ ಲಕ್ಷ್ಮಣ ಸವದಿ ಅವರ ಸರದಿ (ಪ್ರ.ವಾ., ಡಿ. 11). ಬಳೆ ತೊಟ್ಟವರೆಲ್ಲ ಕೈಲಾಗದವರು ಎಂಬರ್ಥದಲ್ಲಿ ಇದು ಸದಾ ಬಳಕೆಯಾಗುತ್ತದೆ. ಸಾಮರ್ಥ್ಯ, ತಾಳ್ಮೆ, ಸಂಯಮ, ಸಹಿಷ್ಣುತೆ, ಕಠಿಣ ನಿರ್ಧಾರ, ಅವಿರತ ಛಲ... ಹೀಗೆ ಎಲ್ಲದರಲ್ಲೂ ಗಂಡಸಿಗಿಂತ ಹೆಚ್ಚುಗಾರಿಕೆ ಹೊಂದಿದವಳು ಮಹಿಳೆ. ಹಳೇ ಸವಕಲು ಹೇಳಿಕೆಯನ್ನೇ ಬಳಸಿ ಸ್ತ್ರೀತ್ವದ ಘನತೆಗೆ ಕುಂದು ತರುವುದು ತರವಲ್ಲ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಅರ್ಹ ನಿರುದ್ಯೋಗಿಗಳಿಗೆ ಸಿಗಲಿ ನ್ಯಾಯ

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ 9.79 ಲಕ್ಷ ಹುದ್ದೆಗಳು ಖಾಲಿ ಉಳಿದಿವೆ ಎಂಬುದು ಚಿಂತಿಸಬೇಕಾದ ಸಂಗತಿಯಾಗಿದೆ. ಇಷ್ಟೊಂದು ಬೃಹತ್ ಸಂಖ್ಯೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಶೀಘ್ರದಲ್ಲಿ ಭರ್ತಿ ಮಾಡಿಕೊಳ್ಳಲು ಸರ್ಕಾರ ಆದ್ಯತೆ ನೀಡಬೇಕಾಗಿದೆ. ದೇಶದಾದ್ಯಂತ ಇಂದು ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಅರ್ಹ ವಿದ್ಯಾವಂತರು ಸರ್ಕಾರಿ ನೌಕರಿಗಾಗಿ ಬಕಪಕ್ಷಿಯಂತೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಭರ್ತಿಯಾಗದ ಲಕ್ಷಾಂತರ ಹುದ್ದೆಗಳಿವೆ. ಸರ್ಕಾರಗಳು ಖಾಲಿ ಹುದ್ದೆಗಳನ್ನು ನಿಗದಿತ ಸಮಯಕ್ಕೆ ತುಂಬದೇ ಇರುವುದು ಇಂದು ದೇಶದಲ್ಲಿ ನಿರುದ್ಯೋಗ ಸಮಸ್ಯೆಗೆ ಮುಖ್ಯ ಕಾರಣ. ಉದ್ಯೋಗದ ನಿರೀಕ್ಷೆಯಲ್ಲಿ ಕಾಲ ದೂಡುತ್ತಿರುವ ಅರ್ಹ ಆಕಾಂಕ್ಷಿಗಳನ್ನು ಪಾರದರ್ಶಕವಾದ ರೀತಿಯಲ್ಲಿ ನೇಮಕ ಮಾಡಿಕೊಂಡು ನ್ಯಾಯ ಒದಗಿಸುವುದು ಸರ್ಕಾರದ ಆದ್ಯತೆಯಾಗಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಶಾಲಾ ಪ್ರವಾಸ ಮನೋವಿಕಾಸಕ್ಕೆ ಪೂರಕವಾಗಿರಲಿ

ಕೊರೊನಾ ಪ್ರಯುಕ್ತ ಎರಡು- ಮೂರು ವರ್ಷಗಳಿಂದ ಶಾಲಾ ಪ್ರವಾಸಕ್ಕೆ ಶಿಕ್ಷಣ ಇಲಾಖೆ ತಡೆ ನೀಡಿತ್ತು. ಇದೀಗ ಇದೇ 31ರ ಒಳಗಾಗಿ ಪ್ರವಾಸ ಹೋಗಿಬರಲು ಅನುಮತಿ ನೀಡಲಾಗಿದೆ. ದೇವಸ್ಥಾನ, ಸಮುದ್ರದಂತಹ ಸ್ಥಳಗಳ ಪ್ರವಾಸಕ್ಕೇ ಹೆಚ್ಚು ಮಹತ್ವ ನೀಡುವ ಪರಿಪಾಟ ಶಾಲೆಗಳಲ್ಲಿ ಇದೆ. ಪ್ರವಾಸವು ಶೈಕ್ಷಣಿಕವಾಗಿ ಮಕ್ಕಳ ಮನೋವಿಕಾಸಕ್ಕೆ ಅನುಕೂಲವಾಗುವ ರೀತಿಯಲ್ಲಿ ಇರಲಿ. ಭಾರತೀಯ ವಿಜ್ಞಾನ ಸಂಸ್ಥೆ, ವಿಶ್ವೇಶ್ವರಯ್ಯ ಮ್ಯೂಸಿಯಂ, ನೆಹರೂ ತಾರಾಲಯ, ಬೇಲೂರು, ಹಳೇಬೀಡು ಶಿಲ್ಪಕಲೆಯ ಪರಿಚಯ ಮಾಡಿಕೊಡುವಂತಹ ಸ್ಥಳಗಳಿಗೆ ಭೇಟಿ ನೀಡಿದಲ್ಲಿ ಮಕ್ಕಳಿಗೆ ಹೆಚ್ಚು ಉಪಯೋಗವಾಗುತ್ತದೆ.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

ದೇವದಾಸಿಯರ ಮಕ್ಕಳಿಗೆ ಅನುಕೂಲ ಆಗಲಿದೆ

ದೇವದಾಸಿಯರ ಮಕ್ಕಳು ತಂದೆಯ ಹೆಸರು ನಮೂದಿಸುವುದು ಕಡ್ಡಾಯವಲ್ಲ ಎಂಬ ಆದೇಶ ಹೊರಡಿಸಲು ಉದ್ದೇಶಿಸಿರುವ ಸರ್ಕಾರದ ನಡೆ ಸೂಕ್ತವಾಗಿದೆ. 2011ರ ಜನಗಣತಿ ವೇಳೆಯಲ್ಲಿ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವಾಗ, ಕೆಲವು ಮನೆಗಳಲ್ಲಿ ತಂದೆಯ ಹೆಸರನ್ನು ಹೇಳುತ್ತಲೇ ಇರಲಿಲ್ಲ. ಇಂತಹ ನಡೆಯಿಂದ ಒಂದು ರೀತಿಯ ವಿಚಿತ್ರ ಸನ್ನಿವೇಶ ಎದುರಾಗುತ್ತಿತ್ತು. ಆಗಲೇ ನನಗೆ ಈ ವ್ಯವಸ್ಥೆಯ ನಿಜಮುಖ ಅರಿವಿಗೆ ಬಂದಿದ್ದು. ಬೆಳೆದ ಮಕ್ಕಳು ತಮ್ಮ ತಂದೆಯ ಹೆಸರನ್ನು ಹೇಳಿಕೊಳ್ಳಲು ಅನುಭವಿಸುತ್ತಿದ್ದ ಸಂಕಟ ಹೇಳತೀರದು. ಆದಕಾರಣ ಸರ್ಕಾರದ ಈ ನಡೆ ಜಾರಿಗೆ ಬಂದರೆ ಅವರಿಗೆ ಈ ಬಗೆಯ ಕಿರಿಕಿರಿ ತಪ್ಪುತ್ತದೆ.

ಆರ್.ಶಿವಶಂಕರ, ರಾಯಚೂರು

ಬಡವರಿಗೆ ಅವಕಾಶ ಕಲ್ಪಿಸಿಕೊಡಲಿ

ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದಿರುವ ಸ್ಪರ್ಶ ಸಮುದಾಯಗಳೂ ಮೀಸಲಾತಿಗಾಗಿ ಪೈಪೋಟಿ ಮಾಡುತ್ತಿರುವುದು ಮೆಚ್ಚುವಂತಹುದಲ್ಲ. ಎಲ್ಲ ಸಮುದಾಯಗಳಲ್ಲಿ ಇರುವಂತಹ ಬಡವರಿಗೆ ದುಡಿದು ಬದುಕುವಂತಹ ಅವಕಾಶಗಳನ್ನು ಕಲ್ಪಿಸಿಕೊಡುವುದು ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಈ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುವ ಮೂಲಕ ಮೀಸಲಾತಿಗೆ ನಡೆದಿರುವ ಪೈಪೋಟಿಗೆ ನಮ್ಮ ಸರ್ಕಾರಗಳು ಕಡಿವಾಣ ಹಾಕಬಹುದು, ಅಲ್ಲವೇ?

ಡಾ. ಎಸ್.ಡಿ. ರಂಗಸ್ವಾಮಿ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡ್ರಗ್ಸ್ ಕಳ್ಳಸಾಗಣೆ ಹೆಚ್ಚುತ್ತಿದೆ, ಎಚ್ಚರ

ದೇಶದೊಳಕ್ಕೆ ಮಾದಕವಸ್ತುಗಳ (ಡ್ರಗ್ಸ್) ಕಳ್ಳಸಾಗಣೆ ಏರಿಕೆಯಾಗಿದೆ ಎನ್ನುತ್ತದೆ ಕೇಂದ್ರ ಸರ್ಕಾರದ ದತ್ತಾಂಶಗಳು. ಗುಜರಾತ್‌ನ ಮುಂದ್ರಾ ಬಂದರಿನಲ್ಲಿ ಸಾವಿರಾರು ಕೋಟಿ ಮೌಲ್ಯದ ಮಾದಕವಸ್ತುಗಳು ಪತ್ತೆಯಾಗಿರುವುದು ರಾಜಕೀಯ ಜಟಾಪಟಿಗೂ ಕಾರಣವಾಗಿದೆ. ಇದರ ಮಧ್ಯೆಯೇ, ದೇಶದಲ್ಲಿ ವಶಕ್ಕೆ ಪಡೆದ ಮಾದಕವಸ್ತುಗಳಿಗೆ ಸಂಬಂಧಿಸಿದ ವರದಿ ವಾರದ ಹಿಂದಷ್ಟೇ ಬಿಡುಗಡೆಯಾಗಿದೆ. ಭಾರತದಲ್ಲಿ ಈವರೆಗೆ ಹೆಚ್ಚು ಬಳಕೆಯಲ್ಲಿಲ್ಲದ ಕೊಕೇನ್, ಈಗ ಭಾರಿ ಪ್ರಮಾಣದಲ್ಲಿ ನುಸುಳುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ

ಕಳ್ಳಸಾಗಣೆ ಏರಿಕೆ

ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ, 2021–22ರಲ್ಲಿ ಈ ಸ್ವರೂಪದ ಕಳ್ಳಸಾಗಣೆಯಲ್ಲಿ ಭಾರಿ ಏರಿಕೆಯಾಗಿದೆ. ಹೀಗೆ ಭಾರತಕ್ಕೆ ಕಳ್ಳಸಾಗಣೆ ಆಗುತ್ತಿರುವ ಮಾದಕವಸ್ತುಗಳಲ್ಲಿ ಹೆರಾಯಿನ್‌ನದ್ದೇ ಸಿಂಹಪಾಲು. 2021–22ನೇ ಸಾಲಿನಲ್ಲಿ ವಶಕ್ಕೆ ಪಡೆದ ಮಾದಕವಸ್ತು-ಗಳಲ್ಲಿ ಹೆರಾಯಿನ್‌ನ ಪಾಲು ಶೇ 90ಕ್ಕಿಂತಲೂ ಹೆಚ್ಚು.

ವಶಕ್ಕೆ ಪಡೆದ ಮಾದಕವಸ್ತು





* ದೇಶದಲ್ಲಿ ವಶಕ್ಕೆ ಪಡೆದ ಅಫೀಮು ಮತ್ತು ಹಾಶಿಶ್ ಪ್ರಮಾಣವನ್ನು ಸೇರಿಸಿಲ್ಲ

ಕೊಕೇನ್ ನುಸುಳುತ್ತಿದೆ...

‘ದೇಶದೊಳಗೆ ಕೊಕೇನ್ ನುಸುಳುತ್ತಿದೆ. ಈ ಬಗ್ಗೆ ಎಚ್ಚರದಿಂದ ಇರಬೇಕಾದ ಸ್ಥಿತಿ ಎದುರಾಗಿದೆ’ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗೆ ಕಳವಳ ವ್ಯಕ್ತಪಡಿಸಿದ್ದರು. ದೇಶದೊಳಕ್ಕೆ ಕಳ್ಳಸಾಗಣೆಯಾದ ಕೊಕೇನ್‌ನ ಪ್ರಮಾಣಕ್ಕೆ ಸಂಬಂಧಿಸಿದ ವರದಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದ್ದರು.

ದೇಶದೊಳಕ್ಕೆ ಕೊಕೇನ್ ಭಾರಿ ಪ್ರಮಾಣದಲ್ಲಿ ನುಸುಳುತ್ತಿದೆ. ಈಚಿನ ಮೂರು ವರ್ಷಗಳಲ್ಲಿ ದೇಶದಲ್ಲಿ ಕಳ್ಳಸಾಗಣೆದಾರರಿಂದ ವಶಕ್ಕೆ ಪಡೆಯಲಾದ ಕೊಕೇನ್‌ನ ಪ್ರಮಾಣವನ್ನು ಗಮನಿಸಿದರೆ ಈ ಅಂಶ ಗೊತ್ತಾಗುತ್ತದೆ. 2019–20ರಲ್ಲಿ ದೇಶದಲ್ಲಿ ವಶಕ್ಕೆ ಪಡೆಯಲಾದ ಕೊಕೇನ್‌ನ ತೂಕ ಕೇವಲ 1.1 ಕೆ.ಜಿ. 2020–21ರಲ್ಲಿ ಹೀಗೆ ವಶಕ್ಕೆ ಪಡೆಯಲಾದ ಕೊಕೇನ್ ತೂಕ 8.8 ಕೆ.ಜಿಗೆ ಏರಿಕೆಯಾಗಿತ್ತು. ಇದಕ್ಕಿಂತಲೂ ಕಳವಳಕಾರಿಯಾದ ವರ್ಷ 2021–22ರದ್ದು. ಆ ಆರ್ಥಿಕ ವರ್ಷದಲ್ಲಿ ದೇಶದಾದ್ಯಂತ ಹೀಗೆ ವಶಕ್ಕೆ ಪಡೆಯಲಾದ ಕೊಕೇನ್‌ನ ಒಟ್ಟು ತೂಕ 310 ಕೆ.ಜಿ.

ಬೇರೆ ಮಾದಕವಸ್ತುಗಳಿಗೆ ಹೋಲಿಸಿದರೆ ಕೊಕೇನ್‌ನ ಬೆಲೆ ಭಾರಿ ಹೆಚ್ಚು. ಹೀಗಾಗಿ ದೇಶದಲ್ಲಿ ಕೊಕೇನ್‌ನ ಬಳಕೆ ಗಣನೀಯ ಪ್ರಮಾಣದಲ್ಲಿ ಇರಲಿಲ್ಲ. ಆದರೆ, ಈಚಿನ ವರ್ಷಗಳಲ್ಲಿ ಇದರ ಬಳಕೆ ಹೆಚ್ಚಾಗಿದೆ ಎಂಬುದನ್ನು ವಶಕ್ಕೆ ಪಡೆಯಲಾದ ಕೊಕೇನ್‌ನ ತೂಕವೇ ಹೇಳುತ್ತದೆ.

ದೇಶದಲ್ಲಿ ವಶಕ್ಕೆ ಪಡೆದ ಮಾದಕವಸ್ತುಗಳ ಒಟ್ಟು ತೂಕ

(ತೂಕ: ಕೆ.ಜಿಗಳಲ್ಲಿ)



ಹತ್ತಾರು ಮಾರ್ಗ

ಮಾದಕವಸ್ತುಗಳನ್ನು ದೇಶದೊಳಕ್ಕೆ ಕಳ್ಳಸಾಗಣೆ ಮಾಡಲು ಕಳ್ಳಸಾಗಣೆದಾರರು ಹತ್ತಾರು ಮಾರ್ಗಗಳನ್ನು ಬಳಸುತ್ತಿದ್ದಾರೆ ಎಂಬುದನ್ನು ಈ ವರದಿ ಬಿಚ್ಚಿಟ್ಟಿದೆ. ಈ ಮೊದಲು ವಿಮಾನದ ಮೂಲಕ ಕಳ್ಳಸಾಗಣೆ ನಡೆಯುತ್ತಿತ್ತು. ಕೋವಿಡ್ ನಂತರದ ದಿನಗಳಲ್ಲಿ ಸರಕು ಸಾಗಣೆ ಹಡಗುಗಳ ಮೂಲಕ ಕಳ್ಳಸಾಗಾಟ ಮಾಡಲಾಗುತ್ತಿದೆ. ಆದರೆ, ಕಳ್ಳಸಾಗಣೆಗೆ ಬಳಕೆಯಾಗುತ್ತಿರುವ ವಿಧಾನಗಳು ಮಾತ್ರ ವಿಚಿತ್ರವಾಗಿವೆ.

ಟ್ರಾಲಿ ಬ್ಯಾಗ್: ಹೊಚ್ಚಹೊಸ ಟ್ರಾಲಿಗಳಲ್ಲಿ ಮಾದಕವಸ್ತುಗಳನ್ನು ಕಳ್ಳಸಾಗಣೆ ಮಾಡುವುದು ಪತ್ತೆಯಾಗಿದೆ. ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2022ರ ಮಾರ್ಚ್‌ನಲ್ಲಿ 40 ಟ್ರಾಲಿಗಳನ್ನು ವಶಕ್ಕೆ ಪಡೆಯಲಾಗಿತ್ತು. ಈ ಟ್ರಾಲಿಗಳ ಟೊಳ್ಳು ಕಂಬಿಗಳ ಒಳಗೆ ಹೆರಾಯಿನ್ ಅನ್ನು ಪ್ಯಾಕ್ ಮಾಡಿ ತುರುಕಲಾಗಿತ್ತು. ಎಲ್ಲಾ ಟ್ರಾಲಿಗಳಲ್ಲಿ ಈ ರೀತಿ 8 ಕೆ.ಜಿ.ಯಷ್ಟು ಹೆರಾಯಿನ್ ಅನ್ನು ಕಳ್ಳಸಾಗಣೆ ಮಾಡಲಾಗಿತ್ತು.

ಕಂಟೇನರ್‌ಗಳಲ್ಲಿ ದೊಡ್ಡ ಬ್ಯಾಗ್‌ನಲ್ಲಿ ಇರಿಸಲಾಗಿದ್ದ ಹೆರಾಯಿನ್

ಪಾನಕದಲ್ಲಿ ಮಾದಕಸ್ತು: 2021ರ ಡಿಸೆಂಬರ್‌ನಲ್ಲಿ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೇಬು ಮತ್ತು ಮಾವಿನ ಪಾನಕದ ಬಾಟಲಿಗಳಿದ್ದ ಹಲವು ಕೇಸ್‌ಗಳನ್ನು ಸುಂಕಾಧಿಕಾರಿಗಳು ವಶಕ್ಕೆ ಪಡೆದಿದ್ದರು. ಪಾನಕ ಬಾಟಲಿಗಳ ತಳಭಾಗದಲ್ಲಿ ಬಿಳಿ ಬಣ್ಣದ ಮೇಣದಂತಹ ವಸ್ತುಗಳು ಇದ್ದವು. ಪ್ರಯೋಗಾಲಯದಲ್ಲಿ ಪರಿಶೀಲಿಸಿದಾಗ ಅದು, ಹೆರಾಯಿನ್ ಎಂಬುದು ಪತ್ತೆಯಾಗಿತ್ತು. ನ್ಯೂಯಾರ್ಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇವುಗಳನ್ನು ಭಾರತಕ್ಕೆ ರವಾನಿಸಲಾಗಿತ್ತು.

ಮುಂದ್ರಾ ಬಂದರು...

601.75 ಕೆ.ಜಿ. — 2022ರಲ್ಲಿ ಗುಜರಾತ್‌ನ ವಿವಿಧ ಬಂದರುಗಳಲ್ಲಿ ವಶಕ್ಕೆ ಪಡೆಯಲಾದ ಹೆರಾಯಿನ್‌ನ ಒಟ್ಟು ತೂಕ

₹2,069 ಕೋಟಿ — 2022ರಲ್ಲಿ ಗುಜರಾತ್‌ನ ವಿವಿಧ ಬಂದರುಗಳಲ್ಲಿ ವಶಕ್ಕೆ ಪಡೆಯಲಾದ ಹೆರಾಯಿನ್‌ನ ಒಟ್ಟು ಮೌಲ್ಯ

52 ಕೆ.ಜಿ. — 2022ರಲ್ಲಿ ಮುಂದ್ರಾ ಬಂದರಿನಲ್ಲಿ ವಶಕ್ಕೆ ಪಡೆಯಲಾದ ಕೊಕೇನ್‌ನ ಒಟ್ಟು ತೂಕ

₹500 ಕೋಟಿ — 2022ರಲ್ಲಿ ಮುಂದ್ರಾ ಬಂದರಿನಲ್ಲಿ ವಶಕ್ಕೆ ಪಡೆಯಲಾದ ಕೊಕೇನ್‌ನ ಒಟ್ಟು ಮೌಲ್ಯ

ದೇಶದಲ್ಲೀಗ ಮಾದಕವಸ್ತು ಕಳ್ಳಸಾಗಣೆಯ ವಿಚಾರ ಚರ್ಚೆಗೆ ಬಂದ ತಕ್ಷಣ ಗುಜರಾತ್‌ನ ಮುಂದ್ರಾ ಬಂದರಿನ ಹೆಸರು ಕೇಳಿಬರುತ್ತದೆ. ಭಾರತದ ಅತ್ಯಂತ ದೊಡ್ಡ ಖಾಸಗಿ ಬಂದರುಗಳಲ್ಲಿ ಮುಂದ್ರಾ ಬಂದರು ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಮುಂದ್ರಾ ಬಂದರಿನಲ್ಲಿ ಈಗಾಗಲೇ ಹತ್ತಾರು ಬಾರಿ ಮಾದಕವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಮಾದಕವಸ್ತು ಎಂದರೆ ಮುಂದ್ರಾ ಬಂದರು ಎಂದು ಬೊಟ್ಟು ಮಾಡುವಂತಹ ಕಾರ್ಯಾಚರಣೆ ನಡೆದದ್ದು 2021ರ ನವೆಂಬರ್‌ನಲ್ಲಿ.

ಮುಂದ್ರಾ ಬಂದರಿನ ಮೂಲಕ ಮಾದಕವಸ್ತು ಕಳ್ಳಸಾಗಣೆ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ಗುಜರಾತ್ ಎಟಿಎಸ್ ಅಧಿಕಾರಿಗಳು, ಬಂದರಿಗೆ ಬಂದಿಳಿದಿದ್ದ ಎಲ್ಲಾ ಕಂಟೇನರ್‌ಗಳ ಪರೀಶಿಲನೆಗೆ ಮುಂದಾಗಿದ್ದರು. ಆಗ ನಾಲ್ಕು ಕಂಟೇನರ್‌ಗಳಲ್ಲಿ ಟಾಲ್ಕಂ ಪೌಡರ್ ಮಧ್ಯೆ ಹೆರಾಯಿನ್ ಅನ್ನು ಇರಿಸಿರುವುದು ಪತ್ತೆಯಾಗಿತ್ತು. ಒಟ್ಟು 2,988 ಕೆ.ಜಿ.ಯಷ್ಟು ಹೆರಾಯಿನ್ ಅನ್ನು ದೊಡ್ಡ–ದೊಡ್ಡ ಚೀಲಗಳಲ್ಲಿ ತುಂಬಿ, ಕಂಟೇನರ್‌ಗಳಲ್ಲಿ ಇರಿಸಲಾಗಿತ್ತು. ಅಂದಿಗೆ ಅದು ಜಗತ್ತಿನಲ್ಲಿ, ಒಂದೇ ಬಾರಿ ಅತಿಹೆಚ್ಚು ಪ್ರಮಾಣದ ಮಾದಕವಸ್ತು ವಶಕ್ಕೆ ಪಡೆದ ಕಾರ್ಯಾಚರಣೆಯಾಗಿತ್ತು. ವಶಕ್ಕೆ ಪಡೆದ ಹೆರಾಯಿನ್‌ನ ಮಾರುಕಟ್ಟೆ ಮೌಲ್ಯ ₹21,000 ಕೋಟಿ.

ಅಫ್ಗಾನಿಸ್ತಾನದಿಂದ ರಸ್ತೆ ಮಾರ್ಗದಲ್ಲಿ ಇರಾನ್ ಛಾಬಹಾರ್ ಬಂದರಿಗೆ ತಂದು, ಅಲ್ಲಿಂದ ಹಡಗಿನಲ್ಲಿ ಮುಂದ್ರಾಗೆ ತರಲಾಗಿತ್ತು. ಈ ಕಂಟೇನರ್‌ಗಳನ್ನು ಚೆನ್ನೈನ ದಂಪತಿ ಬುಕ್ ಮಾಡಿದ್ದರು. ಅವರ ವಿಚಾರಣೆಯ ನಂತರ, ಹೆರಾಯಿನ್ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ಗೊತ್ತಾಯಿತು. ಪ್ರಕರಣದ ಗಂಭೀರತೆ ಅರಿತ ಸರ್ಕಾರವು, ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವರ್ಗಾಯಿಸಿತು. ಪ್ರಕರಣದಲ್ಲಿ 16 ಮಂದಿ ಅಫ್ಗನ್ನರೂ ಸೇರಿ 20 ಮಂದಿಯನ್ನು ಬಂಧಿಸಲಾಗಿದೆ. ಆದರೆ, ತನಿಖೆ ಇನ್ನೂ ಪೂರ್ಣಗೊಂಡಿಲ್ಲ.

ಈ ಮೊದಲು ವಿಮಾನ ಪ್ರಯಾಣಿಕರ ಮೂಲಕ ಭಾರತಕ್ಕೆ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿತ್ತು. ಅದು ಅತ್ಯಂತ ಕಡಿಮೆ ಪ್ರಮಾಣದ ಕಳ್ಳಸಾಗಣೆಗೆ ವಿಮಾನ ಬಳಕೆಯಾಗುತ್ತಿತ್ತು. ಆದರೆ ಈಗ ಮಾದಕ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಕಳ್ಳಸಾಗಣೆ ಮಾಡಲು ಸಮುದ್ರಮಾರ್ಗವನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ತನಿಖೆಯಿಂದ ಗೊತ್ತಾಯಿತು.

ಈ ಪ್ರಕರಣದ ನಂತರ ಎನ್‌ಐಎ ಅಧಿಕಾರಿಗಳ ತಂಡಗಳು ಮುಂದ್ರಾ ಸೇರಿ ಗುಜರಾತ್‌ನ ಎಲ್ಲಾ ಬಂದರುಗಳಲ್ಲಿ ಬೀಡುಬಿಟ್ಟಿವೆ. ನಿರಂತರ ಪರಿಶೀಲನೆ ನಡೆಸಲಾಗುತ್ತಿದೆ. ನಂತರ ಹಲವು ಬಾರಿ ಮಾದಕವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಆಧಾರ: ರೆವೆನ್ಯು ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ವಾರ್ಷಿಕ ಮತ್ತು ಮಾಸಿಕ ವರದಿಗಳು, ಪಿಟಿಐ

ಗಾಂಜಾ ಬಳಕೆ ಹೆಚ್ಚು

ವಶಕ್ಕೆ ಪಡೆದ ಗಾಂಜಾ (ಕೆ.ಜಿ.ಗಳಲ್ಲಿ)



ದೇಶದಲ್ಲಿ ಈ ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ 1 ಲಕ್ಷ ಕೆ.ಜಿ.ಗೂ ಹೆಚ್ಚು ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ದೇಶದಲ್ಲಿ ಅತಿಹೆಚ್ಚು ಬಳಕೆಯಲ್ಲಿರುವ ಮಾದಕವಸ್ತುಗಳಲ್ಲಿ ಗಾಂಜಾಗೆ ಮೊದಲ ಸ್ಥಾನ. ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಈ ಅವಧಿಯಲ್ಲಿ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಬೇರೆ ಮಾದ-ಕವಸ್ತುಗಳಿಗೆ ಹೋಲಿಸಿದರೆ, ಗಾಂಜಾದ ಬೆಲೆ ಕಡಿಮೆ ಇರುವುದರಿಂದ ಇದರ ಬಳಕೆ ಹೆಚ್ಚು. ಜತೆಗೆ, ಗಾಂಜಾವನ್ನು ಭಾರತದಿಂದ ಬೇರೆ ದೇಶಗಳಿಗೂ ಕಳ್ಳಸಾಗಣೆ ಮಾಡಲಾಗುತ್ತದೆ ಎಂದು ಈ ವರದಿಯಲ್ಲಿ ವಿವರಿಸಲಾಗಿದೆ.

ಸಂಸದೀಯ ಸ್ಥಾಯಿ ಸಮಿತಿಯಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸು

‘ಆಯುಷ್ಮಾನ್‌ಗೆ ಕ್ಯಾನ್ಸರ್ ಸೇರಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ನಿಧಾನವಾಗಿ ಏರಿಕೆಯಾಗುತ್ತಿದ್ದು, ಸರ್ಕಾರದ ಆಯುಷ್ಮಾನ್ ಭಾರತ್–ಪಿಎಂಜೆಎವೈ ಯೋಜನೆಯ ವ್ಯಾಪ್ತಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಯನ್ನು ಸೇರಿಸುವಂತೆ ಆರೋಗ್ಯ ಕುರಿತ ಸಂಸದೀಯ ಸ್ಥಾಯಿಸಮಿತಿ ಸದಸ್ಯರು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಸಲಹೆ ನೀಡಿದ್ದಾರೆ. ಬಡವರು ಹಾಗೂ ಮಧ್ಯಮವರ್ಗದವರಿಗೆ ಕ್ಯಾನ್ಸರ್ ಚಿಕಿತ್ಸೆಗೆ ತಗಲುವ ಆರ್ಥಿಕ ಹೊರೆಯನ್ನು ತಗ್ಗಿಸಲು ಸಮಗ್ರ ಕ್ಯಾನ್ಸರ್ ಚಿಕಿತ್ಸೆ ಯೋಜನೆ ರೂಪಿಸುವಂತೆ ಮನವಿ ಮಾಡಿದ್ದಾರೆ.

ಬಹುತೇಕ ಕ್ಯಾನ್ಸರ್‌ಪೀಡಿತರಿಗೆ ರೇಡಿಯೊಥೆರಪಿ ಅಗತ್ಯವಿದ್ದು, ದೇಶದಾದ್ಯಂತ ಆಸ್ಪತ್ರೆಗಳಲ್ಲಿ ರೇಡಿಯೊಥೆರಪಿ ಯಂತ್ರಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಶಿಫಾರಸು ಮಾಡಿದ್ದಾರೆ. ಯಂತ್ರಗಳ ಸಂಖ್ಯೆ ಹೆಚ್ಚಿಸುವುದರಿಂದ ರೇಡಿಯೊ ಥೆರಪಿ ಚಿಕಿತ್ಸೆಗೆ ಒಳಗಾಗಲು ರೋಗಿಗಳು ಕಾಯುವ ಸಮಯ ಕಡಿಮೆಯಾಗುತ್ತದೆ. ಇದು ಕ್ಯಾನ್ಸರ್‌ನಿಂದ ಮೃತಪಡುವ ಪ್ರಮಾಣವನ್ನು ತಗ್ಗಿಸುತ್ತದೆ.

‘ಕ್ಯಾನ್ಸರ್ ಆಸ್ಪತ್ರೆಗಳ ಸಮೀಪ ರೋಗಿಗಳ ಅನುಕೂಲಕ್ಕಾಗಿ ಅತಿಥಿಗೃಹಗಳನ್ನು ನಿರ್ಮಿಸಬೇಕು. ಹೀಗೆ ಮಾಡುವುದರಿಂದ, ರೇಡಿಯೊಥೆರಪಿ ಚಿಕಿತ್ಸೆಗಾಗಿ ನಗರಗಳಿಗೆ ಬರುವ ರೋಗಿಗಳು ಹೋಟೆಲ್‌ಗಳಲ್ಲಿ ಉಳಿದುಕೊಂಡು ಹೆಚ್ಚು ಹಣ ತೆರುವುದನ್ನು ತಪ್ಪಿಸಬಹುದು. ಉಳಿತಾಯವಾದ ಈ ಹಣವು ಅವರ ಚಿಕಿತ್ಸೆಗೆ ನೆರವಿಗೆ ಬರುತ್ತದೆ’ ಎಂದು ಶಿಫಾರಸು ಮಾಡಿದ್ದಾರೆ.

ಈ ವರದಿಯು ಸಂಸತ್ತಿನ ಎರಡೂ ಸದನಗಳಲ್ಲಿ ಕಳೆದವಾರ ಮಂಡನೆಯಾಗಿದೆ. ಕ್ಯಾನ್ಸರ್ ಚಿಕಿತ್ಸೆಗೆ ಅಗತ್ಯ ಎಂದು ನ್ಯಾಷನಲ್ ಕ್ಯಾನ್ಸರ್ ಗ್ರಿಡ್ ಶಿಫಾರಸು ಮಾಡಿರುವ ಕ್ಯಾನ್ಸರ್ ಸಂಬಂಧಿ ಔಷಧಿಗಳನ್ನು ಆಯುಷ್ಮಾನ್ ಅಡಿಯಲ್ಲಿ ಸೇರ್ಪಡೆ ಮಾಡಬೇಕು ಎಂದು ಸ್ಥಾಯಿ ಸಮಿತಿ ಒತ್ತಾಯಿಸಿದೆ. ಈ ಯೋಜನೆಯಲ್ಲಿ ಈಗಾಗಲೇ ಇರುವ ಕ್ಯಾನ್ಸರ್ ಚಿಕಿತ್ಸಾ ವ್ಯವಸ್ಥೆಯನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದೂ ಸಲಹೆ ನೀಡಿದೆ.

ಆಯುಷ್ಮಾನ್ ಯೋಜನೆಯಡಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯಬೇಕು. ಕ್ಯಾನ್ಸರ್ ಪತ್ತೆ ಪರೀಕ್ಷೆ-ಗಳನ್ನು ಸರ್ಕಾರದ ಯೋಜನೆಯಡಿ ಸೇರ್ಪಡೆ ಮಾಡುವುದರಿಂದ, ಆರಂಭದಲ್ಲೇ ರೋಗಕ್ಕೆ ಚಿಕಿತ್ಸೆ ದೊರೆತು ಮರಣ ಪ್ರಮಾಣವನ್ನು ತಗ್ಗಿಸಬಹುದು ಎಂದು ವರದಿ ಅಭಿಪ್ರಾಯಪಟ್ಟಿದೆ.

ವರದಿಯ ಮುಖ್ಯಾಂಶಗಳು

- 2008ರಲ್ಲಿ ದೇಶದಲ್ಲಿ ಕ್ಯಾನ್ಸರ್‌ನಿಂದ ಎಂಟು ಲಕ್ಷ ಜನರು ಮೃತಪಟ್ಟಿದ್ದರು. 2035ರ ವೇಳೆಗೆ ಈ ಸಂಖ್ಯೆ 13 ಲಕ್ಷಕ್ಕೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ
- ಬಿಹಾರದಲ್ಲಿ ‘ನೈಪರ್’ ಸ್ವಯಂಸೇವಾ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಕ್ಯಾನ್ಸರ್ ರೋಗಿ/ ರೋಗಿಯ ಕುಟುಂಬದವರು ತಾವು ಹಣಕಾಸಿನ ತೀವ್ರ ಮುಗ್ಗಟ್ಟಿನಿಂದ ಬಳಲುತ್ತಿದ್ದೇವೆ ಎಂದು ಹೇಳಿದ್ದಾರೆ
- ಕ್ಯಾನ್ಸರ್ ಚಿಕಿತ್ಸೆಗೆ ತಗಲುವ ಒಟ್ಟು ವೆಚ್ಚದಲ್ಲಿ ಶೇ 70ಕ್ಕಿಂತಲೂ ಹೆಚ್ಚನ್ನು ರೋಗಿಗಳು/ರೋಗಿಗಳ ಕುಟುಂಬದವರು ತಮ್ಮ ಸ್ವಂತ ಹಣದಿಂದಲೇ ಭರಿಸಬೇಕಾಗುತ್ತದೆ (ವಿಮೆ ಹೊರತುಪಡಿಸಿ)
- ಕ್ಯಾನ್ಸರ್ ಚಿಕಿತ್ಸೆಗೆ ತಗಲುವ ಒಟ್ಟು ವೆಚ್ಚದಲ್ಲಿ ಶೇ 40ರಷ್ಟನ್ನು ಸಾಲ ಅಥವಾ ಆಸ್ತಿ ಮಾರಾಟದಿಂದ ಹೊಂದಿಸಿಕೊಳ್ಳುವ ಸ್ಥಿತಿ ಇದೆ ಎಂದು ಶೇ 76.5ರಷ್ಟು ರೋಗಿಗಳು/ರೋಗಿಗಳ ಕುಟುಂಬದವರು ಹೇಳಿದ್ದಾರೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮುಂಬೈ–ನಾಗ್ಪುರ ಮಾರ್ಗದ ಸೂಪರ್ ಕಮ್ಯುನಿಕೇಷನ್ ಹೈವೇ ‘ಸಮೃದ್ಧಿ ಮಹಾಮಾರ್ಗ’ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದರು. ಹೆದ್ದಾರಿಯ ಅದ್ಭುತ ವಿನ್ಯಾಸವನ್ನು ಬಿಂಬಿಸುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ದಿನಗಳಿಂದ ಹಂಚಿಕೆಯಾಗುತ್ತಿದೆ. ಒಂದು ಕಡೆ, ಹತ್ತಾರು ರಸ್ತೆಗಳು ಹೆದ್ದಾರಿಯನ್ನು ಬಂದು ಸೇರಿ, ಅಲ್ಲೊಂದು ವರ್ತುಲಾಕಾರದ ರಚನೆ ಕಾಣುತ್ತದೆ. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಚಿತ್ರದ ಜೊತೆಗೆ ಹೆದ್ದಾರಿಯ ಈ ಚಿತ್ರವನ್ನು ಕೊಲಾಜ್ ಮಾಡಲಾಗಿದೆ. ಆದರೆ ಈ ಚಿತ್ರ ಥಾಯ್ಲೆಂಡ್ ಹೆದ್ದಾರಿಯದ್ದು.

ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗಿರುವ ಚಿತ್ರವು ಬ್ಯಾಂಕಾಕ್‌ನದ್ದು ಎಂದು ‘ಇಂಡಿಯಾಟುಡೇ’ ವರದಿ ಮಾಡಿದೆ. ‘ನಾಗ್ಪುರ ಟುಡೇ’ ಪತ್ರಿಕೆಯೂ ಈ ಚಿತ್ರವನ್ನು ತಪ್ಪಾಗಿ ಪ್ರಕಟಿಸಿದೆ. ಈ ಚಿತ್ರವನ್ನು ‘ಮುಂಬೈ ಲೈವ್’ ಜಾಲತಾಣವು 3 ವರ್ಷಗಳ ಹಿಂದೆಯೇ ಪ್ರಕಟಿಸಿತ್ತು. ‘ಷಟರ್‌ಸ್ಟಾಕ್’ ಎಂಬ ಚಿತ್ರಗಳ ಜಾಲತಾಣದಲ್ಲಿ ಈ ಚಿತ್ರ ಬಹಳ ಹಿಂದೆಯೇ ಅಪ್‌ಲೋಡ್ ಆಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಭೋಗಿಯಂತೆ ತೋರುವ ತ್ಯಾಗಿ

ಕಾಗೆಯುಂ ಕೋಗಿಲೆಯುವೊಂದೆ ಮೇಲ್ನೋಟಕ್ಕೆ |
ಯೋಗಿಯುಂ ಸಂಸಾರಭೋಗಿಯೇ ಹೊರಕೆ ||
ಲೋಗರವೊಲಿರುತೆ ಸುಖ ದುಃಖಸಂಭ್ರಮಗಳಲಿ |
ತ್ಯಾಗಿಯವನ್ ಆಂತರದಿ - ಮಂಕುತಿಮ್ಮ || 775 ||

ಪದ-ಅರ್ಥ: ಕೋಗಿಲೆಯು ವೊಂದೆ = ಕೋಗಿಲೆಯುಂ + ಒಂದೆ, ಲೋಗರವೊಲಿರುತೆ = ಲೋಗರವೋಲ್ (ಸಾಮಾನ್ಯರಂತೆ) + ಇರುತೆ, ತ್ಯಾಗಿಯವನ್ = ತ್ಯಾಗಿ + ಅವನ್(ಅವನು), ಆಂತರದಿ = ಆಂತರ್ಯದಲ್ಲಿ

ವಾಚ್ಯಾರ್ಥ: ಮೇಲ್ನೋಟಕ್ಕೆ ಕಾಗೆ ಮತ್ತು ಕೋಗಿಲೆ ಒಂದೇ ತರಹ ಕಾಣುತ್ತವೆ. ಯೋಗಿಯೂ, ಸಂಸಾರಿಯಂತೆಯೇ ಹೊರನೋಟಕ್ಕೆ ಕಾಣುತ್ತಾನೆ. ಅವನು ಎಲ್ಲ ಸಾಮಾನ್ಯರಂತೆಯೇ, ಸುಖ, ದುಃಖ, ಸಂಭ್ರಮಗಳಲ್ಲಿದ್ದರೂ ಆಂತರ್ಯದಲ್ಲಿ ಯೋಗಿಯೇ ಆಗಿರುತ್ತಾನೆ.

ವಿವರಣೆ: ಅವರ ಹೆಸರೇ ಉತ್ತಮ. ಅವರು ಬರ್ಮೀ ಜನ. ಐದು ವರ್ಷಕ್ಕೇ ತಂದೆಯನ್ನು ಕಳೆದುಕೊಂಡು ನಾರ್ಮಲ್ ಶಾಲೆಯಲ್ಲಿ ಕಲಿತು ಶಿಕ್ಷಕರಾದರು. ಬರ್ಮಾದಿಂದ ಕಲಕತ್ತೆಗೆ ಪ್ರಯಾಣ. ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸ. ಬಂಗಾಲಿ ಕಲಿತರು. ಪರಿವ್ರಾಜಕರಾಗಿ ಭಿಕ್ಷು ಉತ್ತಮರಾದರು. ಜಗತ್ತು ಸುತ್ತಿದರು. ಯಾವಾಗಲೂ ಪ್ರಸನ್ನ ಚಿತ್ತ, ಒಮ್ಮೆ ಇವರ ವಾಸದಲ್ಲಿ ಕಳುವಾಯಿತು. ಒಂದಿಷ್ಟು ಹಣ, ಟೈಪ್‌ರೈಟರ್, ಕಾಗದಪತ್ರಗಳು, ಬಟ್ಟೆ-ಬರೆ ಎಲ್ಲವೂ ಹೋದವು, ಮೈಮೇಲಿನ ಅರಿವೆಯೊಂದನ್ನು ಬಿಟ್ಟು. ಇವರು ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟರು, ‘ಕದ್ದದ್ದೆಲ್ಲ ನಿಮ್ಮದೇ. ಕಾಗದ ಪತ್ರಗಳನ್ನು ಮಾತ್ರ ಹಿಂದಿರುಗಿಸಿ. ನಾನು ಯಾರಿಗೂ ದೂರು ಕೊಡುವುದಿಲ್ಲ’. ಯಾಕೆ ಹೀಗೆ ಎಂದು ಕೇಳಿದರೆ, ‘ಭಿಕ್ಷುವಿಗೇಕೆ ಅಟ್ಟಹಾಸ? ದೇವರು ನನಗೆ ಬೇಡವಾದದನ್ನೆಲ್ಲ ಕಳ್ಳತನ ಮಾಡಿಸಿದ. ಸರಿಯಾಯಿತು’ ಎಂದರು!

ಆತನ ಬದುಕೇ ಸಮಾಜಕ್ಕೆ ಅರ್ಪಣೆ. ಹಿಂದುಸ್ತಾನವನ್ನೆಲ್ಲ ತಿರುಗಿ ಹಿಂದೂ ಸಂಸ್ಕೃತಿಯ ಆಳ-ವಿಸ್ತಾರಗಳನ್ನು ತಿಳಿದು, ಹಗಲು-ರಾತ್ರಿ ಪ್ರಸಾರ ಮಾಡಿದರು. 1915 ರಲ್ಲಿ ವಂಗಭಂಗ ಚಳುವಳಿಯ ತೀವ್ರತೆ. ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ, ಅವರಿಗಾಗಿ ರಾಷ್ಟ್ರೀಯ ವಿದ್ಯಾಪೀಠ ಸ್ಥಾಪಿಸಿದರು. ಅದಕ್ಕೆ ಅರವಿಂದ ಘೋಷ್‌ರೇ ಪ್ರಿನ್ಸಿಪಾಲರು! ಜಪಾನೀ ಭಾಷೆ ಕಲಿತರು. ಕ್ಯೋಟೋ ವಿಶ್ವ ವಿದ್ಯಾಲಯದಲ್ಲಿ ಮೂರು ವರ್ಷ ಪಾಠ ಮಾಡಿದರು. ಪ್ರಪಂಚಯಾತ್ರೆಯನ್ನು ವಿಲಾಸ-ವಿನೋದಗಳಿಗೆ ಭಿಕ್ಷು ಉತ್ತಮ ಮಾಡಲಿಲ್ಲ. ಹೋದ ಕಡೆಯೆಲ್ಲ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡಿದರು. 1935 ರಲ್ಲಿ ಭಿಕ್ಷು ಉತ್ತಮ ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ಬಿಡುವಿಲ್ಲದೆ ದೇಶವನ್ನು ಸುತ್ತಿದರು. ಉತ್ಸಾಹ, ಸರಳತೆ, ದೇಶಾಭಿಮಾನ, ಸಂಭ್ರಮಗಳ ಮೂರ್ತಿಯೊಂದು ದೇಶವನ್ನೆಲ್ಲ ಗಾಳಿಗಾಲಿನಿಂದ ಸುಳಿದಾಡಿದಂತಾಯಿತು. ಬಹುಬೇಗ ಭಿಕ್ಷು ಉತ್ತಮ ಮರ್ತ್ಯವನ್ನು ನೀಗಿ ಅಮರರಾದರು.

ಇಂಥವರನ್ನು ಉದ್ದೇಶಿಸಿಯೇ ಈ ಕಗ್ಗ ಬಂದದ್ದು. ಹೊರನೋಟಕ್ಕೆ ಕಾಗೆ ಮತ್ತು ಕೋಗಿಲೆ ಒಂದೇ ತರಹ. ಹಾಡಲು ಬಾಯ್ದೆರೆದಾಗಲೇ ವ್ಯತ್ಯಾಸ, ಅಂತೆಯೇ ಯೋಗಿಯಾದವನೂ ಬಾಹ್ಯದಲ್ಲಿ ಸಂಸಾರಿಯಂತೆಯೇ. ಉಳಿದವರಂತೆ ಆತನೂ ಸುಖ, ದುಃಖ, ಸಂಭ್ರಮಗಳನ್ನು ಅನುಭವಿಸುತ್ತಾನೆ. ಆದರೆ ಅದೆಲ್ಲ ಸಮಾಜಕ್ಕೆ ತನಗೆ ಏನೂ ಇಲ್ಲ. ಭಿಕ್ಷು ಉತ್ತಮರಂತೆ. ಅವನು ಆಂತರ್ಯದಲ್ಲಿ ತ್ಯಾಗಿಯೇ ಹೌದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಡಿಸೆಂಬರ್ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಚತುರ್ಥಿ ಗಂ. 18-49 ನಕ್ಷತ್ರ: ಪುಷ್ಯ ಗಂ. 23-36 ಯೋಗ: ಐಂದ್ರ ಗಂ. 30-06, ಕರಣ: ಬಾಲವ ಗಂ. 18-49, ವೃಶ್ಚಿಕ ಮಾಸದ 25 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30–09-00
ಸೂರ್ಯೋದಯ : 06-47 ಸೂರ್ಯಾಸ್ತ : 06-01
ಮುಸ್ಲಿಂ ದಿನಾಂಕ : 17 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 6

ಮೇಷ: ಇಂದು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಸ್ವಂತ ಉದ್ಯೋಗಿಗಳಿಗೆ ಅಧಿಕ ಲಾಭ. ಹಣಕಾಸಿನ ಹೊಂದಿಕೆಯಾಗುವುದು. ನೂತನ ವಾಹನ ಕೊಳ್ಳುವ ಯೋಗವಿದೆ. ಸ್ನೇಹಿತರೊಂದಿಗೆ ಪ್ರಯಾಣ ಬೆಳಸುವಿರಿ.

ವೃಷಭ: ದಿನಸಿ ವ್ಯಾಪಾರದಲ್ಲಿ ಪ್ರಗತಿ ಕಂಡು ಬರುವುದು. ಹಿರಿಯರ ಆಸ್ತಿ ಲಭಿಸಲಿದೆ. ಇಂದು ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡಬೇಕಾಗಿಬ-ರುವುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸುವುದು ಉತ್ತಮ.

ಮಿಥುನ: ಹೊಸ ಅನುಭವವನ್ನು ಎದುರಿಸುವಿರಿ. ರೈತರಿಗೆ ಸಂತೋಷದ ಸುದ್ದಿ ಬರಲಿದೆ. ವ್ಯಾಪಾರದಲ್ಲಿ ಸಾಲ ವಾಪಸಾತಿಯಿಂದ ಸಮಾಧಾನ. ವಿದ್ಯಾರ್ಥಿಗಳಿಗೆ ಹಿನ್ನಡೆ ಉಂಟಾಗಿ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಾಗುವುದು.

ಕರ್ಕಾಟಕ: ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಜಮೀನು ವ್ಯಾಜ್ಯಗಳಲ್ಲಿ ನಿಮಗೆ ಜಯ ಲಭಿಸಲಿದೆ. ಸಂಸಾರದಲ್ಲಿನ ಉತ್ತಮ ಅಭಿವೃದ್ಧಿಯಿಂದ ಮತ್ತು ಮಕ್ಕಳ ಏಳಿಗೆಯಿಂದ ಸಂತೋಷ ಹಾಗೂ ನೆಮ್ಮದಿ ಇರುವುದು.

ಸಿಂಹ: ಸಹೋದ್ಯೋಗಿಗಳ ನಡವಳಿಕೆ ನಿಮಗೆ ಕೆಲಸದಲ್ಲಿ ಹೆಚ್ಚಿನ ಸ್ಫೂರ್ತಿ ನೀಡುವುದು. ಮದುವೆಯ ಬಗ್ಗೆ ಮನೆಯಲ್ಲಿ ನಿರ್ಧಾರ ತಿಳಿಸುವಿರಿ. ಸ್ವ ಉದ್ಯೋಗಿಗಳು ಕೈತಪ್ಪಿದ ಅವಕಾಶಗಳನ್ನು ಮರಳಿ ಪಡೆಯುವ ಯತ್ನ ಮಾಡಿ.

ಕನ್ಯಾ: ನಿಮ್ಮ ದಾರಿಗೆದುರಾಗಿ ಉತ್ತಮ ಅವಕಾಶಗಳು ಹುಡುಕಿ ಬರಲಿವೆ. ಈಗ ಆರಿಸಿಕೊಂಡಿರುವ ಕಾರ್ಯಕ್ಷೇತ್ರದಲ್ಲಿ ನಿರಾಸೆಯಿಂದ ಹಿಂದಿರುಗುವ ಆಲೋಚನೆ ಸರಿಯಲ್ಲ. ಅನನ್ಯ ಭಕ್ತಿಯಿಂದ ಮಹಾಗಣಪತಿಯನ್ನು ಆರಾಧಿಸಿ.

ತುಲಾ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ಇಂದು ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಸ್ನೇಹಿತರು ನಿಮ್ಮ ವಿಶ್ವಾಸವನ್ನು ದುರುಪಯೋಗ ಪಡಿಸಿಕೊಳ್ಳುವ ಸನ್ನಿವೇಶಗಳನ್ನು ಎದುರಿಸಬೇಕಾಗುವುದು.

ವೃಶ್ಚಿಕ: ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು. ಹಿಂದೆಯೇ ಬರಬೇಕಾಗಿದ್ದ ಸಾಲದ ಹಣವು ಬಂಧುವೊಬ್ಬರ ನೆರವಿನಿಂದ ನಿಮ್ಮ ಕೈ ಸೇರಲಿದೆ. ಸರ್ಕಾರಿ ಕಚೇರಿಗಳ ಕೆಲಸಕ್ಕಾಗಿ ಓಡಾಡುವ ಸಂದರ್ಭ ಬರುವುದು.

ಧನು: ಅಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿ ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯಗಳಲ್ಲಿ ತೊಡಗುವಿರಿ. ಇನ್ನೊಬ್ಬರ ಕಷ್ಟಗಳಿಗೆ ನೆರವಾಗಿ ನಿಮ್ಮ ಸಮಯ ವ್ಯರ್ಥವಾಗಲಿದೆ, ಆದರೆ ಸಮಯ ವ್ಯರ್ಥವೆಂದು ಭಾವಿಸಬೇಡಿ.

ಮಕರ: ಕೌಟುಂಬಿಕ ವಲಯದಲ್ಲಿ ನಿಮ್ಮ ಗೌರವ ಹೆಚ್ಚಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರುವುದು. ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಉನ್ನತಿ ತೋರಿಬಂದೀತು. ನಿಕಟ ವ್ಯಕ್ತಿಗಳ ಜೊತೆಗೆ ವಾಗ್ವಾದಕ್ಕೆ ಇಳಿಯಬೇಡಿ.

ಕುಂಭ: ಅದೃಷ್ಟ ನಿಮ್ಮದಾಗಲಿದೆ. ಆದ್ದರಿಂದ ಸಾಧನೆಯ ಗುರಿಯಲ್ಲಿ ಯಾವ ಬದಲಾವಣೆ ಮಾಡಬೇಡಿ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿವಹಿಸಿ. ಮಡದಿಯ ಭಾವನೆಗಳಿಗಿ ಬೆಲೆ ಕೊಡಿ. ಮಾನಸಿಕ ಧೈರ್ಯ ವೃದ್ಧಿಯಾಗಲಿದೆ.

ಮೀನ: ಸಂಚಾರಶೀಲರಾಗಿರುವ ನೀವು ಈ ದಿನದ ಪ್ರಯಾಣದಲ್ಲಿ ಜಾಗ್ರತೆ-ವಹಿಸುವುದು ಅತ್ಯಗತ್ಯ. ಪೊಲೀಸರಿಗೆ ಅನಿವಾರ್ಯವಾಗಿ ಬಿಡುವಿಲ್ಲದ ಕೆಲಸ ಮಾಡಬೇಕಾಗಬಹುದು. ಸತ್ಯಾಸತ್ಯತೆಯನ್ನು ತಿಳಿದು ಕಾರ್ಯ ಮುಂದುವರಿಸಿ.

ಪದಬಂಧ 5166

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಬಲಕ್ಕೆ ವಿರುದ್ಧವಾಗಿ ಗೊಂದಲಗೊಂಡನಿದ್ದಾನೆ! (5)
4.ಕತ್ತು ಚಾಚಿ ತೋರಿದ ಶೌರ್ಯ (3)
5.ಶಿವನ ಬಳಿಯಲ್ಲಿನ ಚರ್ಮ ವಾದ್ಯ (3)
9.ಮಂದಿರದಲ್ಲಿ ಕೇಳಿಸಿದ್ದು ಕೆಳಗಿನ ಸ್ವರ (2)
10.ದುಷ್ಟ ಸ್ವಭಾವದ ಹೆಂಗಸು (3)
11.ನಾ ದ್ವಿರುಕ್ತಿಯಾದಾಗ ಬಗೆಬಗೆಯಾಗಿ ಕಂಡೀತು! (2)
12.ಬೆಳ್ಳುಳ್ಳಿ ಇಲ್ಲಿದೆ (3)
15.ಈತ ಸರಿ ಸಮಾನನಾದವನು (3)
16.ಕಾಡಿನಲ್ಲಿ ತಿರುಗಾಟ (5)

ಮೇಲಿಂದ ಕೆಳಕ್ಕೆ
1.ನಂಬಿಗೆಯಿಂದ ನೀಡಿರುವ ಚರಿಗೆ! (3)
2.ಆಯ್ದುಕೊಳ್ಳುವವನ ಹತ್ತಿರವಿರುವ ಗೂಳಿ! (2)
3.ಇದು ಗಿಡ್ಡನ ಸಣ್ಣ ಮರ (2)
4.ನಕ್ಷತ್ರಗಳಿಂದ ಕೂಡಿದ ಆಕಾಶ (5)
6.ದುಃಖಾಂತವಾದ ಪ್ರಹಸನ (5)
7.ಸಡಿಲವಾದ ಅಂಗಿ (3)
8.ಗಳಿಗೆಗೊಮ್ಮೆ ಬರುತ್ತಿರುವ ಆದಾಯ! (3)
13.ವನದಲ್ಲಿ ತಿರುಗಿದ್ದಕ್ಕೇ ಹೊಸತು ಗೋಚರಿಸಿದೆ (2)
14.ಸಂಗನ ಜೀವನದಲ್ಲಿ ನಡೆದ ಘಟನೆ (3)
15.ಸರಕ್ಕನೆ ತಂದು ಧರಿಸಿದ ಮಾಲೆ (2)



5165ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರವ 3.ಪ್ರಸವ
6.ರಸಿಕ 8.ತಿದ್ದುಪಡಿ
10.ವಿವರ 11.ಚಡಾವು
12.ಶಿಲಾಯುಗ 15.ಮಕರ
17.ತಸ್ಕರ 18.ನಿಜ

ಮೇಲಿಂದ ಕೆಳಕ್ಕೆ:
2.ವಯ್ಯಾರ 3.ಪ್ರತೀಕ
4.ವರ್ಧಂತಿ 5.ಶಾಪ
7.ಸಿತಾರ 9.ಡಿಕಾವು
10.ವಿದೇಶಿ 11.ಚರಕ
13.ಲಾಯ 14.ಗಣಿತ
15.ಮತ್ಸರ 16.ರಜನಿ

ಸುಡೊಕು 5552

	4				1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5551 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ವಿದೇಶಗಳ ಜೊತೆ ಭಾರತದ ಕರೆನ್ಸಿಯಲ್ಲಿ ವಹಿವಾಟು

ಅವಕಾಶ ಅರಸಲು ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ವಾಣಿಜ್ಯ ಸಂಘಟನೆಗಳು ಹಾಗೂ ಬ್ಯಾಂಕ್‌ಗಳು ಹೆಚ್ಚಿನ ದೇಶಗಳ ಜೊತೆ ರೂಪಾಯಿಯಲ್ಲಿ ವಹಿವಾಟು ನಡೆಸುವ ಅವಕಾಶಗಳನ್ನು ಅರಸಬೇಕು ಎಂದು ಕೇಂದ್ರ ಸರ್ಕಾರವು ಹೇಳಿದೆ.

ರಷ್ಯಾ, ಮಾರಿಷಸ್ ಹಾಗೂ ಶ್ರೀಲಂಕಾ ಜೊತೆ ರೂಪಾಯಿಯಲ್ಲಿ ವಹಿವಾಟು ನಡೆಸಲು ಅವಕಾಶ ಕಲ್ಪಿಸಲಾಗಿದೆ. ಈ ಮೂರು ದೇಶಗಳ ಬ್ಯಾಂಕ್‌ಗಳ ವಿಶೇಷ ಖಾತೆಗಳನ್ನು ಭಾರತದ ಬ್ಯಾಂಕ್‌ಗಳು ಈಗಾಗಲೇ ತೆರೆದಿವೆ.

ಎಸ್‌ಬಿಐ ಮಾರಿಷಸ್ ಲಿಮಿಟೆಡ್ ಮತ್ತು ಪೀಪಲ್ಸ್ ಬ್ಯಾಂಕ್ ಆಫ್ ಶ್ರೀಲಂಕಾ ತಮ್ಮ ವಿಶೇಷ ಖಾತೆಗಳನ್ನು ಎಸ್‌ಬಿಐನಲ್ಲಿ ತೆರೆದಿವೆ.

ಇದರ ಜೊತೆಯಲ್ಲೇ, ಬ್ಯಾಂಕ್ ಆಫ್ ಸಿಲೋನ್ ಕೂಡ ಚೆನ್ನೈನಲ್ಲಿ ಇರುವ ತನ್ನ ಅಂಗಸಂಸ್ಥೆಯಲ್ಲಿ ವಿಶೇಷ ಖಾತೆ ಆರಂಭಿಸಿದೆ.

ಒಟ್ಟು 11 ಬ್ಯಾಂಕ್‌ಗಳು ಇಂತಹ 18 ವಿಶೇಷ ಖಾತೆಗಳನ್ನು ತೆರೆದಿವೆ. ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅನುಮೋದನೆ ಕೂಡ ಇದೆ. ವಿದೇಶಗಳ ಜೊತೆ ರೂಪಾಯಿಯಲ್ಲಿ ವಹಿವಾಟು ನಡೆಸುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಜುಲೈನಲ್ಲಿ ವಿಸ್ತೃತ ಮಾರ್ಗಸೂಚಿಗಳನ್ನು ಹೊರಡಿಸಿದೆ.

ವಾಣಿಜ್ಯ ಸಂಘಟನೆಗಳು ಹಾಗೂ ಬ್ಯಾಂಕ್ ಪ್ರತಿನಿಧಿಗಳ ಜೊತೆ ಈಚೆಗೆ ಸಭೆ ನಡೆಸಿರುವ ಕೇಂದ್ರ ಹಣಕಾಸು ಸಚಿವಾಲಯವು, ದೇಶಿ ಪಾವತಿ ವ್ಯವಸ್ಥೆಗಳ ಬಳಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಮಾಡುವ ತನ್ನ ಉದ್ದೇಶದ ಭಾಗವಾಗಿ, ಇನ್ನಷ್ಟು ದೇಶಗಳ ಜೊತೆ ರೂಪಾಯಿಯಲ್ಲಿ ವಹಿವಾಟು ನಡೆಸುವ ಅವಕಾಶಗಳನ್ನು ಹುಡುಕಬೇಕು ಎಂದು ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಮೇಲೆ ಪಾಶ್ಚಿಮಾತ್ಯ ದೇಶಗಳು ನಿರ್ಬಂಧಗಳನ್ನು ವಿಧಿಸಿದ ನಂತರದಲ್ಲಿ ಕೇಂದ್ರವು ರೂಪಾಯಿ ವಹಿವಾಟಿಗೆ ಉತ್ತೇಜನ ನೀಡಲು ಯತ್ನಿಸುತ್ತಿದೆ.

ಆರ್‌ಬಿಐ ಕಡೆಯಿಂದ ಮಾರ್ಗಸೂಚಿಗಳು ಪ್ರಕಟವಾದ ನಂತರದಲ್ಲಿ ರಷ್ಯಾದ ಸ್ಬೆರ್‌ಬ್ಯಾಂಕ್ ಹಾಗೂ ವಿಟಿಬಿ ಬ್ಯಾಂಕ್‌ಗೆ ರೂಪಾಯಿ ವಹಿವಾಟಿಗೆ ಅನುಮೋದನೆ ನೀಡಲಾಗಿತ್ತು.

'ಈ ವ್ಯವಸ್ಥೆಯ ಅಡಿಯಲ್ಲಿ ಆಮದು ವಹಿವಾಟು ಕೈಗೊಳ್ಳುವ ದೇಶಿ ಆಮದುದಾರರು ಪಾವತಿಗಳನ್ನು ರೂಪಾಯಿಯಲ್ಲಿ ಮಾಡತಕ್ಕದ್ದು. ಹಣವನ್ನು ಅವರು ಪಾಲುದಾರ ದೇಶದ ಬ್ಯಾಂಕ್ ಭಾರತದಲ್ಲಿ ತೆರೆದಿರುವ ವಿಶೇಷ ಖಾತೆಯಲ್ಲಿ ಜಮಾ ಮಾಡಬೇಕು' ಎಂದು ಆರ್‌ಬಿಐ ಹೇಳಿದೆ.

ಅದಾನಿ ಸಮೂಹಕ್ಕೆ 2 ನಿರ್ದೇಶಕ ಸ್ಥಾನ: ಎನ್‌ಡಿಟಿವಿ

ನವದೆಹಲಿ (ಪಿಟಿಐ): ನ್ಯೂ ಡೆಲ್ಲಿ ಟೆಲಿವಿಷನ್ (ಎನ್‌ಡಿಟಿವಿ) ಕಂಪನಿಯು ತನ್ನ ಆಡಳಿತ ಮಂಡಳಿಯಲ್ಲಿ ಅದಾನಿ ಸಮೂಹದ ಸಂಸ್ಥೆಗೆ ಎರಡು ಸ್ಥಾನಗಳನ್ನು ನೀಡಲು ಮುಂದಾಗಿದೆ.

ಎನ್‌ಡಿಟಿವಿಯ ಆಡಳಿತ ಮಂಡಳಿಗೆ ಇಬ್ಬರು ನಿರ್ದೇಶಕರನ್ನು ನಾಮನಿರ್ದೇಶನ ಮಾಡುವಂತೆ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಂಗಸಂಸ್ಥೆ ಆಗಿರುವ ಆರ್‌ಆರ್‌ಪಿಆರ್ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್ ಅನ್ನು ಆಹ್ವಾನಿಸಲು ಡಿಸೆಂಬರ್ 9ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯು ಒಪ್ಪಿಗೆ ನೀಡಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಇದೇ 23ರಂದು ನಡೆಯಲಿರುವ ನಿರ್ದೇಶಕ ಮಂಡಳಿ ಸಭೆಯಲ್ಲಿ ಆ ನೇಮಕವನ್ನು ಪರಿಗಣಿಸಲಾಗುವುದು ಎಂದು ಅದು ಹೇಳಿದೆ.

ಅದಾನಿ ಸಮೂಹವು ಎನ್‌ಡಿಟಿವಿಯಲ್ಲಿ ಶೇ 37.44ರಷ್ಟು ಷೇರುಪಾಲು ಹೊಂದಿದೆ. ಕಂಪನಿಯ ಸಂಸ್ಥಾಪಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರು ಒಟ್ಟು ಶೇ 32.3ರಷ್ಟು ಷೇರುಗಳನ್ನು ಹೊಂದಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಜೀರೊ ಕಾಸ್ಟ್ ಇಎಂಐ ಅನುಕೂಲವೇ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸ್ಮಾರ್ಟ್‌ಫೋನ್, ಬಟ್ಟೆ, ಶೂ, ಫ್ರಿಜ್, ವಾಷಿಂಗ್ ಮೆಷಿನ್... ಹೀಗೆ ಯಾವುದಾದರೊಂದು ಹೊಸ ವಸ್ತು ಖರೀದಿಸುವಾಗ ಪೂರ್ತಿ ಹಣ ಪಾವತಿ ಮಾಡಿ ಖರೀದಿಸಬೇಕೋ, ಅಥವಾ ಅದನ್ನು 'ಇಎಂಐ' (ಸುಲಭ ಮಾಸಿಕ ಕಂತುಗಳ) ಪರಿವರ್ತಿಸಿಕೊಳ್ಳಬೇಕೋ ಎನ್ನುವ ಪ್ರಶ್ನೆ ಎದುರಾಗುತ್ತದೆ. ಬಹಳ ಹಿಂದೆ, ವಸ್ತುಗಳನ್ನು ಖರೀದಿಸುವಾಗ ಸಾಲದ ಅಗತ್ಯವಿದ್ದರೆ ಅದಕ್ಕೆ ಅರ್ಜಿ ಸಲ್ಲಿಸಬೇಕಿತ್ತು, ಸಾಲಕ್ಕೆ ಅನುಮೋದನೆ ಸಿಕ್ಕ ಬಳಿಕವಷ್ಟೇ ಹಣ ಸಿಗುತ್ತಿತ್ತು. ಆದರೆ ಇದು ತಕ್ಷಣಕ್ಕೆ ಸಿಗುವ 'ಜೀರೊ ಕಾಸ್ಟ್ ಇಎಂಐ' ಕಾಲ. ಜೀರೊ ಕಾಸ್ಟ್ ಇಎಂಐ ಅಂದರೆ ಏನು? ನಿಜಕ್ಕೂ ಇದರಲ್ಲಿ ಯಾವುದೇ ಬಡ್ಡಿ ಅಥವಾ ಗೋಪ್ಯ ಶುಲ್ಕಗಳ ಹೊರೆ ಇಲ್ಲವೇ? ಇದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸೋಣ.

ಯಾವುದೇ ಉತ್ಪನ್ನ ಖರೀದಿಸಿದಾಗ ಅದರ ಮೌಲ್ಯವನ್ನು ಸುಲಭ ಕಂತುಗಳಲ್ಲಿ ಪ್ರತಿ ತಿಂಗಳು ಪಾವತಿಸುವ ಅನುಕೂಲವನ್ನು ಒದಗಿಸುತ್ತದೆ 'ಜೀರೊ ಕಾಸ್ಟ್ ಇಎಂಐ' ಸೌಲಭ್ಯ.

ಉದಾಹರಣೆಗೆ, ಜೀರೊ ಕಾಸ್ಟ್ ಇಎಂಐ ಯೋಜನೆಯ ಅಡಿ, ₹ 18 ಸಾವಿರ ಮೌಲ್ಯದ ಒಂದು ಫ್ರಿಜ್ ಕೊಳ್ಳುತ್ತೀರಿ ಎಂದು ಭಾವಿಸಿ. ಹೀಗಿದ್ದಾಗ ಪ್ರತಿ ತಿಂಗಳು ₹ 3 ಸಾವಿರದಂತೆ ಪಾವತಿಸಿ ಮುಂದಿನ 6 ತಿಂಗಳಲ್ಲಿ ಫ್ರಿಜ್ ಸಾಲ ತೀರಿಸಲು ಜೀರೊ ಕಾಸ್ಟ್ ಇಎಂಐ ಅನುಕೂಲ ಮಾಡಿಕೊಡುತ್ತದೆ.

ಬಹುಪಾಲು ಸಂದರ್ಭಗಳಲ್ಲಿ ಜೀರೊ ಕಾಸ್ಟ್ ಇಎಂಐ ಹೆಸರಿಗಷ್ಟೇ 'ಜೀರೊ ಕಾಸ್ಟ್' ಆಗಿರುತ್ತದೆ. ಕೆಲವು ಜೀರೊ ಕಾಸ್ಟ್ ಇಎಂಐಗಳಲ್ಲಿ ಗೋಪ್ಯ ಶುಲ್ಕಗಳಿರುತ್ತವೆ. ಇನ್ನು ಕೆಲವು ಯೋಜನೆಗಳಲ್ಲಿ ವಸ್ತುವಿನ ಎಂಆರ್‌ಪಿ ಬೆಲೆಯ ಜೊತೆ ಇಎಂಐನ ಬಡ್ಡಿ ಸೇರಿಕೊಂಡಿರುತ್ತದೆ! ಮತ್ತೊಂದಷ್ಟರಲ್ಲಿ ಕಂಪನಿಯವರು ವ್ಯಾಪಾರ ಹೆಚ್ಚಿಸಿಕೊಳ್ಳಲು ಜೀರೊ ಕಾಸ್ಟ್ ಇಎಂಐ ಬಡ್ಡಿಯ ಮೊತ್ತವನ್ನು ನಮ್ಮ ಪರವಾಗಿ ತಾವು ತುಂಬುತ್ತಾರೆ. ಹಾಗಾದರೆ, ಜೀರೊ ಕಾಸ್ಟ್ ಇಎಂಐ ಹೆಸರಲ್ಲಿ ನಾಜೂಕಿನ ಮಾರಾಟ ಹೇಗೆ ನಡೆಯುತ್ತದೆ?

1. ವಸ್ತುವಿನ ದರದಲ್ಲೇ ಬಡ್ಡಿ ಸೇರ್ಪಡೆ: ₹ 60 ಸಾವಿರದ ವಾಷಿಂಗ್ ಮೆಶಿನ್ ಖರೀದಿಗೆ ಮುಂದಾಗುತ್ತೀರಿ ಎಂದು ಭಾವಿಸಿ. ಆಗ ಅಂಗಡಿಯವರು, ಇದರ ಖರೀದಿಗೆ ಜೀರೊ ಕಾಸ್ಟ್ ಇಎಂಐ ಇದೆ ಎಂದು ಹೇಳುತ್ತಾರೆ. ₹ 10 ಸಾವಿರದಂತೆ ಆರು ಕಂತುಗಳಲ್ಲಿ ಪಾವತಿಸಬಹುದು ಎಂದು ವಿವರಿಸುತ್ತಾರೆ. ಆಗ ನೀವು ಜೀರೊ ಕಾಸ್ಟ್ ಇಎಂಐ ತೆಗೆದುಕೊಳ್ಳುವುದೋ ಇಲ್ಲ ಒಂದೇ ಬಾರಿ ಪಾವತಿ ಮಾಡಿ ಖರೀದಿಸುವುದೋ ಎನ್ನುವ ಗೊಂದಲಕ್ಕೆ ಬೀಳುತ್ತೀರಿ. ಹೀಗೆ ಗೊಂದಲಕ್ಕೆ ಸಿಲುಕಿ ಒಂದೇ ಬಾರಿ ಪಾವತಿಸಿ ಖರೀದಿಸಿದರೆ ವಾಷಿಂಗ್ ಮೆಷಿನ್ ಬೆಲೆ ಎಷ್ಟು ಎಂದು ಕೇಳುತ್ತೀರಿ. ಒಮ್ಮೆಗೇ ಪಾವತಿಸಿದರೆ ಬೆಲೆ ₹ 57 ಸಾವಿರ, ಜೀರೊ ಕಾಸ್ಟ್ ಇಎಂಐ ಅಡಿಯಲ್ಲಿ ₹ 60 ಸಾವಿರ ಎಂದು ವಿವರಿಸುತ್ತಾರೆ. ಅಂದರೆ ವಾಷಿಂಗ್ ಮೆಷಿನ್‌ನ ಅಸಲಿ ಬೆಲೆ ₹ 57 ಸಾವಿರವಾಗಿದ್ದು, ₹ 3 ಸಾವಿರ ಬಡ್ಡಿ ಬೆಲೆಯಲ್ಲೇ ಅಡಕವಾಗಿದೆ ಎಂದಾಯಿತು. ಹೀಗೆ ವಸ್ತುವಿನ ಬೆಲೆಯಲ್ಲೇ ಬಡ್ಡಿ ಸೇರಿಸುವ ಜಾಣ್ಮೆ ಕೆಲವು ಜೀರೊ ಕಾಸ್ಟ್ ಇಎಂಐಗಳಲ್ಲಿರುತ್ತದೆ.

2. ನಿರ್ವಹಣಾ ಶುಲ್ಕ ಪಡೆಯುವುದು: ಸ್ಮಾರ್ಟ್‌ಫೋನ್ ಖರೀದಿಗೆ ಮುಂದಾಗುತ್ತೀರಿ ಎಂದು ಭಾವಿಸಿ. ಅಂಗಡಿಯವರರು ನಿಮಗೆ ಸ್ಮಾರ್ಟ್‌ಫೋನ್ ಮಾದರಿಗಳನ್ನು ತೋರಿಸುವಾಗ, 'ಸರ್, ನೋಡಿ ಈ ₹ 30 ಸಾವಿರದ ಸ್ಮಾರ್ಟ್‌ಫೋನ್ ತಗೊಂಡ್ರೆ ಆರು ತಿಂಗಳಿಗೆ ಜೀರೊ ಕಾಸ್ಟ್ ಇಎಂಐ ಸಿಗುತ್ತೆ. ಆದ್ರೆ ಬರೀ ₹ 1 ಸಾವಿರ ನಿರ್ವಹಣಾ ಶುಲ್ಕ ಕಟ್ಟಬೇಕು' ಎಂದು ಹೇಳುತ್ತಾರೆ.

ಇಲ್ಲಿ ಸಾಲಕ್ಕೆ ಬಡ್ಡಿ ನೇರವಾಗಿ ಕೇಳುತ್ತಿಲ್ಲ, ಬದಲಿಗೆ ನಿರ್ವಹಣಾ ಶುಲ್ಕದ ರೂಪದಲ್ಲಿ ₹ 1 ಸಾವಿರ ಪಡೆಯುತ್ತಿದ್ದಾರೆ. ಅಂದರೆ ಪರೋಕ್ಷವಾಗಿ ₹ 1 ಸಾವಿರ ಬಡ್ಡಿ ಕಟ್ಟಿದಂತೆ ಆಯಿತು. ಅದಕ್ಕೇ ಹೇಳುವುದು ಜೀವನದಲ್ಲಿ ಯಾವುದೂ ಉಚಿತವಾಗಿ ಸಿಗದು ಎಂದು!

3. ಇಎಂಐ ಕನ್ವರ್ಶನ್ ಬೇಡ: ಬಹಳಷ್ಟು ಮಂದಿ ಕ್ರೆಡಿಟ್ ಕಾರ್ಡ್ ಬಳಸಿ ವಸ್ತು ಖರೀದಿಸಿದ ಮೇಲೆ ಅದನ್ನು ಇಎಂಐ ಆಗಿ ಪರಿವರ್ತಿಸಿಕೊಳ್ಳುತ್ತಾರೆ. ಇದು ಬಹಳ ದೊಡ್ಡ ತಪ್ಪು. ಕ್ರೆಡಿಟ್ ಕಾರ್ಡ್ ಬಳಸಿ ವಸ್ತುಗಳನ್ನು ಖರೀದಿಸಿದ ಮೇಲೆ ನಿರ್ದಿಷ್ಟ ಮೊತ್ತವನ್ನು ಇಎಂಐ ಆಗಿ ಪರಿವರ್ತಿಸಿಕೊಂಡರೆ ದೊಡ್ಡ ಮೊತ್ತದ ಬಡ್ಡಿ ಹೊರೆ ಹೊರಬೇಕಾಗುತ್ತದೆ. ಕ್ರೆಡಿಟ್ ಕಾರ್ಡ್ ಸಾಲಕ್ಕೆ ಶೇ 30ರಿಂದ ಶೇ 45ರವರೆಗೆ ಬಡ್ಡಿ ಕಟ್ಟಬೇಕಾಗುತ್ತದೆ. ಹಾಗಾಗಿ ಯಾರೂ ಈ ತಪ್ಪನ್ನು ಮಾಡಬಾರದು.

4. ನೈಜ ಜೀರೊ ಕಾಸ್ಟ್ ಇಎಂಐ: ಕೆಲವು ಖರೀದಿಗಳಲ್ಲಿ ವಾಸ್ತವದಲ್ಲಿ ಜೀರೊ ಕಾಸ್ಟ್ ಇಎಂಐ ಲಾಭ ಸಿಗುತ್ತದೆ. ಉದಾಹರಣೆಗೆ, ಕೆಲವು ಆನ್‌ಲೈನ್ ಮಾರಾಟ ಕಂಪನಿಗಳು ಹಬ್ಬದ ಸಂದರ್ಭಗಳಲ್ಲಿ ಖರೀದಿಸುವ ಗ್ರಾಹಕರಿಗೆ ಜೀರೊ ಕಾಸ್ಟ್ ಇಎಂಐ ಸೌಲಭ್ಯ ಕಲ್ಪಿಸುತ್ತವೆ. ಜೀರೊ ಕಾಸ್ಟ್‌ನ ನಿರ್ವಹಣಾ ಶುಲ್ಕ ಅಥವಾ ಬಡ್ಡಿ ಪಾವತಿಗೆ ಬ್ಯಾಂಕ್‌ಗಳೊಂದಿಗೆ ಕಂಪನಿಯವರು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ತಮಗೆ ಹೆಚ್ಚು ವ್ಯಾಪಾರ ಆಗಬೇಕು ಎನ್ನುವ ದೃಷ್ಟಿಯಿಂದ ಕೆಲವು ಖರೀದಿಗಳಿಗೆ ಮಾತ್ರ ಸಂಪೂರ್ಣ ಜೀರೊ ಕಾಸ್ಟ್ ಇಎಂಐಗಳನ್ನು ಕಂಪನಿಗಳು ಕೊಡುತ್ತವೆ. ಇಲ್ಲಿ ಗ್ರಾಹಕರಿಗೆ ಲಾಭವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ

ಕುಸಿದ ಷೇರುಪೇಟೆ ಸೂಚ್ಯಂಕಗಳು

ಸತತ ಎರಡು ವಾರ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಮತ್ತೆ ಕುಸಿತದ ಹಾದಿ ತುಳಿದಿವೆ. ಡಿಸೆಂಬರ್ 9ಕ್ಕೆ ಕೊನೆಗಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಇಳಿಕೆಯಾಗಿವೆ. 62,181 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.09ರಷ್ಟು ತಗ್ಗಿದೆ. 18,496 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.06ರಷ್ಟು ಇಳಿಕೆ ದಾಖಲಿಸಿದೆ.

ಆರ್‌ಬಿಐ ರೆಪೊ ದರ ಹೆಚ್ಚಳ ಮಾಡಿದ್ದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪ್ರಭಾವ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂತ ಶೇ 6ರಷ್ಟು ಕುಸಿದಿದೆ. ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3.4ರಷ್ಟು, ನಿಫ್ಟಿ ಎನರ್ಜಿ, ಫಾರ್ಮಾ ಮತ್ತು ಮಾಧ್ಯಮ ಸೂಚ್ಯಂಕಗಳು ತಲಾ ಶೇ 2ರಷ್ಟು ತಗ್ಗಿವೆ. ಮತ್ತೊಂದೆಡೆ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ 4.7ರಷ್ಟು ಮತ್ತು ಎಫ್‌ಎಂಸಿಜಿ ಸೂಚ್ಯಂಕ ಶೇ 2.2ರಷ್ಟು ಹೆಚ್ಚಳ ಕಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,305.97 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ₹ 3,712.08 ಕೋಟಿ ಮೌಲ್ಯದ ಷೇರುಗಳನ್ನು ದೇಶಿ ಸಾಂಸ್ಥಿಕ ಹೂಡಿಕೆದಾರರು ಖರೀದಿಸಿದ್ದಾರೆ. ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಮೈಂಡ್ ಟ್ರೀ, ಎಚ್‌ಸಿಎಲ್ ಟೆಕ್ನಾಲಜೀಸ್, ಟೆಕ್ ಮಹೀಂದ್ರ, ಜೊಮಾಟೊ, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಮತ್ತು ಟಾಟಾ ಮೋಟರ್ಸ್ ಕುಸಿತ ಕಂಡಿವೆ. ಬ್ಯಾಂಕ್ ಆಫ್ ಬರೋಡ, ಸೀಮನ್ಸ್, ಗೋದ್ರೆಜ್ ಕನ್ಸೂಮರ್ ಪ್ರಾಡಕ್ಟ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಹಿಂದೂಸ್ಥಾನ್ ಯುನಿಲಿವರ್ ಮತ್ತು ಇಂಟರ್‌ಗ್ಲೋಬ್ ಏವಿಯೇಷನ್ ಶೇ 4ರಿಂದ ಶೇ 10ರಷ್ಟು ಗಳಿಕೆ ಕಂಡಿವೆ.

ಮುನ್ನೋಟ: ಈ ವಾರ ಭಾರತ, ಅಮೆರಿಕ ಮತ್ತು ಬ್ರಿಟನ್ನಿನ ಹಣದುಬ್ಬರದ ದತ್ತಾಂಶಗಳು ಹೊರಬೀಳಲಿವೆ. ಹೂಡಿಕೆದಾರರು ಈ ಅಂಕಿ-ಅಂಶಗಳನ್ನು ಗಮನಿಸಲಿದ್ದಾರೆ. ಇದಲ್ಲದೆ ಅಮೆರಿಕ ಮತ್ತು ಬ್ರಿಟನ್ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಪ್ರಕಟಿಸಲಿವೆ. ಈ ಬೆಳವಣಿಗೆಗಳ ಜೊತೆಗೆ ದೇಶಿಯ ವಿದ್ಯಮಾನಗಳು ಸಹಿತ ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಏರ್ ಇಂಡಿಯಾ: 500 ವಿಮಾನ ಖರೀದಿ?

ಪ್ಯಾರಿಸ್/ನವದೆಹಲಿ (ರಾಯಿಟರ್ಸ್): ಏರ್ ಇಂಡಿಯಾ ಕಂಪನಿಯು ಗರಿಷ್ಠ 500 ವಿಮಾನಗಳ ಖರೀದಿಗೆ ಏರ್‌ಬಸ್ ಹಾಗೂ ಬೋಯಿಂಗ್ ಕಂಪನಿಗೆ ಕಾರ್ಯಾದೇಶ ನೀಡಲು ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಈ ಒಪ್ಪಂದದ ಒಟ್ಟು ಮೊತ್ತವು ₹ 8.24 ಲಕ್ಷ ಕೋಟಿಗಿಂತ ಹೆಚ್ಚಾಗಬಹುದು ಎಂದು ಮೂಲಗಳು ಹೇಳಿವೆ. ಇದು ವಿಮಾನಯಾನ ಕ್ಷೇತ್ರದಲ್ಲಿನ ಅತಿದೊಡ್ಡ ಖರೀದಿಗಳಲ್ಲಿ ಒಂದಾಗಲಿದೆ. ಹಿಂದೆ ಅಮೆರಿಕನ್ ಏರ್‌ಲೈನ್ಸ್ ಕಂಪನಿಯು 460 ವಿಮಾನಗಳನ್ನು ಖರೀದಿಸಿತ್ತು.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಏರ್‌ಬಸ್ ಹಾಗೂ ಬೋಯಿಂಗ್ ನಿರಾಕರಿಸಿವೆ. ಏರ್ ಇಂಡಿಯಾ ಕಡೆಯಿಂದಲೂ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ.

ಮಹಿಳೆಯರು, ಮಕ್ಕಳೇ ಗುರಿ ಸುಪ್ರೀಂಗೆ ಮಾಹಿತಿ

'ವಿದೇಶಿ ದೇಣಿಗೆ ಮತಾಂತರಕ್ಕೆ'

ನವದೆಹಲಿ (ಪಿಟಿಐ): ವಿದೇಶಿ ದೇಣಿಗೆ ನೆರವಿನಿಂದ ನಡೆಯುವ ಮತಾಂತರಕ್ಕೆ ಮಹಿಳೆ ಮತ್ತು ಮಕ್ಕಳೇ ಗುರಿ. ಇದನ್ನು ತಡೆಯುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದು ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಲಾಗಿದೆ.

ಈ ವಿಷಯವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿರುವ ಅಶ್ವಿನಿ ಉಪಾಧ್ಯಾಯ ಅವರು, ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠಕ್ಕೆ ಲಿಖಿತವಾಗಿ ಮಾಹಿತಿ ಸಲ್ಲಿಸಿದ್ದಾರೆ.

'ಧಾರ್ಮಿಕ ಮತಾಂತರ ತಡೆಯುವುದಕ್ಕೆ ಸಂಬಂಧಿಸಿ ಸರಿಯಾದ ಕಾನೂನುಗಳೇ ಇಲ್ಲ. ಈ ನ್ಯೂನತೆಯನ್ನೇ ದುರುಪಯೋಗಪಡಿಸಿಕೊಂಡು, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರನ್ನು ಮತಾಂತರ ಮಾಡಲಾಗುತ್ತಿದೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

ಕೆಲ ಎನ್‌ಜಿಒಗಳು ಮತಾಂತರ ನಡೆಸುತ್ತಿವೆ. ವಿದೇಶಗಳಿಂದ ದೇಣಿಗೆ ಸ್ವೀಕರಿಸುವ ಈ ಎನ್‌ಜಿಒಗಳಿಗೆ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ಹಲವು ವಿನಾಯಿತಿಗಳನ್ನು ನೀಡಲಾಗಿದೆ. ಈ ಕುರಿತು ಕೂಡ ಮರುಪರಿಶೀಲನೆ ನಡೆಸಬೇಕು ಎಂದು ಕೋರಿದ್ದಾರೆ.

ಡಿ. 12ರಂದು ಸುಪ್ರೀಂಕೋರ್ಟ್ ಈ ಪಿಐಎಲ್‌ಗೆ ಸಂಬಂಧಿಸಿದ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡಿಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಸುವರ್ಣಾವಕಾಶ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗೂ ಇಲ್ಲದ ಯುವಕ/ಯುವಕರಿಯರು ಬೇಕಾಗಿದ್ದಾರೆ, ಸಂಬಳ+ಓಟಿ 15,800/- 29000/- ಸಂಪರ್ಕಿಸಿ: 9164188386, 9164805206

ಸುವರ್ಣಾವಕಾಶ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗು ಇಲ್ಲದ ಯುವಕ/ಯುವತಿಯರು ಬೇಕಾಗಿದ್ದಾರೆ, Salary+OT 15,800 to 29,000. ಸಂಪರ್ಕಿಸಿ: 7996055015

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ದಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9845560219/ 9739847429.

ದೆಹಲಿ ಯುಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಗ್ವಾಲಿಯರ್, ಖಜರಾವೋ ಜಬಲ್ಪುರ್,ಉಜ್ಜಯಿನಿ ಓಂಕಾರೇಶ್ವರ್ 24.03.2023 03.04.2023 ರಿಂದ 10 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪೆಹಲ್ಗಾಂ ವೈಷ್ಣೋದೇವಿ 31.03.2023 07.04.2023 14.04.2023 ರಿಂದ 9/7 ದಿನಗಳು. ನೇಪಾಳ ಮುಕ್ತಿನಾಥ,ಪೋಖ್ರಾ,ಕಾಶಿ 31.03.2023 03.04.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

27.01.2023ರಿಂದ 15ದಿನಗಳ 4`ಜ್ಯೋತಿರ್ಲಿಂಗ`ಸಮೇತ ದ್ವಾರಕಾ,ಅಹಮದಾಬಾದ್, ಮಾತೃಗಯಾ,ರನ್`ಆಫ್`ಕಚ್, ಪಾವಘಡ,ಭುಜ್` ವಿಮಾನ`ಮತ್ತು`AC`ಬಸ್ಸು 28.12.2022ರಿಂದ ಪಂಚರಾಮಕ್ಷೇತ್ರ`ಸಮೇತ ಭದ್ರಾಚಲಂ,ರಾಮಾನುಜ`ಪ್ರತಿಮೆ ವಿಶಾಖಪಟ್ಟಣ,ಹೈದರಾಬಾದ್ 13ದಿನಗಳು`AC`ಬಸ್ಸಿನಲ್ಲಿ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865.

28.01.2023ರಿಂದ 7/9ದಿನಗಳ ವಿಮಾನ,AC`ಬಸ್ಸಿನಲ್ಲಿ ಕಾಶಿವಿಶ್ವನಾಥ,ಬೈದ್ಯನಾಥ್, 2`ಜ್ಯೋತಿರ್ಲಿಂಗ`ಸಮೇತ ಅಯೋಧ್ಯ,ಅಲಹಾಬಾದ್, ಗಯಾ.ಹಾಗೂ`7/9ದಿನಗಳ ರಾಮೇಶ್ವರ,ಕನ್ಯಾಕುಮಾರಿ, ಮದುರೈ,ನವಗ್ರಹ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಉದ್ಯೋಗಾವಕಾಶ

BOOK YOUR JOB AD IN PRAJAVANI ALL KARNATAKA ON WEDNESDAY + SUNDAY

@ 720/-* Per Sqcm Single Column

@ 675/-* Per Sqcm Double Column

conditions apply*

ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

ಸಚಿವ ಪಾಟೀಲ್ ಮೇಲೆ ಮಸಿ: 10 ಪೊಲೀಸರ ಅಮಾನತು

ಪುಣೆ (ಪಿಟಿಐ): ಮಹಾರಾಷ್ಟ್ರದ ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಸಚಿವ ಚಂದ್ರಕಾಂತ ಪಾಟೀಲ್ ಅವರ ಮೇಲೆ ಮಸಿ ಎರಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಭದ್ರತಾ ಲೋಪದ ಆರೋಪದಲ್ಲಿ ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪಿಂಪ್ರಿ ಚಿಂಚವಾಡ ಪೊಲೀಸ್ ಠಾಣೆಯ ಮೂವರು ಅಧಿಕಾರಿ ಮತ್ತು ಏಳು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಮಾಜ ಸುಧಾರಕ ಮಹಾತ್ಮ ಜ್ಯೋತಿಬಾ ಫುಲೆ ಅವರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದ ಪಾಟೀಲ ಅವರ ವಿರುದ್ಧ ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ ಶನಿವಾರ ಪಿಂಪ್ರಿ ಪ್ರದೇಶದಲ್ಲಿ ಮಸಿ ಎರಚಲಾಗಿತ್ತು. ಈ ಸಂದರ್ಭದಲ್ಲಿ ಸಚಿವರಿಗೆ ಸರಿಯಾದ ಭದ್ರತೆ ಒದಗಿಸದ ಆರೋಪದಲ್ಲಿ ಹತ್ತು ಮಂದಿಯನ್ನು ಅಮಾನತು ಮಾಡಲಾಗಿದೆ ಎಂದು ಪಿಂಪ್ರಿ ಚಿಂಚವಾಡ ಪೊಲೀಸ್ ಆಯುಕ್ತ ಅಂಕುಶ್ ಶಿಂದೆ ತಿಳಿಸಿದ್ದಾರೆ.

ಪಿಂಪ್ರಿಯ ಬಿಜೆಪಿ ಪದಾಧಿಕಾರಿಯೊಬ್ಬರ ಮನೆಯಿಂದ ಹೊರಬರುತ್ತಿದ್ದಾಗ ಸಚಿವರ ಮೇಲೆ ಮಸಿ ಎರಚಲಾಯಿತು. ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಏನಿದು ವಿವಾದ?: ಔರಂಗಾಬಾದ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಸಚಿವ ಪಾಟೀಲ್, 'ಅಂಬೇಡ್ಕರ್ ಮತ್ತು ಫುಲೆ ಅವರು ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಸರ್ಕಾರದ ಅನುದಾನ ಕೇಳಿರಲಿಲ್ಲ, ಶಾಲೆ ಮತ್ತು ಕಾಲೇಜುಗಳನ್ನು ಆರಂಭಿಸಲು ನಿಧಿ ಸಂಗ್ರಹಕ್ಕಾಗಿ ಅವರು ಜನರಿಂದ ಭಿಕ್ಷೆ ಬೇಡಿದ್ದರು' ಎಂದು ಹೇಳಿದ್ದರು. ಅವರು ಬಳಸಿದ 'ಭಿಕ್ಷೆ' ಪದ ವಿವಾದಕ್ಕ ಕಾರಣವಾಗಿತ್ತು.

ತಮ್ಮ ಮಾತನ್ನು ತಪ್ಪಾಗಿ ಅರ್ಥೈಸಲಾಗಿದೆ, ಹೀಗಾಗಿ ಭದ್ರತಾ ಲೋಪದ ಕಾರಣಕ್ಕೆ ಪೊಲೀಸರ ಮೇಲೆ ಕ್ರಮ ಕೈಗೊಳ್ಳದಂತೆ ಸಚಿವ ಪಾಟೀಲ್ ಅವರು ಗೃಹ ಸಚಿವ ದೇವೇಂದ್ರ ಫಡಣವೀಸ್ ಅವರಲ್ಲಿ ಮನವಿ ಮಾಡಿದ್ದರು.

ಸಂಕ್ಷಿಪ್ತ ಸುದ್ದಿ

ಉತ್ತರಪ್ರದೇಶ: ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಮೀರತ್ (ಪಿಟಿಐ): ಆಹಾರದಲ್ಲಿ ಅಮಲಿನ ಪದಾರ್ಥ ಬೆರೆಸಿ 17 ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಂಬಂಧ ಇಲ್ಲಿನ ಸರ್ಕಾರಿ ಶಾಲೆಯ ಪ್ರಾಂಶುಪಾಲರೊಬ್ಬರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಪ್ರಾಂಶುಪಾಲರು ನ.23ರಂದು 9 ವಿದ್ಯಾರ್ಥಿನಿಯರನ್ನು ಬೃಂದಾವನಕ್ಕೆ ಪ್ರವಾಸಕ್ಕೆ ಕರೆದೊಯ್ದು, ವಿದ್ಯಾರ್ಥಿನಿ ಸೇವಿಸುವ ಆಹಾರದಲ್ಲಿ ಅಮಲಿನ ಪದಾರ್ಥ ಬೆರೆಸಿ ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ನಿರ್ಭಯಾ ನಿಧಿ: ವಾಹನಗಳ ದುರ್ಬಳಕೆ

ಮುಂಬೈ (ಪಿಟಿಐ): ಮುಂಬೈ ಪೊಲೀಸರು 'ನಿರ್ಭಯಾ ನಿಧಿ' ಬಳಸಿ ಖರೀದಿಸಿದ್ದ ವಾಹನಗಳನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಶಾಸಕರು ಮತ್ತು ಸಂಸದರ ವೈ ಪ್ಲಸ್ ಭದ್ರತೆಗೆ ಬಳಕೆ ಮಾಡಲಾಗುತ್ತಿದೆ ಎಂದು ಭಾನುವಾರ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಹಿಳೆಯರ ವಿರುದ್ಧದ ಅಪರಾಧಗಳ ತಡೆ ಉದ್ದೇಶದಿಂದ ನಿರ್ಭಯಾ ನಿಧಿಯಡಿಯಲ್ಲಿ ಕಳೆದ ವರ್ಷ ಜೂನ್‌ನಲ್ಲಿ 255 ಕಾರುಗಳು, 513 ಬೈಕ್‌ಗಳನ್ನು ಖರೀದಿಸಲಾಗಿತ್ತು. ಈ ಪೈಕಿ 47 ಬೊಲೆರೊ ವಾಹನಗಳನ್ನು ಶಾಸಕರು ಮತ್ತು ಸಂಸದರ ಭದ್ರತೆಗೆ ಬಳಕೆ ಮಾಡಿಕೊಳ್ಳಲಾಗಿತ್ತು. ಬಳಿಕ 17 ವಾಹನಗಳನ್ನು ವಾಪಸ್ ಕಳುಹಿಸಲಾಗಿದೆ ಎಂದು ಅವರು ತಿಳಿಸಿದರು.

ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದ ಯೋಜನೆಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ 2013ರಿಂದ ರಾಜ್ಯ ಸರ್ಕಾರಗಳಿಗೆ ಅನುದಾನ ನೀಡುತ್ತಿದೆ.

ಅಬಕಾರಿ ಹಗರಣ: ಕವಿತಾ ವಿಚಾರಣೆ ನಡೆಸಿದ ಸಿಬಿಐ

ಹೈದರಾಬಾದ್ (ಪಿಟಿಐ): ದೆಹಲಿ ಅಬಕಾರಿ ನೀತಿಯ ಹಗರಣ ಸಂಬಂಧ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಪುತ್ರಿ ಬಿಆರ್‌ಎಸ್ ಶಾಸಕಿ ಕೆ. ಕವಿತಾ ಅವರನ್ನು ಅವರ ಮನೆಯಲ್ಲಿ ಸಿಬಿಐ ಅಧಿಕಾರಿಗಳು ಭಾನುವಾರ ಸುಮಾರು ಆರೂವರೆ ತಾಸು ವಿಚಾರಣೆ ನಡೆಸಿದರು.

ಕವಿತಾ ಅವರು ತನಿಖೆಗೆ ಸಂಪೂರ್ಣ ಸಹಕರಿಸಿದರು. ಸಿಬಿಐ ಇದಕ್ಕೂ ಮೊದಲು ಸಿಬಿಐ ಅಪರಾಧ ದಂಡ ಸಂಹಿತೆಯ ಸೆಕ್ಷನ್ 160 ಅಡಿಯಲ್ಲಿ ವಿಚಾರಣೆಗೆ ಹಾಜರಾಗಲು ಕವಿತಾ ಅವರಿಗೆ ಡಿ.2ರಂದು ನೋಟಿಸ್ ಜಾರಿ ಮಾಡಿತ್ತು. ಕವಿತಾ ಅವರ ಮೇಲೆ ದೆಹಲಿ ಅಬಕಾರಿ ಗುತ್ತಿಗೆಯಲ್ಲಿ ₹100 ಕೋಟಿ ಲಂಚ ಪಡೆದಿರುವ ಆರೋಪವಿದ್ದು, ಆರೋಪಿಗಳಲ್ಲಿ ಒಬ್ಬರಾದ ಉದ್ಯಮಿ ಅಮಿತ್ ಅರೋರ ಜಾರಿ ನಿರ್ದೇಶನಾಲಯ (ಇ.ಡಿ) ವಿಚಾರಣೆ ವೇಳೆ ಕವಿತಾ ಹೆಸರು ಹೇಳಿದ್ದರು. ದೆಹಲಿ ನ್ಯಾಯಾಲಯಕ್ಕೆ ಇ.ಡಿ ಸಲ್ಲಿಸಿದ ರಿಮ್ಯಾಂಡ್ ವರದಿಯಲ್ಲಿ ಕವಿತಾ ಹೆಸರು ಇತ್ತು.

ತನಿಖೆಗೆ ಸಿದ್ಧವೆಂದು ಹೇಳಿದ್ದ ಕವಿತಾ, ತಮ್ಮ ಬೆಂಬಲಿಗರು ಮತ್ತು ಕ್ಷೇತ್ರದ ಜನರಿಗೆ ತನಿಖೆ ವೇಳೆ ಪ್ರತಿಭಟಿಸದಂತೆ ಮನವಿ ಮಾಡಿದ್ದರು ಎಂದು ಮೂಲಗಳು ಹೇಳಿವೆ

'ಸಿಬಿಎಸ್‌ಸಿ ಪರೀಕ್ಷೆ: ನಕಲಿ ವೇಳಾಪಟ್ಟಿ'

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ 10 ಮತ್ತು 12ನೇ ತರಗತಿ ಪರೀಕ್ಷೆ ವೇಳಾಪಟ್ಟಿ ನಕಲಿ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಭಾನುವಾರ ಸ್ಪಷ್ಟಪಡಿಸಿದೆ.

'ಮಂಡಳಿಯು ಶೀಘ್ರದಲ್ಲಿಯೇ ಅಧಿಕೃತ ಪರೀಕ್ಷಾ ವೇಳಾಪಟ್ಟಿ ಬಿಡುಗಡೆ ಮಾಡಲಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಅಧಿಕೃತ ಮಾಹಿತಿಗೆ ಕಾಯಬೇಕು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಮೊದಲು 2023 ಫೆ.15ರಿಂದ 10 ಮತ್ತು 12ನೇ ತರಗತಿಯ ಥಿಯರಿ ಪರೀಕ್ಷೆಗಳನ್ನು ಆರಂಭಿಸುವುದಾಗಿ ಮಂಡಳಿ ಪ್ರಕಟಿಸಿತ್ತು. 'ಪ್ರಾಯೋಗಿಕ ಪರೀಕ್ಷೆಗಳು ಜನವರಿ 1ರಿಂದ ಆರಂಭವಾಗಲಿವೆ. ಇವುಗಳ ಪಠ್ಯವನ್ನು ಅಷ್ಟರೊಳಗೆ ಮುಗಿಸಲು ಶಾಲೆಗಳಿಗೆ ಸೂಚನೆ ನೀಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನವದೆಹಲಿಯ ಓಕ್ಲಾ ಮೈದಾನದಲ್ಲಿ ನಡೆದ ಕಾಮಿಕ್ ಕಾನ್ 2022 ಕಾರ್ಯಕ್ರಮದಲ್ಲಿ ಭಾನುವಾರ ಕಾಮಿಕ್ ಪಾತ್ರಧಾರಿ ಜತೆಗೆ ಯುವತಿಯರು ಸೆಲ್ಫಿ ತೆಗೆದುಕೊಂಡರು. — ಪಿಟಿಐ ಚಿತ್ರ

ಕೋವಿನ್ ಪೋರ್ಟಲ್‌ಗೆ ಇನ್‌ಕೋವ್ಯಾಕ್: ಭಾರತ್ ಬಯೋಟೆಕ್ ಮನವಿ

ಹೈದರಾಬಾದ್ (ಪಿಟಿಐ): ಭಾರತ್ ಬಯೋಟೆಕ್ ಕೋವಿಡ್ 19 ವಿರುದ್ಧ ಮೂಗಿನ ಮೂಲಕ ಹಾಕುವ ಲಸಿಕೆ ಇನ್‌ಕೋವ್ಯಾಕ್ (ಇಂಟ್ರಾನಾಸಲ್) ಅನ್ನು ಕೋವಿನ್ ಪೋರ್ಟಲ್‌ನಲ್ಲಿ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಇದು ಲಸಿಕೆ ಹಾಕಿಸಿಕೊಂಡವರಿಗೆ ಪ್ರಮಾಣಪತ್ರ ಪಡೆಯಲು ಅನುವು ಮಾಡಿಕೊಡುತ್ತದೆ. ಜಾಗತಿಕವಾಗಿ ಇಂಟ್ರಾನಾಸಲ್ ಲಸಿಕೆ ತಯಾರಿಕೆ ಮತ್ತು ವಿತರಣೆಗಾಗಿ ಭಾರತ್ ಬಯೋಟೆಕ್ ಪ್ರಸ್ತುತ ಅಂತರರಾಷ್ಟ್ರೀಯ ಸಂಭಾವ್ಯ ಪಾಲುದಾರರೊಂದಿಗೆ ಚರ್ಚಿಸುತ್ತಿದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ.

ಇನ್‌ಕೋವಾಕ್ ಅನ್ನು ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಬಳಸಲು ಅನುಮೋದಿಸಲಾಗಿದೆ. ಲಸಿಕೆ ಪಡೆದವರಿಗೆ ಪ್ರಮಾಣ ಪತ್ರ ಬೇಕಾಗುವುದರಿಂದ, ಕೋವಿನ್ ಪೋರ್ಟಲ್‌ನಲ್ಲಿ ಇದನ್ನು ಸೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಇದನ್ನು ಸಕ್ರಿಯಗೊಳಿಸಿದರೆ, ಕೋವಿಡ್ ವಿರುದ್ಧದ ಪ್ರತಿರಕ್ಷಣೆಗೆ ಇಂಟ್ರಾನಾಸಲ್ ಲಸಿಕೆ ಪರಿಚಯಿಸಿದ ಕೆಲವೇ ದೇಶಗಳಲ್ಲಿ ಭಾರತವೂ ಒಂದೆನಿಸಲಿದೆ ಎಂದು ಮೂಲಗಳು ತಿಳಿಸಿವೆ.

ವಾಷಿಂಗ್ಟನ್ ವಿಶ್ವವಿದ್ಯಾಲಯ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ವಿಶ್ವದ ಮೊದಲ ಇಂಟ್ರಾನಾಸಲ್ ಕೋವಿಡ್-19 ಲಸಿಕೆ ಇನ್‌ಕೋವ್ಯಾಕ್ (ಬಿಬಿವಿ154) ಅನ್ನು 18 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ತುರ್ತು ಪರಿಸ್ಥಿತಿಯಲ್ಲಿ ನೀಡಲು ಭಾರತದ ಡ್ರಗ್ಸ್ ಕಂಟ್ರೋಲರ್ ಜನರಲ್ (ಡಿಜಿಸಿಐ) ಅನುಮೋದನೆ ಸಿಕ್ಕಿದೆ ಎಂದು ಲಸಿಕೆ ತಯಾರಕರು ಸೆ.6 ರಂದು ಘೋಷಿಸಿದ್ದರು.

ಮಿಜೋರಾಂ: ಅಡಿಕೆ ಕಳ್ಳ ಸಾಗಣೆ ಶಂಕೆ– ಆರು ವಾಹನಗಳಿಗೆ ಬೆಂಕಿ

ಐಜ್ವಾಲ್, ಮಿಜೋರಾಂ (ಪಿಟಿಐ): ಮ್ಯಾನ್ಮಾರ್‌ನಿಂದ ಅಡಿಕೆ ಕಳ್ಳಸಾಗಣೆ ಮಾಡಲಾಗುತ್ತಿದೆ ಎಂದು ಆರೋಪದ ಮೇಲೆ, ರಾಜ್ಯದ ಮಮಿತ್ ಜಿಲ್ಲೆಯಲ್ಲಿ ಗುಂಪೊಂದು ಕನಿಷ್ಠ ಆರು ವಾಹನಗಳಿಗೆ ಬೆಂಕಿ ಹಚ್ಚಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

'ಝುಮುವಾಂಗ್ ಮತ್ತು ಝೂಲ್‌ನುವಾಮ್ ಎಂಬ ಗ್ರಾಮಗಳ ಬಳಿ, ರಾಷ್ಟ್ರೀಯ ಹೆದ್ದಾರಿ 108ರಲ್ಲಿ ಶನಿವಾರ ಈ ಘಟನೆ ನಡೆದಿದೆ. 50 ಜನರಿದ್ದ ಗುಂಪು, ವಾಹನಗಳನ್ನು ತಡೆದು ಬೆಂಕಿ ಹಚ್ಚಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಾಲ್‌ತಾಂಗ್‌ಪುಯಿ ಪುಲಮ್ಟೆ ಹೇಳಿದ್ದಾರೆ.

'ಘಟನೆ ಕುರಿತು ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಲಾಗಿದೆ. ಯಾರೂ ಈ ಘಟನೆಯ ಹೊಣೆ ಹೊತ್ತುಕೊಂಡಿಲ್ಲ ಹಾಗೂ ಈ ವರೆಗೆ ಯಾರನ್ನೂ ಬಂಧಿಸಲಾಗಿಲ್ಲ' ಎಂದು ಅವರು ತಿಳಿಸಿದ್ದಾರೆ.

ಮ್ಯಾನ್ಮಾರ್‌ನಿಂದ ಅಡಿಕೆಯನ್ನು ಕಳ್ಳ ಸಾಗಣೆ ಮಾಡಲಾಗುತ್ತಿದ್ದು, ಇದನ್ನು ತಡೆಯಬೇಕು ಎಂದು ಮಮಿತ್ ಜಿಲ್ಲೆಯ ಅಡಿಕೆ ಬೆಳೆಗಾರರ ಸಂಘ ಕಳೆದ ತಿಂಗಳು ಒತ್ತಾಯಿಸಿತ್ತು. ಕಳ್ಳಸಾಗಣೆ ತಡೆಯದಿದ್ದರೆ ಮುಂದಾಗುವ ಯಾವುದೇ ಅಹಿತಕರ ಘಟನೆಗೆ ತಾನು ಹೊಣೆಯಲ್ಲ ಎಂದೂ ಸಂಘ ಎಚ್ಚರಿಸಿತ್ತು.

ಒಲಿವಿಯೆರ್ ಜಿರೋಡ್ ಗೆಲುವಿನ ಗೋಲು; ಪೆನಾಲ್ಟಿ ಕಿಕ್‌ನಲ್ಲಿ ಎಡವಿದ ಹ್ಯಾರಿ ಕೇನ್

ಸೆಮಿಗೆ ಫ್ರಾನ್ಸ್; ಹೊರಬಿದ್ದ ಇಂಗ್ಲೆಂಡ್

ಫ್ರಾನ್ಸ್‌ನ ಒಲಿವಿಯೆರ್ ಜಿರೋಡ್ ಅವರು ಹೆಡರ್ ಮೂಲಕ ಗೋಲು ಗಳಿಸಿದ ಕ್ಷಣ –ಎಎಫ್‌ಪಿ ಚಿತ್ರ

ದೋಹಾ (ರಾಯಿಟರ್ಸ್): ಒಲಿವಿಯೆರ್ ಜಿರೋಡ್ ಅವರು ಎರಡನೇ ಅವಧಿಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡವನ್ನು ಮಣಿಸಿದ ಹಾಲಿ ಚಾಂಪಿಯನ್ ಫ್ರಾನ್ಸ್, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಅಲ್ ಖೋರ್‌ನ ಅಲ್ ಬೈತ್ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಫ್ರಾನ್ಸ್ 2–1 ಗೋಲುಗಳಿಂದ ಹ್ಯಾರಿ ಕೇನ್ ಬಳಗವನ್ನು ಸೋಲಿಸಿತು. ತಂಡಕ್ಕೆ ದೊರೆತ ಎರಡನೇ ಪೆನಾಲ್ಟಿ ಕಿಕ್ ಅವಕಾಶವನ್ನು ಕೈಚೆಲ್ಲಿದ ಕೇನ್ 'ದುರಂತ ನಾಯಕ' ಎನಿಸಿದರು.

ಯೂರೋಪ್‌ನ ಎರಡು ಬಲಿಷ್ಠ ತಂಡಗಳ ನಡುವಣ ಪಂದ್ಯ ಸಾಕಷ್ಟು ಪೈಪೋಟಿಯಿಂದ ಕೂಡಿತ್ತು. ಒರೆಲಿಯಾನ್ ಚುವಮೆನಿ (17ನೇ ನಿ.) ಮತ್ತು ಜಿರೋಡ್ (78ನೇ ನಿ.) ಅವರು ಫ್ರಾನ್ಸ್ ಪರ ಗೋಲು ಗಳಿಸಿದರೆ, ಇಂಗ್ಲೆಂಡ್ ತಂಡದ ಏಕೈಕ ಗೋಲನ್ನು ಕೇನ್ 54ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ತಂದಿತ್ತರು. ಬುಧವಾರ ರಾತ್ರಿ ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಫ್ರಾನ್ಸ್ ತಂಡ ಮೊರೊಕ್ಕೊ ವಿರುದ್ಧ ಪೈಪೋಟಿ ನಡೆಸಲಿದೆ.

ಟೂರ್ನಿಯಲ್ಲಿ ಐದು ಗೋಲು ಗಳಿಸಿರುವ ಸ್ಟಾರ್ ಆಟಗಾರ ಕಿಲಿಯಾನ್ ಎಂಬಾಪೆ ಅವರನ್ನು ಇಂಗ್ಲೆಂಡ್‌ನ ಡಿಫೆಂಡರ್‌ಗಳು ಕಟ್ಟಿಹಾಕಿದಾಗ, ಅನುಭವಿ ಜಿರೋಡ್ ತಂಡದ ನೆರವಿಗೆ ನಿಂತರು. ಎದುರಾಳಿ ತಂಡದ ಗೋಲು ಗಳಿಸುವ ಕೆಲವು ಪ್ರಯತ್ನಗಳನ್ನು ಅದ್ಭುತವಾಗಿ ತಡೆದ ಗೋಲ್‌ಕೀಪರ್ ಹ್ಯೂಗೊ ಲಾರಿಸ್ ಅವರೂ ಫ್ರಾನ್ಸ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಫ್ರಾನ್ಸ್ ತಂಡದ ಎರಡೂ ಗೋಲುಗಳಿಗೆ 'ಅಸಿಸ್ಟ್' ನೀಡಿದ ಆಂಟೋನ್ ಗ್ರೀಸ್‌ಮನ್ ಅವರ ಆಟವನ್ನೂ ಮರೆಯುವಂತಿಲ್ಲ.

ಫ್ರಾನ್ಸ್ ತಂಡ ಈ ಪಂದ್ಯದಲ್ಲಿ ನಿರೀಕ್ಷೆಗಿಂತಲೂ ಬೇಗನೇ ಗೋಲಿನ ಖಾತೆ ತೆರೆಯಿತು. ಉಸ್ಮಾನ್ ದೆಂಬೆಲೆ ಅವರಿಂದ ದೊರೆತ ಪಾಸ್‌ನಲ್ಲಿ ಗ್ರೀಸ್‌ಮನ್, ಚೆಂಡನ್ನು ಚುವಮೆನಿ ಅವರತ್ತ ಕಳುಹಿಸಿದರು. ಅವರು 25 ಮೀಟರ್ಸ್ ದೂರದಿಂದ ವೇಗವಾಗಿ ಒದ್ದ ಚೆಂಡು ಗೋಲ್‌ಕೀಪರ್ ಜೋರ್ಡನ್ ಪಿಕ್‌ಫೋರ್ಡ್ ಅವರನ್ನು ತಪ್ಪಿಸಿ ಗುರಿ ಸೇರಿತು.

ಎರಡನೇ ಅವಧಿಯ ಏಳನೇ ನಿಮಿಷದಲ್ಲಿ ಚುವಮೆನಿ, ಎದುರಾಳಿ ತಂಡದ ಬುಕಾಯೊ ಸಾಕಾ ಅವರನ್ನು ಪೆನಾಲ್ಟಿ ಆವರಣದಲ್ಲಿ ಬೀಳಿಸಿದರು. ರೆಫರಿ ಇಂಗ್ಲೆಂಡ್‌ಗೆ ಪೆನಾಲ್ಟಿ ಕಿಕ್ ಅವಕಾಶ ನೀಡಿದರು. ಕೇನ್ ಅವರು ಚೆಂಡನ್ನು ಯಶಸ್ವಿಯಾಗಿ ಗುರಿ ಸೇರಿಸಿ 1–1 ರಲ್ಲಿ ಸಮಬಲಕ್ಕೆ ಕಾರಣರಾದರು.

78ನೇ ನಿಮಿಷದಲ್ಲಿ ಫ್ರಾನ್ಸ್ ಮತ್ತೆ ಮುನ್ನಡೆ ಗಳಿಸಿತು. ಗ್ರೀಸ್‌ಮನ್ ಅವರು ನೀಡಿದ ಕ್ರಾಸ್‌ನಲ್ಲಿ ಜಿರೋಡ್ ಹೆಡರ್ ಮೂಲಕ ಗೋಲು ಗಳಿಸಿದರು.

ನಿಗದಿತ ಅವಧಿ ಕೊನೆಗೊಳ್ಳಲು ಆರು ನಿಮಿಷಗಳು ಇದ್ದಾಗ ಇಂಗ್ಲೆಂಡ್‌ಗೆ ಪೆನಾಲ್ಟಿ ಕಿಕ್ ದೊರೆಯಿತು. ಥಿಯೊ ಹೆರ್ನಾಂಡೆಜ್ ಅವರು ಇಂಗ್ಲೆಂಡ್‌ನ ಸಬ್‌ಸ್ಟಿಟ್ಯೂಟ್ ಆಟಗಾರ ಮೇಸನ್ ಮೌಂಟ್ ಅವರನ್ನು ಕೆಳಕ್ಕೆ ಬೀಳಿಸಿದ್ದಕ್ಕೆ ರೆಫರಿ ಪೆನಾಲ್ಟಿ ನೀಡಿದರು. ಪಂದ್ಯದಲ್ಲಿ ತಮ್ಮ ಎರಡನೇ ಪೆನಾಲ್ಟಿ ಕಿಕ್ ತೆಗೆದುಕೊಂಡ ಕೇನ್, ಗುರಿ ಸೇರಿಸಲು ವಿಫಲರಾದರು.

ಅವರು ಒದ್ದ ಚೆಂಡು ಮಿಂಚಿನ ವೇಗದಲ್ಲಿ ಕ್ರಾಸ್ ಬಾರ್ ದಾಟಿಕೊಂಡು ಗ್ಯಾಲರಿಯತ್ತ ಸಾಗುತ್ತಿದ್ದಂತೆಯೇ ಇಂಗ್ಲೆಂಡ್‌ನ ಸೆಮಿ ಪ್ರವೇಶದ ಸಾಧ್ಯತೆಯೂ ಅಸ್ತಮಿಸಿತು.

'ಇಂಗ್ಲೆಂಡ್‌ನಂತಹ ಬಲಿಷ್ಠ ತಂಡದ ವಿರುದ್ಧ ಗೆದ್ದು ನಾಲ್ಕರಘಟ್ಟ ತಲುಪು ಸಾಧ್ಯವಾಗಿರುವುದು ಸಂತಸ ಉಂಟುಮಾಡಿದೆ' ಎಂದು ಫ್ರಾನ್ಸ್ ಕೋಚ್ ದಿದಿಯೆರ್ ದೆಶಾಂಪ್ ಪ್ರತಿಕ್ರಿಯಿಸಿದ್ದಾರೆ.

ರೂನಿ ದಾಖಲೆ ಸರಿಗಟ್ಟಿದ ಕೇನ್

ಹ್ಯಾರಿ ಕೇನ್ ಅವರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಇಂಗ್ಲೆಂಡ್ ಪರ ಅತ್ಯಧಿಕ ಗೋಲುಗಳನ್ನು ಗಳಿಸಿರುವ ವೇಯ್ನ್ ರೂನಿ ಅವರ ದಾಖಲೆ ಸರಿಗಟ್ಟಿದ್ದಾರೆ. ಫ್ರಾನ್ಸ್ ವಿರುದ್ಧ ಗಳಿಸಿದ ಗೋಲು ಇಂಗ್ಲೆಂಡ್ ಪರ ಅವರ 53ನೇ ಗೋಲು ಆಗಿತ್ತು. ರೂನಿ ಕೂಡಾ ಇಷ್ಟೇ ಗೋಲುಗಳನ್ನು ಹೊಡೆದಿದ್ದಾರೆ. ಕೇನ್ ತಮ್ಮ ಎರಡನೇ ಪೆನಾಲ್ಟಿ ಕಿಕ್‌ನಲ್ಲೂ ಗೋಲು ಗಳಿಸಿದ್ದರೆ, ರೂನಿ ದಾಖಲೆ ಮುರಿಯುವ ಅವಕಾಶವಿತ್ತು.

ಸೆಮಿಫೈನಲ್ ಪಂದ್ಯ

ಡಿ.13	ಅರ್ಜೆಂಟೀನಾ Vs ಕ್ರೊವೇಷ್ಯಾ	ತಡರಾತ್ರಿ 12.30
ಡಿ.14	ಫ್ರಾನ್ಸ್ Vs ಮೊರೊಕ್ಕೊ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಗೋಲು ವಿವರ

ಫ್ರಾನ್ಸ್–2
ಒರೆಲಿಯಾನ್ ಚುವಮೆನಿ (17ನೇ ನಿ.)
ಒಲಿವಿಯೆರ್ ಜಿರೋಡ್ (78ನೇ ನಿ.)
ಇಂಗ್ಲೆಂಡ್–1
ಹ್ಯಾರಿ ಕೇನ್ (53ನೇ ನಿ.)

ಪೆನಾಲ್ಟಿ ಕಿಕ್‌ನಲ್ಲಿ ಗೋಲು ಗಳಿಸಲು ವಿಫಲರಾದ ಹ್ಯಾರಿ ಕೇನ್ (ಬಲ) ಅವರನ್ನು ಸಹ ಆಟಗಾರ ಸಂತೈಸಿದರು –ಎಎಫ್‌ಪಿ ಚಿತ್ರ

'ಪ್ರಿಯ ಕ್ರಿಕೆಟ್... ನನಗೆ ಇನ್ನೊಂದು ಅವಕಾಶ ಕೊಡು'

ಕರುಣ್ ನಾಯರ್

ಬೆಂಗಳೂರು: 'ಪ್ರಿಯ ಕ್ರಿಕೆಟ್, ನನಗೆ ಇನ್ನೊಂದು ಅವಕಾಶ ಕೊಡು'–

ಕರ್ನಾಟಕ ಕ್ರಿಕೆಟ್ ತಂಡದ ಆಟಗಾರ ಕರುಣ್ ನಾಯರ್ ಅವರು ಮಾಡಿರುವ ಈ ಟ್ವೀಟ್ ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಶನಿವಾರ ಪ್ರಕಟಿಸಲಾದ ಕರ್ನಾಟಕ ಕ್ರಿಕೆಟ್ ತಂಡದಲ್ಲಿ ಅವರಿಗೆ ಸ್ಥಾನ ಲಭಿಸಿಲ್ಲ. ಕಳೆದ ಕೆಲವು ಕಾಲದಿಂದ ಅವರು ಫಾರ್ಮ್ ಕಳೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಈಚೆಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಮತ್ತು ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳಿಗೂ ಪರಿಗಣಿಸಿರಲಿಲ್ಲ.

ಆದರೆ ರಣಜಿ ಟೂರ್ನಿಯಲ್ಲಿ ಆಡುವ ಕರ್ನಾಟಕದ ಸಂಭವನೀಯರ ತಂಡದಲ್ಲಿ ಅವರಿಗೆ ಸ್ಥಾನ ಕಲ್ಪಿಸಲಾಗಿತ್ತು. ಅಂತಿಮ ಪಟ್ಟಿಯಲ್ಲಿ ಕೈಬಿಡಲಾಗಿದೆ. ಉದಯೋನ್ಮುಖ ಆಟಗಾರರಿಗೆ ಅವಕಾಶ ನೀಡಲಾಗಿದೆ.

ಇದರ ಬೆನ್ನಲ್ಲೇ ಕರುಣ್ ಈ ಟ್ವೀಟ್ ಮಾಡಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ದಾಖಲಿಸಿದ ಭಾರತದ ಎರಡನೇ ಆಟಗಾರನೆಂಬ ಹೆಗ್ಗಳಿಕೆ ಕರುಣ್ ಅವರದ್ದು.

ಕರ್ನಾಟಕದ ಪರವಾಗಿ 85 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. 5922 ರನ್ ಗಳಿಸಿದ್ದಾರೆ. 15 ಶತಕ ಹಾಗೂ 27 ಅರ್ಧಶತಕಗಳು ಅದರಲ್ಲಿ ಸೇರಿವೆ. 31 ವರ್ಷದ ಕಳೆದ ಬಾರಿಯ ರಣಜಿ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಆಡಿದ್ದರು.

ಅಂತರ ವಿ.ವಿ ಹಾಕಿ: ಜೈನ್ ವಿ.ವಿಗೆ ಜಯ

ಬೆಂಗಳೂರು: ಎಂ.ಎ.ಗೌತಮ್ ಮತ್ತು ದೇಶ್ ಪೂವಯ್ಯ ಅವರ ಉತ್ತಮ ಆಟದ ನೆರವಿನಿಂದ ಜೈನ್ ವಿಶ್ವವಿದ್ಯಾಲಯ ತಂಡದವರು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿ.ವಿ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಜೈನ್ ವಿ.ವಿ. 6–0 ಗೋಲುಗಳಿಂದ ಆಂಧ್ರ ಪ್ರದೇಶದ ವಿಕ್ರಮ ಸಿಂಹಪುರಿ ವಿ.ವಿ ತಂಡವನ್ನು ಮಣಿಸಿತು.

ಗೌತಮ್ ಅವರು ಪಂದ್ಯದ 8, 9 ಮತ್ತು 23ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ದೇಶ್ ಪೂವಯ್ಯ (4 ಮತ್ತು 13ನೇ ನಿ.) ಎರಡು ಗೋಲುಗಳನ್ನು ತಂದಿತ್ತರೆ, ಮತ್ತೊಂದು ಗೋಲನ್ನು ಬಿ.ಆರ್.ಬಿಪಿನ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಮೈಸೂರು ವಿ.ವಿ 4–0 ಗೋಲುಗಳಿಂದ ತೆಲಂಗಾಣದ ಮಹಾತ್ಮಾ ಗಾಂಧಿ ವಿ.ವಿ ವಿರುದ್ಧ ಗೆದ್ದಿತು. ವಿ.ಆರ್.ಶಬರೀಷ್, ಬಿ.ಪಿ.ಅಪ್ಪಚ್ಚು, ಸುಚನ್ ಸುಬ್ಬಯ್ಯ ಮತ್ತು ಪುರುಷೋತ್ತಮ ಅವರು ಮೈಸೂರು ತಂಡದ ಪರ ಗೋಲು ಗಳಿಸಿದರು.

ಚಾಂಪಿಯನ್ ಪಟ್ಟ ಗಳಿಸಿದ ಕರ್ನಾಟಕದ ಪುರುಷರ ತಂಡ ಮತ್ತು ರನ್ನರ್ ಅಪ್ ಆದ ಮಹಿಳಾ ತಂಡದವರ ಸಂಭ್ರಮ

ನೆಟ್‌ಬಾಲ್: ಮಹಿಳಾ ವಿಭಾಗದಲ್ಲಿ ರನ್ನರ್ ಅಪ್

ಕರ್ನಾಟಕ ಪುರುಷರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿದ್ದಾಜಿದ್ದಿಯ ಹೋರಾಟದಲ್ಲಿ ಮೇಲುಗೈ ಸಾಧಿಸಿದ ಕರ್ನಾಟಕ ಪುರುಷರ ತಂಡ, ರಾಜ್ಯ ಅಮೆಚೂರ್ ನೆಟ್‌ಬಾಲ್ ಸಂಸ್ಥೆ ಮತ್ತು ಚಿಕ್ಕಮಗಳೂರು ಜಿಲ್ಲಾ ನೆಟ್‌ಬಾಲ್ ಸಂಸ್ಥೆ ಆಯೋಜಿಸಿದ ದಕ್ಷಿಣ ವಲಯ ನೆಟ್‌ಬಾಲ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಇಲ್ಲಿನ ಆದಿಚುಂಚನಗಿರಿ ತಾಂತ್ರಿಕ ವಿದ್ಯಾಲಯದ ಬಿಜಿಎಸ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಆತಿಥೇಯರು ಕೇರಳ ವಿರುದ್ಧ 27–21ರಲ್ಲಿ ಗೆಲುವು ಸಾಧಿಸಿದರು.

ಉಭಯ ತಂಡಗಳ ನಡುವಿನ ಪಂದ್ಯ ಆರಂಭದಿಂದಲೇ ರೋಚಕವಾಗಿತ್ತು. ಶೂಟರ್, ಅಂತರರಾಷ್ಟ್ರೀಯ ಆಟಗಾರ ನಿತಿನ್ ಮತ್ತು ಆಲ್‌ರೌಂಡರ್ ಸಾಕ್ಷಾತ್ ಅವರ ಅಮೋಘ ಪ್ರದರ್ಶನವು ಕ್ರೀಡಾಪ್ರಿಯರನ್ನು ರಂಜಿಸಿತು. ಕೇರಳದ ಡಿಫೆಂಡರ್, ಅಂತರರಾಷ್ಟ್ರೀಯ ಆಟಗಾರ ಹಂಸ ಕೂಡ ಮಿಂಚಿದರು. ಹೀಗಾಗಿ ಪ್ರತಿಯೊಂದು ಪಾಯಿಂಟ್ ಕೂಡ ಅಮೂಲ್ಯವಾಗಿತ್ತು. ಮೊದಲಾರ್ಧದ ಮುಕ್ತಾಯಕ್ಕೆ ಕರ್ನಾಟಕ ಎರಡು ಪಾಯಿಂಟ್‌ಗಳಿಂದ (17–15) ಮುಂದಿತ್ತು.

ಭಾರಿ ಪೈಪೋಟಿ ಕಂಡ ಮಹಿಳಾ ವಿಭಾಗದ ಫೈನಲ್‌ನಲ್ಲಿ ಕೇರಳದ ವಿರುದ್ಧ 27–29ರಲ್ಲಿ ಸೋತ ಕರ್ನಾಟಕ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಪುರುಷರ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡ ತೆಲಂಗಾಣವನ್ನು 17–5ರಲ್ಲಿ ಮತ್ತು ತಮಿಳುನಾಡು ತಂಡವನ್ನು ಕೇರಳ 26–11ರಲ್ಲಿ ಸೋಲಿಸಿತು. ಮಹಿಳೆಯರ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ 13–3ರಲ್ಲಿ ಆಂಧ್ರಪ್ರದೇಶವನ್ನು ಮತ್ತು ಕೇರಳ 14–5ರಲ್ಲಿ ಪುದುಚೇರಿಯನ್ನು ಮಣಿಸಿತು.

ವೈಯಕ್ತಿಕ ಪ್ರಶಸ್ತಿಗಳು: ಪುರುಷರ ವಿಭಾಗ: ಉತ್ತಮ ಶೂಟರ್: ನಿತಿನ್ (ಕರ್ನಾಟಕ); ಉತ್ತಮ ಡಿಫೆಂಡರ್: ಹಂಸ (ಕೇರಳ); ಉತ್ತಮ ಆಲ್‌ರೌಂಡರ್: ಸಾಕ್ಷಾತ್ ಎಚ್.ಎಸ್ (ಕರ್ನಾಟಕ). ಮಹಿಳೆಯರ ವಿಭಾಗ: ಉತ್ತಮ ಶೂಟರ್: ನಂದಿನಿ ಎಲ್.ಜಿ (ಕರ್ನಾಟಕ), ಉತ್ತಮ ಡಿಫೆಂಡರ್: ಮೆರಿನಾ ಸಿಮೋನ್ (ಕೇರಳ); ಉತ್ತಮ ಆಲ್‌ರೌಂಡರ್: ಮಂಜಿಮ (ಕೇರಳ).

ಮಹಿಳಾ ಕ್ರಿಕೆಟ್: ಸ್ಮೃತಿ ಮಂದಾನ, ರಿಚಾ ಮಿಂಚು

ಭಾರತಕ್ಕೆ 'ಸೂಪರ್' ಗೆಲುವು

ಸ್ಮೃತಿ ಮಂದಾನ

ಮುಂಬೈ: ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ನಡೆದ ಎರಡನೇ ಟಿ20 ಪಂದ್ಯವು ರೋಚಕ ಟೈ ಆಯಿತು. ಸೂಪರ್ ಓವರ್‌ನಲ್ಲಿ ಭಾರತ ಗೆದ್ದಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 1 ವಿಕೆಟ್‌ಗೆ 187 ರನ್ ಗಳಿಸಿತು. ಆತಿಥೇಯ ತಂಡವು 5 ವಿಕೆಟ್ ಕಳೆದುಕೊಂಡು 187 ರನ್ ಗಳಿಸಿ ಸಮಬಲ ಸಾಧಿಸಿತು.

ಇದರಿಂದ ವಿಜೇತರನ್ನು ನಿರ್ಣಯಿಸಲು ಸೂಪರ್ ಓವರ್ ಮೊರೆಹೋಗಲಾಯಿತು. ಸೂಪರ್ ಓವರ್‌ನಲ್ಲಿ ಭಾರತ 20 ರನ್ ಗಳಿಸಿದರೆ, ಇಂಗ್ಲೆಂಡ್ 16 ರನ್ ಗಳಿಸಲಷ್ಟೇ ಶಕ್ತವಾಯಿತು.

ಮಂದಾನ ಮಿಂಚು: ಇದಕ್ಕೂ ಮುನ್ನ ಸವಾಲಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (79; 49ಎ, 4X9, 6X4) ಮತ್ತು ಶಫಾಲಿ ವರ್ಮಾ (34; 23ಎ) ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 76 ರನ್ ಗಳಿಸಿದರು.

ನಾಯಕಿ ಹರ್ಮನ್‌ಪ್ರೀತ್ ಕೌರ್ 21 ರನ್ ಗಳಿಸಿ ನಿರ್ಗಮಿಸಿದರು. ಆದರೆ ಸ್ಮೃತಿ ಮಾತ್ರ ಹೋರಾಟ ಮುಂದುವರಿಸಿದರು. ಅವರಿಗೆ ರಿಚಾ ಘೋಷ್ ಉತ್ತಮ ಜೊತೆ ನೀಡಿದರು. ಸ್ಮೃತಿ ಕ್ರೀಸ್‌ನಲ್ಲಿ ಇರುವವರೆಗೂ ಆಸ್ಟ್ರೇಲಿಯಾದ ಬೌಲರ್‌ಗಳು ಒತ್ತಡದಲ್ಲಿದ್ದರು. ಆದರೆ, 17ನೇ ಓವರ್‌ನಲ್ಲಿ ಸ್ಮೃತಿ ವಿಕೆಟ್ ಗಳಿಸಿದ ಸದರ್ಲೆಂಡ್ ಆಸ್ಟ್ರೇಲಿಯಾ ಬಳಗದಲ್ಲಿ ಜಯದ ಆಸೆ ಚಿಗುರಿಸಿದರು. ದೀಪ್ತಿ ಶರ್ಮಾ ಕೂಡ ಎರಡು ರನ್ ಗಳಿಸಿ ಮರಳಿದರು.

ಇನ್ನೊಂದು ಬದಿಯಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಿದ ರಿಚಾ ನಾಲ್ಕು ಸಿಕ್ಸರ್ ಸಿಡಿಸಿದರು. ಇದರಿಂದಾಗಿ ಪಂದ್ಯವು ರೋಚಕ ಘಟ್ಟ ತಲುಪಿತು. ಕೊನೆಯ ಎರಡು ಎಸೆತಗಳಲ್ಲಿ ಭಾರತಕ್ಕೆ ಆರು ರನ್‌ಗಳ ಅಗತ್ಯವಿತ್ತು. ಕ್ರೀಸ್‌ನಲ್ಲಿದ್ದ ರಿಚಾ ಒಂದು ರನ್ ಗಳಿಸಿದರು.

ಕೊನೆಯ ಒಂದು ಎಸೆತದಲ್ಲಿ ಗೆಲುವಿಗೆ ಐದು ರನ್‌ಗಳ ಅಗತ್ಯವಿದ್ದಾಗ, ದೇವಿಕಾ ವೈದ್ಯ ಬೌಂಡರಿ ಬಾರಿಸಿದರು. ಪಂದ್ಯ 'ಟೈ' ಆಯಿತು.

ಮೊದಲ ಬ್ಯಾಟ್ ಮಾಡಿದ ಇಂಗ್ಲೆಂಡ್ ಪರ ಬೆತ್ ಮೂನಿ (ಔಟಾಗದೆ 82; 54ಎ, 4X13) ಹಾಗೂ ತಹಿಲಾ ಮೆಕ್‌ಗ್ರಾ (ಔಟಾಗದೆ 70; 51ಎ) ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 1 ವಿಕೆಟ್‌ಗೆ 187 (ಅಲೀಸಾ ಹೀಲಿ 25, ಬೆತ್ ಮೂನಿ ಔಟಾಗದೆ 82, ತಹೀಲಾ ಮೆಕ್‌ಗ್ರಾ ಔಟಾಗದೆ 70, ದೀಪ್ತಿ ಶರ್ಮಾ 31ಕ್ಕೆ1) ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 187 (ಸ್ಮೃತಿ ಮಂದಾನ 79, ಶಫಾಲಿ ವರ್ಮಾ 34, ಹರ್ಮನ್‌ಪ್ರೀತ್ ಕೌರ್ 21, ರಿಚಾ ಘೋಷ್ ಔಟಾಗದೆ 26, ದೇವಿಕಾ ವೈದ್ಯ ಔಟಾಗದೆ 11, ಹೀತರ್ ಗ್ರಹಾಂ 22ಕ್ಕೆ3) ಫಲಿತಾಂಶ: ಟೈ; ಸೂಪರ್ ಓವರ್‌ನಲ್ಲಿ ಭಾರತಕ್ಕೆ ಗೆಲುವು

ಮೊದಲ ಟೆಸ್ಟ್‌ಗೆ ರೋಹಿತ್ ಅಲಭ್ಯ

ಢಾಕಾ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಬಾಂಗ್ಲಾದೇಶದ ವಿರುದ್ಧ ಬುಧವಾರ ಆರಂಭವಾಗಲಿರುವ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಬದಲಿ ಆಟಗಾರನಾಗಿ ಅಭಿಮನ್ಯು ಈಶ್ವರನ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ರೋಹಿತ್ ಅನುಪಸ್ಥಿತಿಯಲ್ಲಿ ಕರ್ನಾಟಕದ ಬ್ಯಾಟರ್ ಕೆ.ಎಲ್. ರಾಹುಲ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

'ಬಾಂಗ್ಲಾದೇಶ ವಿರುದ್ಧದ ಎರಡನೇ ಏಕದಿನ ಪಂದ್ಯದ ವೇಳೆ ಹೆಬ್ಬೆರಳಿನ ಗಾಯಕ್ಕೆ ಒಳಗಾಗಿದ್ದ ರೋಹಿತ್ ಅವರು ತಜ್ಞ ವೈದ್ಯರನ್ನು ಕಾಣಲು ಮುಂಬೈಗೆ ತೆರಳಿದ್ದಾರೆ. ಗಾಯಕ್ಕೆ ಸೂಕ್ತ ಚಿಕಿತ್ಸೆ ಪಡೆಯುವಂತೆ ಅವರಿಗೆ ಸೂಚಿಸಲಾಗಿದೆ. ಎರಡನೇ ಟೆಸ್ಟ್‌ನಲ್ಲಿ ಅವರು ಆಡುವರೇ ಎಂಬುದನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು' ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ.

ಎರಡನೇ ಟೆಸ್ಟ್ ಪಂದ್ಯ ಮೀರ್‌ಪುರದಲ್ಲಿ ಡಿ.22 ರಿಂದ ಆರಂಭವಾಗಲಿದೆ.

ಪಾಕಿಸ್ತಾನದ ಇಮಾಮ್ ಉಲ್ ಹಕ್ ಹಾಗೂ ಸೌದ್ ಶಕೀಲ್ –ಎಪಿ/ಪಿಟಿಐ ಚಿತ್ರ

ಪಾಕ್‌ಗೆ ಇಮಾಮ್, ಶಕೀಲ್ ಭರವಸೆ

ಮುಲ್ತಾನ್ (ರಾಯಿಟರ್ಸ್): ಅರ್ಧಶತಕ ಗಳಿಸಿದ ಸೌದ್ ಶಕೀಲ್ ಹಾಗೂ ಇಮಾಮ್ ಉಲ್ ಹಕ್ ಅವರು ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಪಾಕಿಸ್ತಾನಕ್ಕೆ ಗೆಲುವಿನ ಭರವಸೆ ಮೂಡಿಸಿದ್ದಾರೆ.

ಮುಲ್ತಾನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ 355 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿರುವ ಪಾಕ್ ತಂಡವು ಮೂರನೇ ದಿನದಾಟದ ಅಂತ್ಯಕ್ಕೆ 64 ಓವರ್‌ಗಳಲ್ಲಿ 4ಕ್ಕೆ 198 ರನ್ ಗಳಿಸಿದೆ. ಶಕೀಲ್ (ಬ್ಯಾಟಿಂಗ್ 54; 123 ಎಸೆತ) ಮತ್ತು ಫಹೀಮ್ ಅಶ್ರಫ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ.

ಮೊಹಮ್ಮದ್ ರಿಜ್ವಾನ್ ಮತ್ತು ಅಬ್ದುಲ್ಲಾ ಶಫೀಕ್ ಮೊದಲ ವಿಕೆಟ್‌ಗೆ 66 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್ ಎಸೆತದಲ್ಲಿ ರಿಜ್ವಾನ್ ಕ್ಲೀನ್‌ಬೌಲ್ಡ್ ಆಗುವುದರೊಂದಿಗೆ ಜೊತೆಯಾಟ ಮುರಿಯಿತು.

ಶಕೀಲ್ ಮತ್ತು ಇಮಾಮ್ (60; 104ಎ, 4X7) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿಸಿದರು. ಇದರಿಂದಾಗಿ ಆತಿಥೇಯ ತಂಡದಲ್ಲಿ ಗೆಲುವಿನ ಆಸೆ ಚಿಗುರಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ 281, ಪಾಕಿಸ್ತಾನ: 202, ಎರಡನೇ ಇನಿಂಗ್ಸ್: ಇಂಗ್ಲೆಂಡ್ 275, ಪಾಕಿಸ್ತಾನ: 64 ಓವರ್‌ಗಳಲ್ಲಿ 4ಕ್ಕೆ198 (ಅಬ್ದುಲ್ಲಾ ಶಫೀಕ್ 45, ಮೊಹಮ್ಮದ್ ರಿಜ್ವಾನ್ 30, ಸೌದ್ ಶಕೀಲ್ ಬ್ಯಾಟಿಂಗ್ 54, ಇಮಾಮ್ ಉಲ್ ಹಕ್ 60)

ಕ್ರಿಕೆಟ್ ಟೆಸ್ಟ್: ಸರಣಿ ಗೆದ್ದ ಆಸ್ಟ್ರೇಲಿಯಾ

ಅಡಿಲೇಡ್ (ಎಪಿ): ಆತಿಥೇಯ ಆಸ್ಟ್ರೇಲಿಯಾದ ವೇಗದ ಬೌಲರ್‌ಗಳ ದಾಳಿಗೆ ವೆಸ್ಟ್ ಇಂಡೀಸ್ ತಂಡವು ಕುಸಿಯಿತು. ಇದರೊಂದಿಗೆ ಸ್ಟೀವನ್ ಸ್ಮಿತ್ ನಾಯಕತ್ವದ ಬಳಗವು ಇಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ 419 ರನ್‌ಗಳಿಂದ ಜಯಿಸಿತು. 2–0ಯಿಂದ ಸರಣಿಯನ್ನೂ ತನ್ನದಾಗಿಸಿಕೊಂಡಿತು.

495 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ವಿಂಡೀಸ್ ತಂಡವು ಪಂದ್ಯದ ಮೂರನೇ ದಿನವಾದ ಶನಿವಾರ ಅಂತ್ಯಕ್ಕೆ 4 ವಿಕೆಟ್‌ಗಳಿಗೆ 38 ರನ್ ಗಳಿಸಿತ್ತು. ಡೆವೊನ್ ಥಾಮಸ್ ಹಾಗೂ ಜೇಸನ್ ಹೋಲ್ಡರ್ ಕ್ರೀಸ್‌ನಲ್ಲಿದ್ದರು. ಆದರೆ ಭಾನುವಾರ ವಿಂಡೀಸ್ ತಂಡವು 39 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ಮಿಚೆಲ್ ಸ್ಟಾರ್ಕ್, ಮೈಕೆಲ್ ನೆಸರ್ ಹಾಗೂ ಸ್ಕಾಟ್ ಬೋಲಾಂಡ್ ತಲಾ ಮೂರು ವಿಕೆಟ್‌ಗಳನ್ನು ಗಳಿಸಿದರು.

ಪರ್ತ್‌ನಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯವನ್ನು ಆಸ್ಟ್ರೇಲಿಯಾ 164 ರನ್‌ಗಳಿಂದ ಜಯಿಸಿತ್ತು.

ಮುಂದಿನ ಶನಿವಾರದಿಂದ ಬ್ರಿಸ್ಬೇನ್‌ನಲ್ಲಿ ಆರಂಭವಾಗಲಿರುವ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 7ಕ್ಕೆ511 ಡಿಕ್ಲೇರ್ಡ್, ವೆಸ್ಟ್ ಇಂಡೀಸ್: 214, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 6ಕ್ಕೆ199 ಡಿಕ್ಲೇರ್ಡ್, ವೆಸ್ಟ್ ಇಂಡೀಸ್ 77(ತೇಜನಾರಾಯಣ ಚಂದ್ರಪಾಲ್ 17, ಜೋಶುವಾ ಡಿ ಸಿಲ್ವ 15, ರಾಸ್ಟನ್ ಚೇಸ್ 13, ಮಿಚೆಲ್ ಸ್ಟಾರ್ಕ್ 29ಕ್ಕೆ3, ಮೈಕೆಲ್ ನೆಸರ್ 22ಕ್ಕೆ3, ಸ್ಕಾಟ್ ಬೋಲಾಂಡ್ 16ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 419 ರನ್‌ಗಳ ಜಯ ಹಾಗೂ 2–0ಯಿಂದ ಸರಣಿ ಗೆಲುವು. ಪಂದ್ಯಶ್ರೇಷ್ಠ: ಟ್ರಾವಿಸ್ ಹೆಡ್, ಸರಣಿಶ್ರೇಷ್ಠ: ಮಾರ್ನಸ್ ಲಾಬುಷೇನ್.

ಸಂಕ್ಷಿಪ್ತ ಸುದ್ದಿ

ಕೋವಿಡ್: ಆಸ್ಪತ್ರೆ ಸೌಲಭ್ಯ ವೃದ್ಧಿಗೆ ಚೀನಾ ಸರ್ಕಾರದ ಕ್ರಮ

ಬೀಜಿಂಗ್ (ಎ.ಪಿ): ಕೋವಿಡ್ ಪ್ರಕರಣಗಳ ಗಣನೀಯ ಏರಿಕೆ ಹಿಂದೆಯೇ ಚಿಕಿತ್ಸೆ ಮತ್ತು ಆರೈಕೆ ಸೌಲಭ್ಯವನ್ನು ಇನ್ನಷ್ಟು ಬಲಪಡಿಸಲು ಚೀನಾ ಮುಂದಾಗಿದೆ.

ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ನೇತೃತ್ವದ ಸರ್ಕಾರ, ಜನರ ಪ್ರತಿಭಟನೆಯ ನಂತರ ಕ್ವಾರಂಟೈನ್ ಮತ್ತು ಸಂಚಾರದ ಮೇಲಿನ ನಿರ್ಬಂಧ ಸಡಿಲಿಕೆಯ ನಂತರವೂ ಸೋಂಕು ತಡೆಗೆ ಹೆಚ್ಚಿನ ಆದ್ಯತೆ ನೀಡಿದೆ.

ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳನ್ನು ಸಜ್ಜುಗೊಳಿಸಬೇಕು. ಸಿಬ್ಬಂದಿ ಸಂಖ್ಯೆ ಹೆಚ್ಚಿಸಬೇಕು ಎಂದು ಈಚೆಗೆ ನಡೆದ ಸಂಪುಟ ಸಭೆ ನಿರ್ಣಯಿಸಿದೆ. 65 ವರ್ಷ ಮೀರಿದ ನಾಗರಿಕರ ಆರೋಗ್ಯ ರಕ್ಷಣೆಗೆ ಒತ್ತು ನೀಡಲು ನಿರ್ಧರಿಸಿದೆ.

ಎಲ್ಲ ಸಿಬ್ಬಂದಿಗೂ ಸೋಂಕು ತಗುಲಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಬೀಜಿಂಗ್‌ನಲ್ಲಿ ಸೋಂಕು ಪತ್ತೆ ತಪಾಸಣಾ ಕೇಂದ್ರವನ್ನು ಮುಚ್ಚಲಾಗಿದೆ ಎಂದು ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ.

ಅಂಕಿ ಅಂಶದ ಪ್ರಕಾರ, ಭಾನುವಾರ 10,815 ಹೊಸ ಪ್ರಕರಣಗಳು ವರದಿಯಾಗಿವೆ. ಈ ಪೈಕಿ 8,477 ಪ್ರಕರಣಗಳಲ್ಲಿ ರೋಗಲಕ್ಷಣಗಳಿಲ್ಲ. ಕಳೆದ ಪಾಕ್ಷಿಕದಲ್ಲಿ ಸರಾಸರಿ 40 ಸಾವಿರ ಪ್ರಕರಣ ವರದಿಯಾಗುತ್ತಿದ್ದು, ಈಗ ತುಸು ಕಡಿಮೆ ಆಗಿದೆ.

ಚೀನಾದ ಅಧಿಕೃತ ಪ್ರಕರಣಗಳ ಸಂಖ್ಯೆ ಈಗ 363,072 ಆಗಿದೆ. ಈ ಪೈಕಿ ಶೇ 50ರಷ್ಟು ಪ್ರಕರಣಗಳು ಅಕ್ಟೋಬರ್ 1ರ ನಂತರ ವರದಿಯಾದ ಪ್ರಕರಣಗಳಾಗಿವೆ. ನಿರ್ಬಂಧ ಕ್ರಮಗಳ ವಿರುದ್ಧ ಈಚೆಗೆ ನಾಗರಿಕರು ತೀವ್ರ ಪ್ರತಿಭಟನೆ ನಡೆಸಿದ್ದರು.

4 ವರ್ಷದ ಬಳಿಕ ಪಾಕ್‌ಗೆ ಮಾಜಿ ಪ್ರಧಾನಿ ಪುತ್ರ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಶೆಹಬಾಜ್ ಷರೀಫ್ ಅವರ ಪುತ್ರ, ಲಂಡನ್‌ನಲ್ಲಿ ತಲೆಮರೆಸಿಕೊಂಡಿದ್ದ ಸುಲೇಮಾನ್ ಶೆಹಬಾಜ್ ಅವರು 4 ವರ್ಷದ ನಂತರ ತಾಯ್ನಾಡಿಗೆ ಮರಳಿದ್ದು, ಭ್ರಷ್ಟಾಚಾರ ಪ್ರಕರಣದ ವಿಚಾರಣೆ ಎದುರಿಸಲಿದ್ದಾರೆ.

ಸುಲೇಮಾನ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ ಎಫ್‌ಐಎ 2018ರಲ್ಲಿ ಪ್ರಕರಣ ದಾಖಲಿಸಿದ್ದು, ಅಂದಿನಿಂದ ಕುಟುಂಬ ಸದಸ್ಯರೊಂದಿಗೆ ಲಂಡನ್‌ನಲ್ಲಿ ವಾಸವಿದ್ದಾರೆ. ಅವರು ಕೆಲ ವಿಚಾರಣೆ ಬಳಿಕ ಪಾಕಿಸ್ತಾನ ತೊರೆದಿದ್ದರು.

ಅಫ್ಗನ್–ಪಾಕ್ ಗಡಿಯಲ್ಲಿ ಗುಂಡಿನ ದಾಳಿ: 6 ಸಾವು

ಇಸ್ಲಾಮಾಬಾದ್ (ಪಿಟಿಐ): ಅಫ್ಗಾನಿಸ್ತಾನದ ಗಡಿ ಭದ್ರತಾ ಪಡೆಯ ಯೋಧರು ನಡೆಸಿದ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ಕನಿಷ್ಠ ಆರು ನಾಗರಿಕರು ಮೃತಪಟ್ಟಿದ್ದು, ಇತರೆ 17 ಮಂದಿ ಗಾಯಗೊಂಡಿದ್ದಾರೆ. ಬಲೂಚಿಸ್ತಾನದ ಚಮನ್ ಜಿಲ್ಲೆ ಗಡಿಯಲ್ಲಿ ಘಟನೆ ನಡೆದಿದೆ.

ಸೇನೆಯ ಮಾಧ್ಯಮ ವಿಭಾಗದ ಮಾಹಿತಿ ಪ್ರಕಾರ, ಅಫ್ಗನ್ ಪಡೆಯು ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಬಳಸಿದ್ದಾರೆ. ಅಪ್ರಚೋದಿತವಾಗಿ, ಮನಸೋ ಇಚ್ಛೆ ದಾಳಿ ನಡೆಸಲಾಗಿದೆ.

ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಣಾತ್ಮಕ ಕ್ರಮವಾಗಿ ಪಾಕಿಸ್ತಾನ ಗಡಿ ಭದ್ರತಾ ಪಡೆಯ ಯೋಧರು ಪ್ರತಿಯಾಗಿ ಗುಂಡಿನ ದಾಳಿ ನಡೆಸಿದರು ಎಂದು ಹೇಳಿಕೆ ತಿಳಿಸಿದೆ. ಗುಂಡಿನ ದಾಳಿಗೆ ನಿಖರ ಕಾರಣ ತಕ್ಷಣಕ್ಕೆ ಗೊತ್ತಾಗಿಲ್ಲ.

ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ನಡುವೆ 2,600 ಕಿ.ಮೀ.ನಷ್ಟು ಗಡಿ ಇದೆ. ಕಳೆದ ತಿಂಗಳು ಕುರ್ರಂ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಎಂಟು ಜನರು ಮೃತಪಟ್ಟಿದ್ದರು.

ಕ್ಷಿಪಣಿ ದಾಳಿಯಿಂದ ಕೆರ್ಸಾನ್‌ನಲ್ಲಿ ಕಟ್ಟಡ ಜಖಂಗೊಂಡಿರುವುದು –ಸಂಗ್ರಹ ಚಿತ್ರ

ಸಹಜ ಸ್ಥಿತಿಗೆ ಮರಳದ ಕೆರ್ಸಾನ್

ಕೆರ್ಸಾನ್ (ಎಪಿ): ಉಕ್ರೇನ್‌ನಲ್ಲಿ ಸ್ವಾಧೀನ ಪಡೆದಿದ್ದ ಕೆರ್ಸಾನ್ ಮತ್ತು ಸುತ್ತಮುತ್ತಲ ಪ್ರದೇಶಗಳಿಂದ ರಷ್ಯಾ ತನ್ನ ಸೇನೆ ಹಿಂಪಡೆದು ಭಾನುವಾರಕ್ಕೆ 1 ತಿಂಗಳು ಪೂರ್ಣಗೊಂಡಿದೆ. ಆದಾಗ್ಯೂ ಜನಜೀವನ ಸಹಜಸ್ಥಿತಿಗೆ ಮರಳಿಲ್ಲ.

8 ತಿಂಗಳಿಗೂ ಹೆಚ್ಚು ಕಾಲ ರಷ್ಯಾ ವಶದಲ್ಲಿದ್ದ ಈ ನಗರದಲ್ಲಿ ಸ್ಫೋಟಕಗಳು, ಕುಸಿದು ಬಿದ್ದ ಮನೆಗಳ ಅವಶೇಷಗಳು, ಯುದ್ಧದ ಕುರುಹುಗಳು ಉಳಿದಿವೆ. ಇವುಗಳ ತೆರವು ಕಾರ್ಯ ಪ್ರಗತಿಯಲ್ಲಿದೆ. ಇನ್ನೊಂದೆಡೆ, ನಗರದ ಮೇಲೆ ರಷ್ಯಾ ಮತ್ತೆ ದಾಳಿಯನ್ನು ಆರಂಭಿಸಿದೆ.

ಒಂದು ತಿಂಗಳಿನಿಂದ ನಡೆದ ಕ್ಷಿಪಣಿ ದಾಳಿಯಿಂದಾಗಿ 41 ಮಂದಿ ಮೃತಪಟ್ಟಿದ್ದಾರೆ ಮತ್ತು 96 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಸ್ಥಳೀಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಶುಕ್ರವಾರ ಒಂದೇ ದಿನ ರಷ್ಯಾ ಪಡೆ 68 ಬಾರಿ ರಾಕೆಟ್, ಕ್ಷಿಪಣಿ ದಾಳಿ ನಡೆಸಿದೆ. ಒಂದು ತಿಂಗಳಲ್ಲಿ 5,500 ಜನರು ಬೇರೆಬೇರೆ ಸ್ಥಳಗಳಿಗೆ ತೆರಳಿದ್ದಾರೆ. 190 ಕಿ.ಮೀ ಉದ್ದದ ರೈಲು ಮಾರ್ಗವನ್ನು ಸಿಬ್ಬಂದಿ ಮುಕ್ತಗೊಳಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕೆರ್ಸಾನ್ ನಗರವು ಕೃಷಿ ಕೇಂದ್ರಿತ ಪ್ರದೇಶವಾಗಿದೆ. ಗೋಧಿ, ಟೊಮೆಟೊ, ಕಲ್ಲಂಗಡಿ ಹಣ್ಣು ಇಲ್ಲಿ ಪ್ರಮುಖ ಮತ್ತು ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಆದರೆ ರಷ್ಯಾ ದಾಳಿಯ ಬಳಿಕ ಶೇ 30ರಷ್ಟು ಪ್ರದೇಶ ಕೃಷಿ ಚಟುವಟಿಕೆಗೆ ಪೂರಕವಾಗಿಲ್ಲ. ನಗರದ ಬಹುತೇಕ ಭಾಗಗಳಿಗೆ ನೀರಿನ ಸಂಪರ್ಕ ಮರಳಿ ನೀಡಲಾಗಿದೆ, ಆದರೆ ವಿದ್ಯುತ್ ಸಂಪರ್ಕ ವ್ಯವಸ್ಥೆ ಇನ್ನೂ ಸಮರ್ಪಕಗೊಂಡಿಲ್ಲ.

'ಅನುಕೂಲತೆ ಆಧರಿಸಿ ಉಗ್ರರ ವರ್ಗೀಕರಣ ಬೇಡ'

ವಿಶ್ವಸಂಸ್ಥೆ (ಪಿಟಿಐ): ಭಯೋತ್ಪಾದಕರನ್ನು ರಾಜಕೀಯ ಅನುಕೂಲತೆಗಳ ಆಧಾರದಲ್ಲಿ 'ಕೆಟ್ಟವನು', 'ಒಳ್ಳೆಯವನು' ಎಂದು ವರ್ಗೀಕರಿಸುವ ಪ್ರವೃತ್ತಿ ತಕ್ಷಣದಿಂದ ಅಂತ್ಯಗೊಳ್ಳಬೇಕು ಎಂದು ಭಾರತವು ಪ್ರತಿಪಾದಿಸಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಚರ್ಚೆಗೆ ಈ ಅಡಕವುಳ್ಳ ಪತ್ರವನ್ನು ಬರೆದಿದ್ದು, 'ಧಾರ್ಮಿಕ ಅಥವಾ ಸಿದ್ಧಾಂತಗಳ ಆಧಾರದಲ್ಲಿ ಭಯೋತ್ಪಾದಕರನ್ನು ವರ್ಗೀಕರಿಸಿದಲ್ಲಿ ಉಗ್ರರ ವಿರುದ್ಧ ಹೋರಾಡುವ ಜಾಗತಿಕ ಬದ್ಧತೆಯೇ ಮರೆಯಾಗಲಿದೆ' ಎಂದಿದೆ.

ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸಿಕೊಂಡಿರುವ ಭಾರತ, ಭಯೋತ್ಪಾದನೆಯನ್ನು ತಡೆಯುವ ಕುರಿತ ಚರ್ಚೆಗಾಗಿ ಎರಡು ಪ್ರಮುಖ ಸಭೆಗಳನ್ನು ಡಿ.14, 15ರಂದು ನಡೆಸಲಿದೆ. ಸಭೆಯ ಅಧ್ಯಕ್ಷತೆಯನ್ನು ವಿದೇಶಾಂಗ ಸಚಿವ ಎಸ್.ಜೈಶಂಕರ್ ವಹಿಸುವರು.

'ಜಾಗತಿಕವಾಗಿ ಭಯೋತ್ಪಾದನೆಗೆ ತಡೆ: ಚಿಂತನೆ ಮತ್ತು ಭವಿಷ್ಯದ ಹಾದಿ' ವಿಷಯ ಕುರಿತಂತೆ ಡಿ.15ರಂದು ವಿವರ ನೀಡಲಿದೆ. ಈ ಸಭೆಗೆ ಪೂರ್ವಭಾವಿಯಾಗಿ ವಿಶ್ವಸಂಸ್ಥೆ ರಾಯಭಾರ ಕಚೇರಿ ಭಾರತದ ಶಾಶ್ವತ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು, ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಅವರಿಗೆ ಪತ್ರ ಬರೆದಿದ್ದಾರೆ. ಸಭೆಯಲ್ಲಿ ಚರ್ಚೆಗೆ ಪೂರಕ ಮಾಹಿತಿ ಇದಾಗಿದೆ ಎಂದಿದ್ದಾರೆ.

ಸೆ. 11, 2001ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಕೃತ್ಯವು, ಜಾಗತಿಕವಾಗಿ ಈ ಪಿಡುಗು ತಡೆಯಲು ಹೊಸ ಚಿಂತನೆಗೆ ನಾಂದಿ ಹಾಡಿತು. ಆ ನಂತರ ಲಂಡನ್, ಮುಂಬೈ, ಪ್ಯಾರಿಸ್ ಸೇರಿ ಹಲವೆಡೆ ಉಗ್ರರ ದಾಳಿಗಳು ನಡೆದಿವೆ ಎಂದು ಉಲ್ಲೇಖಿಸಲಾಗಿದೆ.

ಈ ದಾಳಿಗಳು ವಿಶ್ವದಾದ್ಯಂತ ಶಾಂತಿ ಮತ್ತು ಭದ್ರತೆಗೆ ಪ್ರತಿಕೂಲ ಪರಿಣಾಮಗಳನ್ನು ಬೀರಿದೆ, ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುತ್ತವೆ. ಈಗ ಭಯೋತ್ಪಾದಕರ ಸ್ವರೂಪವೂ ಬದಲಾಗಿದೆ. ಕಾರ್ಯವ್ಯಾಪ್ತಿ ವಿಸ್ತರಿಸಿದೆ. ಯಾವುದೇ ಸ್ಥಳದಲ್ಲಿ ಕೃತ್ಯ ಎಸಗುವಂತೆ ಬೆಂಬಲಿಗರು, ಆರ್ಥಿಕ ನೆರವು ನೀಡುವವರು ಇದ್ದಾರೆ. ಇದನ್ನು ಎದುರಿಸಲು ಸಂಘಟಿತವಾದ ಯತ್ನ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದೆ.

ಪೂರ್ವಭಾವಿ ಮಾಹಿತಿ ನೀಡುವ ಉನ್ನತ ಮಟ್ಟದ ಸಭೆಯು ಸದಸ್ಯ ರಾಷ್ಟ್ರಗಳು, ಅಕ್ಟೋಬರ್ ತಿಂಗಳಲ್ಲಿ ಮುಂಬೈ, ದೆಹಲಿಯಲ್ಲಿ ನಡೆದಿದ್ದ ಭಯೋತ್ಪಾದನೆ ವಿರೋಧಿ ಸಮಿತಿ ಸಭೆಯ ಅಂಶಗಳ ಕುರಿತು ವಿಸ್ತೃತ ಚರ್ಚೆಗೂ ವೇದಿಕೆಯಾಗಲಿದೆ ಎನ್ನಲಾಗಿದೆ.

ಐಎಸ್‌ಎಲ್: ಬಿಎಫ್‌ಸಿಗೆ ನಿರಾಸೆ

ಕೊಚ್ಚಿ: ಬೆಂಗಳೂರು ಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು.

ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ 3–2 ಗೋಲುಗಳಿಂದ ಬಿಎಫ್‌ಸಿ ತಂಡವನ್ನು ಮಣಿಸಿತು.

ತುರುಸಿನ ಹೋರಾಟ ನಡೆದ ಪಂದ್ಯದಲ್ಲಿ ಮಾರ್ಕೊ ಲೆಸ್ಕೋವಿಚ್ (25ನೇ ನಿ.), ದಿಮಿತ್ರೊಸ್ ಡೈಮಂತಕೊಸ್ (43ನೇ ನಿ.) ಮತ್ತು ಅಪೊಸ್ಟೊಲೊಸ್ ಗಿಯಾನೌ (70ನೇ ನಿ.) ಅವರು ಬ್ಲಾಸ್ಟರ್ಸ್ ಪರ ಗೋಲು ಗಳಿಸಿದರು.

ಬಿಎಫ್‌ಸಿ ಪರ ಸುನಿಲ್ ಚೆಟ್ರಿ 14ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಿದರೆ, ಜಾವಿ ಹೆರ್ನಾಂಡೆಸ್ 81ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು.

1964ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಿದ್ದ ವೇಗದ ಓಟಗಾರ

ಅಥ್ಲೆಟಿಕ್ ಕ್ಷೇತ್ರದ 'ಜಂಟಲ್‌ಮನ್ ಸ್ಪ್ರಿಂಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ಹಾಗೂ 1970ರ ಏಷ್ಯನ್ ಕ್ರೀಡಾಕೂಟದ 4X100 ಮೀ. ರಿಲೇನಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತ ತಂಡದ ಸದಸ್ಯರಾಗಿದ್ದ ಕೆನೆತ್ ಪೊವೆಲ್ ಅವರು ಅಥ್ಲೆಟಿಕ್ಸ್ ವಲಯದಲ್ಲಿ 'ದಿ ಜಂಟಲ್‌ಮನ್ ಸ್ಪ್ರಿಂಟರ್' ಎಂದೇ ಜನಪ್ರಿಯರಾಗಿದ್ದರು.

1960ರ ದಶಕದಲ್ಲಿ ದೇಶದ ಮುಂಚೂಣಿಯ ವೇಗದ ಓಟಗಾರರಲ್ಲಿ ಒಬ್ಬರೆನಿಸಿಕೊಂಡಿದ್ದರಲ್ಲದೆ, 1964ರ ಟೋಕಿಯೊ ಒಲಿಂಪಿಕ್ಸ್‌ನ 100ಮೀ., 200 ಮೀ. ಓಟ ಮತ್ತು 4X100 ಮೀ. ರಿಲೇನಲ್ಲಿ ಸ್ಪರ್ಧಿಸಿದ್ದರು.

ಟೋಕಿಯೊದಲ್ಲಿ 4X100 ಮೀ. ರಿಲೇನಲ್ಲಿ ಕೆನೆತ್ ಪೊವೆಲ್, ಆಂಥೋಣಿ ಫ್ರಾನ್ಸಿಸ್ ಕುಟಿನೊ, ಮಖಾನ್ ಸಿಂಗ್ ಮತ್ತು ರಾಜಶೇಖರನ್ ಪಿಚಾಯ ಅವರನ್ನೊಳಗೊಂಡ ಭಾರತ ತಂಡ ಸೆಮಿಫೈನಲ್ ಪ್ರವೇಶಿಸಿತ್ತು.

ಕೆನೆತ್ ಪೊವೆಲ್

1962 ಮತ್ತು 1966ರ ಏಷ್ಯನ್ ಕ್ರೀಡಾಕೂಟಕ್ಕೆ ಭಾರತ ತಂಡದಲ್ಲಿ ಅವರಿಗೆ ಸ್ಥಾನ ಲಭಿಸಿರಲಿಲ್ಲ. ಆದರೆ 1970ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಂಡಿದ್ದರಲ್ಲದೆ 4X100 ಮೀ. ರಿಲೇನಲ್ಲಿ ಭಾರತಕ್ಕೆ ಮೂರನೇ ಸ್ಥಾನ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕೆನೆತ್ ಪೊವೆಲ್ ನಿಧನ

ಬೆಂಗಳೂರು: ದೇಶ ಕಂಡಂತಹ ಶ್ರೇಷ್ಠ ಅಥ್ಲೀಟ್‌ಗಳಲ್ಲಿ ಒಬ್ಬರಾದ ಕೆನೆತ್ ಪೊವೆಲ್ (82) ಅವರು ಭಾನುವಾರ ಬೆಳಿಗ್ಗೆ ಇಲ್ಲಿ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒ.ಎಲ್.ಥಾಮಸ್, ಎ.ಪಿ. ರಾಮಸ್ವಾಮಿ, ರಮೇಶ್ ತಾವ್ಡೆ ಮತ್ತು ಪೊವೆಲ್ ಅವರಿದ್ದ ತಂಡ 40.9 ಸೆ.ಗಳಲ್ಲಿ ಗುರಿ ತಲುಪಿತ್ತು. ಈ ಸ್ಪರ್ಧೆಯಲ್ಲಿ ಥಾಯ್ಲೆಂಡ್ (40.4 ಸೆ.) ಮತ್ತು ಜಪಾನ್ (40.7 ಸೆ.) ತಂಡಗಳು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದ್ದವು.

1940ರ ಏಪ್ರಿಲ್ 20 ರಂದು ಕೋಲಾರದಲ್ಲಿ ಜನಿಸಿದ ಅವರು 1957ರಲ್ಲಿ ಕೋಲ್ಕತ್ತದಲ್ಲಿ ನಡೆದಿದ್ದ ರಾಷ್ಟ್ರೀಯ ಶಾಲಾ ಕ್ರೀಡಾಕೂಟದಲ್ಲಿ ಗಮನಾರ್ಹ ಪ್ರದರ್ಶನ ನೀಡಿ ಮುನ್ನಲೆಗೆ ಬಂದಿದ್ದರು.

ತಮ್ಮ 19ನೇ ವಯಸ್ಸಿನಲ್ಲಿ ಬೆಂಗಳೂರಿಗೆ ವಾಸ ಬದಲಿಸಿದ ಬಳಿಕ ಅಥ್ಲೆಟಿಕ್ಸ್‌ಅನ್ನು ಗಂಭೀರವಾಗಿ ತೆಗೆದುಕೊಂಡಿದ್ದರು. ರೇಂಜರ್ಸ್ ಕ್ಲಬ್‌ನಲ್ಲಿ ಕೃಷ್ಣ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು, ವೇಗದ ಓಟಗಾರನಾಗಿ ರೂಪುಗೊಂಡಿದ್ದರು. 1963 ರಲ್ಲಿ ಅಲಹಾಬಾದ್‌ನಲ್ಲಿ ನಡೆದಿದ್ದ ಚೊಚ್ಚಲ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ 'ಸ್ಪ್ರಿಂಟ್ ಡಬಲ್' ಸಾಧನೆ ಮಾಡಿದ್ದರು. 100 ಮೀ. ಓಟವನ್ನು 10.8 ಸೆ. ಹಾಗೂ 200 ಮೀ. ಓಟವನ್ನು 22 ಸೆ.ಗಳಲ್ಲಿ ಪೂರೈಸಿದ್ದರು.

ಅಥ್ಲೆಟಿಕ್ಸ್‌ನಿಂದ ನಿವೃತ್ತಿಯಾದ ಬಳಿಕ ಹ್ಯಾಂಡ್‌ಬಾಲ್ ಆಟದಲ್ಲಿ ತಮ್ಮ ಸಾಮರ್ಥ್ಯ ತೋರಿದ್ದರು. ರಾಷ್ಟ್ರೀಯ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಮತ್ತು ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲೂ ಅವರು ಭಾಗವಹಿಸಿದ್ದಾರೆ.

1965 ರಲ್ಲಿ ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದ ಅವರು ಈ ಗೌರವಕ್ಕೆ ಪಾತ್ರರಾದ ರಾಜ್ಯದ ಮೊದಲ ಕ್ರೀಡಾಪಟು ಎನಿಸಿಕೊಂಡಿದ್ದರು. ಕರ್ನಾಟಕ ಸರ್ಕಾರ 2018 ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.

ಪೊವೆಲ್ ನಿಧನಕ್ಕೆ ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ಎಎಫ್‌ಐ ಸಂತಾಪ ಸೂಚಿಸಿದೆ.

ಟಿಟಿ: ಅಥರ್ವ, ದೇಶ್ನಾಗೆ ಪ್ರಶಸ್ತಿ

ಬೆಂಗಳೂರು: ದೇಶ್ನಾ ಎಂ.ವಂಶಿಕಾ ಮತ್ತು ಅಥರ್ವ ನವರಂಗೆ ಅವರು ಸಿವಿಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 15 ವರ್ಷದೊಳಗಿನ ಬಾಲಕಿಯರ ಮತ್ತು ಬಾಲಕರ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ಮಲ್ಲೇಶ್ವರಂ ಕೆನರಾ ಯೂನಿಯನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಬಿಎನ್‌ಎಂನ ದೇಶ್ನಾ 11–9, 11–4, 4–11, 8–11, 11–4, 11–6 ರಲ್ಲಿ ಡಬ್ಲ್ಯುಸಿಟಿಟಿಸಿಯ ಸಹನಾ ಎಚ್. ಮೂರ್ತಿ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ದೇಶ್ನಾ ಅವರು ತೃಪ್ತಿ ಪುರೋಹಿತ್ ವಿರುದ್ಧವೂ, ಸಹನಾ ಅವರು ಹಿಮಾಂಶಿ ಚೌಧರಿ ಎದುರೂ ಗೆಲುವು ಪಡೆದಿದ್ದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಸ್ಕೈಸ್ ಅಕಾಡೆಮಿಯ ಅಥರ್ವ 9–11, 11–5, 11–5, 11-8, 11-6 ರಲ್ಲಿ ಸಿದ್ಧಾಂತ್ ವಾಸನ್ ಅವರನ್ನು ಸೋಲಿಸಿದರು.

SHOWROOMS: KARNATAKA: BENGALURU: RENAULT Bannerghatta Road Mob: +91 9289220872, RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. TUMKUR: RENAULT Tumkur Mob: +91 8527234251.

TVS CREDIT | IDFC FIRST Bank ALWAYS YOU FIRST | L&T Financial Services Two-wheeler Finance | TATA CAPITAL Two Wheeler Loans | HDFC BANK We understand your world

FOR ALL INSTITUTIONAL/BULK REQUIREMENTS PLEASE MAIL corporatecustomersupport@tvsmotor.com ಅಧಿಕೃತ ಮುಖ್ಯ ವಿತರಕರು: ಬೆಂಗಳೂರು: ಜಯನಗರ: ಭಾರತ್ ಟಿವಿಎಸ್ ದೂ: 8971572817, ರಾಜಾಜಿನಗರ: ಬ್ರಿಡ್ಜ್‌ಸ್ಟೋನ್ ಟಿವಿಎಸ್ ದೂ: 8971624526, ನಾಗರಭಾವಿ: ಗ್ಲೋಬಲ್ 7619375566, ಮಹಾಲಕ್ಷ್ಮಿ ಲೇಔಟ್: ಗ್ಲೋಬಲ್ ಟಿವಿಎಸ್ ದೂ: 7619265566, ದೊಮ್ಮಲೂರು: ಪಿ.ಆರ್.ಎನ್ ಟಿವಿಎಸ್ ದೂ: 6366936909, ಹಲಸೂರು: ಪಿ.ಆರ್.ಎನ್ ಟಿವಿಎಸ್ ದೂ: 6366936931, ಚಾಮರಾಜಪೇಟೆ: ಪಿ.ಆರ್.ಎನ್ ಟಿವಿಎಸ್ ದೂ: 6366936922, ಕೋರಮಂಗಲ: ಎನ್.ಆರ್.ಜಿ.ಸಿ ಟಿವಿಎಸ್ ದೂ: 9900860960, ಹೆಬ್ಬಗೋಡಿ: ಬೆಂಗಳೂರು ಟಿವಿಎಸ್ ದೂ: 8151095959/ 080–41141555, ಹರಲೂರು: ಬೆಂಗಳೂರು ಟಿವಿಎಸ್ ದೂ: 8494959555/ 8970859555, ಬನಶಂಕರಿ: ಸಿನರ್ಜಿ ಟಿವಿಎಸ್ ದೂ: 8792499451, ಕನಕಪುರ ರಸ್ತೆ: ಧನ್‌ಚರಣ್ ಟಿವಿಎಸ್ ದೂ: 9916183232, ಜಾಲಹಳ್ಳಿ ಕ್ರಾಸ್; ಪ್ರಕೃತಿ ಟಿವಿಎಸ್ ದೂ: 917814508304, ಗಂಗಾನಗರ; ಪ್ರಕೃತಿ ಟಿವಿಎಸ್ ದೂ: 7814508304, ಭದ್ರಪ್ಪ ಲೇಔಟ್: ಪ್ರಕೃತಿ ಟಿವಿಎಸ್ ದೂ: 7814508304, ಕಲ್ಯಾಣ ನಗರ: ಪಿ.ಆರ್.ಎನ್ ಟಿವಿಎಸ್ ದೂ: 6366936908, ಬೊಮ್ಮನಹಳ್ಳಿ: ಅರುಣಗಿರಿ ಟಿವಿಎಸ್ ದೂ: 8971593945, ಹೆಚ್.ಎಸ್.ಆರ್ ಲೇಔಟ್: ಕುಬೇರ ಟಿವಿಎಸ್ ದೂ: 8971601956, ಬೆಳ್ಳಂದೂರು: ಇಂಡಿಯನ್ ಟಿವಿಎಸ್ ದೂ: 9900500123, ಬನ್ನೇರುಘಟ್ಟ ರೋಡ್: ನಿಯೋ ಟಿವಿಎಸ್ ದೂ: 8971628452, ಮಾರತಹಳ್ಳಿ: ತ್ರಿಜಲ್ ಟಿವಿಎಸ್ ದೂ: 8971599450, ವೈಟ್‌ಫೀಲ್ಡ್: ತ್ರಿಜಲ್ ಟಿವಿಎಸ್ ದೂ: 8971598119, ಯಲಹಂಕ: ಹೇಮಂತ್ ಟಿವಿಎಸ್ ದೂ: 9740180379, ವಿದ್ಯಾರಣ್ಯಪುರ; ಹೇಮಂತ್ ಟಿವಿಎಸ್ ದೂ; 9740180379, ದೊಡ್ಡಬಳ್ಳಾಪುರ; ಹೇಮಂತ್ ಟಿವಿಎಸ್ ದೂ; 9740180379, ರಾಜರಾಜೇಶ್ವರಿ ನಗರ: ಸೋಲಾರ್ ಟಿವಿಎಸ್ ದೂ: 9066032272, ಕೆಂಗೇರಿ; ಸೋಲಾರ್ ಟಿವಿಎಸ್ ದೂ: 9066032272, ಕೃಷ್ಣಾರಾಜಪುರಂ: ಸುರ್ಯಪ್ರತಾಪ್ ಟಿವಿಎಸ್ ದೂ: 9870327108, ಥಣಿಸಂದ್ರ: ಸುರ್ಯಪ್ರತಾಪ್ ಟಿವಿಎಸ್ ದೂ: 9986716999/9449847671, ಟಿನ್ ಫ್ಯಾಕ್ಟರಿ: ಡಿಂಪಲ್ ಟಿವಿಎಸ್ ದೂ: 8147117435 / 36, ಅತ್ತಿಬೆಲೆ: ಬಾಲಕೃಷ್ಣ ಟಿವಿಎಸ್ ದೂ: 8971703849, ಜಿಗಣಿ: ಶ್ರೀ ಬಾಲಾಜಿ ಟಿವಿಎಸ್ ದೂ: 9845762549, ಹೊಸಕೋಟೆ: ನಿತಿನ್ ಟಿವಿಎಸ್ ದೂ: 7811021081, ನೆಲಮಂಗಲ: ನವಯುಗ್ ಟಿವಿಎಸ್ ದೂ: 8971630975, ಕನಕಪುರ: ಅಂಜನಾದ್ರಿ ಟಿವಿಎಸ್ ದೂ: 9066064491, ರಾಮನಗರ: ಸಮರ್ಥ ಟಿವಿಎಸ್ ದೂ: 9066064383, ಕೋಲಾರ; ಸರವಣ ಟಿವಿಎಸ್ ದೂ: 8971676986, ಕೆ.ಜಿ.ಎಫ್; ಸರವಣ ಟಿವಿಎಸ್ ದೂ: 9066064490, ಚಿಂತಾಮಣಿ; ಬಾಲಾಜಿ ಟಿವಿಎಸ್ ದೂ: 9066064551, ಚಿಕ್ಕಬಳ್ಳಾಪುರ; ಮಾರುತಿ ಟಿವಿಎಸ್ ದೂ: 9870327133, ತುಮಕೂರು: ಶ್ರೀ ಬಾಲಾಜಿ ಟಿವಿಎಸ್ ದೂ: 8971657342, ತುಮಕೂರು: ಶ್ರೀಗಿರಿ ಟಿವಿಎಸ್ ದೂ: 8971657691, ತಿಪಟೂರು: ನಿಕಿತ ಟಿವಿಎಸ್ ದೂ: 8971675903, ಹಾಸನ; ಶ್ರೀ ಕೃಷ್ಣ ಟಿವಿಎಸ್ 7814925655, (ಬ್ರಾಂಚ್) ಜಯ್‌ನಗರ: ಶ್ರೀ ಕೃಷ್ಣಾ ಟಿವಿಎಸ್, ದೂ: 7829928314,

McCann/Blr/Tvs/930/12/22